ಕೊಲ್ಲುತಾನೆ. ಆಗ "ಹಕ್ಕಿಗಳ ಬವಣೆಯ, ದೈನ್ಯದ, ಕಡುಸವಿಯಿಂಚರ ಕೊರೆಯಿತು ನನ್ನೆದೆಯ."ಸ್ವಲ್ಪ ಸಮಯದ ಹಿಂದೆ ಖಗಗಾನ ಕೇಳಿ ಅನಂದಿಸಿದ ಕವಿ ಈಗ "ಖಗಗಳಗಾನದೊಳಿನಿತಳಲಿದ್ದುದ"ನ್ನು ಅರಿತು ವಿಷಾದಿಸುತ್ತಾನೆ.

ಪು. ತಿ. ನ. ಪೌರಾಣಿಕ ಪ್ರಜ್ಞೆಯುಳ್ಳವರು. ಕವಿ ನಿಸಾರ್ ಅಹಮದರು ಹೇಳಿದಂತೆ, "ಪು. ತಿ. ನ. ಬಿಡಿಗವನ, ಪ್ರಭಂದ, ಗೀತನಾಟಕ, ಅಷ್ಟೇಕೆ ಮಹಾಕಾವ್ಯ ಹರಿಚರಿತೆಯಲ್ಲಿ ಕೂಡ ವಸ್ತುವಿನಿಂದ ಹಿಡಿದು ಉಪಮೆ ರೂಪಕ ಪ್ರತಿಮೆಗಳನ್ನು ಪುರಾಣಗಳಿಂದ ಯಥೇಚ್ಚವಾಗಿ ಬಳಸಿಕೊಂಡಿದ್ದಾರೆ. ಸದ್ಯದ ಸಂಗತಿಗಳನ್ನು ನಿರೂಪಿಸುವಾಗಲೂ ಪೌರಾಣಿಕ ಪ್ರತೀಕಗಳನ್ನು ಲಗತ್ತಿಸಿ ಹೊಸ ಶೋಭೆ, ಅರ್ಥವಂತಿಕೆಗಳನ್ನು ತರುತ್ತಾರೆ." ಈ ಮಾತುಗಳಿಗೆ ಸಾಕ್ಷಿಯಾಗಿದೆ "ಮಳೆಯು ನಾಡ ತೊಯ್ಯುತಿರೆ" ಎಂಬ ಕವನ. ಗುಡುಗು, ಸಿಡಿಲು, ಮಿಂಚುಗಳೊಡನೆ ಮಳೆ ಸುರಿಯುತ್ತಿರುವ ರಾತ್ರಿ ಶ್ರೀ ಕೃಷ್ಣ ಜನ್ಮತಾಳಿದ ರಾತ್ರಿಯನ್ನು ನೆನಪಿಸುತ್ತದೆ ಕವಿಗೆ. ಶ್ರೀ ಕೃಷ್ಣನ ಬಾಲಲೀಲೆಗಳು ಕವಿಯ ಮನದಲ್ಲಿ ಚಲನ ಚಿತ್ರದಂತೆ ಸುಳಿದು ರಂಜಿಸುತ್ತವೆ. ಆ ಪೌರಾಣಿಕ ಘಟನೆಗಳನ್ನು "ನೆನೆಯಲೆಷ್ಟು ಮೋದವು!" ಆದರೆ ಅವು "ಇಂದು ಬರಿಯ ನೆನಪದು! ಕವಿಯು ಕಾಂಬ ಕನಸದು!" ಆ ಪೌರಾಣಿಕ ಘಟನೆಗಳನ್ನು ನೆನೆಸಿಕೊಂಡಾಗ "ಮುದವು ಮೊಳೆತು ನಮೆವುದು, ಸುಯ್ಯಲೊಂದ ತರುವುದು ಇಂದು ನಮ್ಮ ಬಾಳು ಗೋಳು, ಬಯಲು ಹುಸಿಯು ಎನಿಪುದು."

ಭವದ ಸುಖಗಳನ್ನೆಲ್ಲ ಅನುಭವಿಸಿ ಭ್ರಮನಿರಸನಗೊಂಡ ಸಿದ್ಧಾರ್ಥ ಮಾನವರ ದುಃಖದ ನೆಲೆಯನ್ನರಸುತ್ತ ಹೋಗಿ ಬುದ್ಧನಾಗುವುದನ್ನು ವಿಶದಪಡಿಸುವ ಕವನ "ಬುದ್ಧ". ವಿರಕ್ತಿಯ ಬೆಂಕಿಯಲ್ಲಿ ಬೇಂದ್ರೆಯವರು ಹೇಳಿದಂತೆ "ಮಡದಿ, ಮನೆ, ರಾಜ್ಯ ಗೀಜ್ಯ ಹೊತ್ತಿರುವ ಉರಿಯಲ್ಲಿ ಅಯಿತಾಜ್ಯ." ಅವನು ಆದ್ಯಾತ್ಮ ಚಿಂತನೆಯಲ್ಲಿ ಮುಳುಗಿ ಹಂತಹಂತವಾಗಿ ಮೇಲೇರಿ ಹೋಗಿ ನಿರ್ವಾಣ ಸ್ಥಿತಿಯನ್ನು ತಲುಪಿದಾಗ ಹಿಂಗಿತಾ "ಭವಕ್ರಾಂತಿ: ಸೋವಿಲ್ಲ, ಸಾವಿಲ್ಲ, ಏನಿಲ್ಲ: ಶೂನ್ಯ-ಶಾಂತಿ."

ನವೋದಯ ಕಾವ್ಯ ಇನ್ನೂ ಕಣ್ತೆರೆಯುತ್ತಿದ್ದ ಕಾಲದಲ್ಲಿ ರಚನೆಗೊಂಡ "ಹಣತೆ"ಯ ಕವನಗಳು ಜಿ. ಆರ್. ಎನ್. ಗೌಡರ ಹೇಳಿಕೆಯಂತೆ, "ವಸ್ತುವಿನಲ್ಲಿ, ಭಾವದಲ್ಲಿ, ಛಂದಸ್ಸಿನಲ್ಲಿ ವೈವಿಧ್ಯವನ್ನು ಪಡೆದು ವಿಶಿಷ್ಟತೆಯನ್ನು ಕಾಪಾಡಿಕೊಂಡಿವೆ....ಅತಿ ಸಾಮಾನ್ಯತೆಯಲ್ಲಿ ಅಸಾಮಾನ್ಯತೆಯನ್ನು ಕಾಣುವುದು ಅವರ ವೈಶಿಷ್ಟ್ಯ. ಪೌರಾಣಿಕ ಪ್ರಜ್ಞೆ, ಪ್ರಕೃತಿ ಪ್ರೇಮ, ನಿರ್ಲಿಪ್ತ ವೈಚಾರಿಕತೆ, ತಾತ್ವಿಕತೆ- ಇವು ಅವರ ಕವಿತೆಗಳಲ್ಲಿನ ಸೊಬಗು."

ಕವಿ ನಿಸಾರ್ ಅಹಮದರ ಹೇಳಿಕೆಯಂತೆ, "ಸಾಹಿತ್ಯದ ಹಲವು ಮುಖ್ಯ ಪ್ರಕಾರಗಳಲ್ಲಿ ಗಮನಾರ್ಹ ಕೃತಿಗಳನ್ನು ರಚಿಸಿರುವ ಪು. ತಿ. ನ. ಈಚೆಗೆ 'ಹರಿಚರಿತೆ' ಎಂಬ ಹೆಸರಿನ ಮಹಾಕಾವ್ಯವನ್ನು ಬರೆದಿದ್ದಾರೆ. ಪ್ರಬಂಧ ಹಾಗು ಗೀತ ರೂಪಕ ಕ್ಷೇತ್ರಗಳಲ್ಲಂತೂ ಅವರ ವೈಶಿಷ್ಟ್ಯ ಅಪೂರ್ವ, ಅದ್ವಿತೀಯ. ಅವರ ಕಾವ್ಯದಲ್ಲಿ ಛಂದೋವಿಲಾಸ ಹಾಗೂ ಸಂಗೀತದ ವಿವಿದ ಪ್ರಯೋಗಗಳನ್ನು ಕಂಡು ತನ್ಮಯತೆಯನ್ನು ಅನುಭವಿಸುತ್ತೇವೆ."

ವಿವಿದ ಸಾಹಿತ್ಯ ಪ್ರಕಾರಗಳಲ್ಲಿ ಯಶಸ್ಸು ಗಳಿಸಿದ ಪು. ತಿ. ನ. ಕಾದಂಬರಿಯನ್ನು ಏಕೆ ಬರೆಯಲಿಲ್ಲ? ಎನ್ನುವ ಸಂದೇಹ, ಆಶ್ಚರ್ಯ ಹಲವರನ್ನು ಕಾಡಿದೆ. ಅದಕ್ಕೆ ಅವರು ನೀಡಿರುವ ಕಾರಣ ಇದು: "ನಾನು ಸ್ವಭಾವತಃ ಅಂತರ್ಮುಖಿ. ಭಾವದ ಒಂದು ತೀವ್ರತೆಯ ಕಾವಿನಲ್ಲಿ, ಉತ್ಕಟ ಮನಃಸ್ಥಿತಿಯಲ್ಲಿ ನನ್ನ ಬರವಣಿಗೆ ಮುಂದುವರಿಯಬಲ್ಲದು. ಭವದ, ಅಂದರೆ, ಲೌಕಿಕ ಭೂಮಿಕೆಯ ಉಪಶಮನಕ್ಕಾಗಿ ಶಾಂತಿ, ಸಮಾಧಾನ, ಸ್ವಾಸ್ಥ್ಯಗಳು ಮನಸ್ಸಿಗೆ ಲಭ್ಯವಾಗಬೇಕೆಂಬ ಅಶಯ ನನ್ನ ಲೇಖನ ವ್ಯವಸಾಯದ ಮೂಲದಲ್ಲಿವೆ. ಕೇವಲ ಲೌಕಿಕವೆನ್ನಿಸುವ ಸಂಗತಿಗಳನ್ನು ವಾಸ್ತವ ದೃಷ್ಟಿಯಿಂದ ವಿವರಪೂರ್ಣವಾಗಿ ನಾನು ಬರೆಯಲಾರೆ....ಕೆಲವು ಸಾಲುಗಳಲ್ಲಿ ತೀವ್ರತರವಾಗಿ ಹೇಳಬಹುದಾದ ಸತ್ಯವನ್ನು ಪುಟಗಟ್ಟಲೆ ಬರೆಯಲು ನನ್ನ ಮನಸೊಪ್ಪದು! "

"ಹಣತೆ" ಸಂಕಲನದಲ್ಲಿರುವ ಆಧ್ಯಾತ್ಮ ಚಿಂತನೆಯನ್ನೊಳಗೊಂಡ ಸೊಗಸಾದ ಛಂದೋಬದ್ಧ ಕವನಗಳಿಂದ ಹಾಗೂ ಭವ್ಯವಾದ ಸಂಗೀತ ರೂಪಕಗಳಿಂದ ಕನ್ನಡಿಗರನ್ನು ರಂಜಿಸಿ, ಸಂತೋಷಪಡಿಸುತ್ತ ಬಂದಿರುವ ಪು. ತಿ. ನ. ಅವರಿಗೆ ಕಾದಂಬರಿ ಬರೆಯುವ ಅವಶ್ಯಕತೆ ಕಾಣದಿದ್ದು ಆಶ್ಚರ್ಯವೇನಲ್ಲ!

## ಆಧಾರ ಲೇಖನಗಳು:


*೧. ಕೆ.ಎಸ್. ನಿಸಾರ್ ಅಹಮದ್. ಬದುಕು, ಸಾಹಿತ್ಯ ಕುರಿತಂತೆ ಡಾ. ಪು. ತಿ. ನ. ಅಚ್ಚುಮೆಚ್ಚು ಪುಟ ೩೮೮-೪೦೨. ಪ್ರೇಮಸಾಯಿ ಪ್ರಕಾಶನ.*

*೨. ಕೆ. ಅರ್. ನಂಜುಂಡೇ ಗೌಡ. ಹಣತೆ ಪುಟ ೧೩೨-೧೪೭. ಯದುಗಿರಿ. ಪು. ತಿ. ನ. ಅಭಿನಂದನ ಗ್ರಂಥ. ಡಿ. ವಿ. ಕೆ. ಮೂರ್ತಿ, ಪ್ರಕಾಶಕರು.*



*(ಈ ಲೇಖನ ಬರೆಯುವಾಗ ಅನೇಕ ವಿಧಗಳಲ್ಲಿ ನೆರವು ನೀಡಿ ಸಹಕರಿಸಿದ ಎಚ್. ವೈ. ರಾಜಗೋಪಾಲರಿಗೆ ನನ್ನ ಹಾರ್ದಿಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ.)*




# ಕುಪರ್ಟೀನೊ, ಕ್ಯಾಲಿಫೋರ್ನಿಯ


ಕಪ್ಪಿನಿಯ*

ಕುಪರ್ಟೀನೊ, ಕ್ಯಾಲಿಫೋರ್ನಿಯ, krishnapri_AT_member.ams.org




ಮನೆ ಮುಂದೆ ಲಂಟಾನ, ಮನೆ ಹಿಂದೆ ಕಣಿಗಿಲೆ
ಪಕ್ಕದ ಮನೆಯಲ್ಲಿ ಸೊಂಪಾದ ದಾಳಂಬರಿಯ ಕೆಂಪು ಹೂವು, ಹಣ್ಣು
ರಸ್ತೆಯಲ್ಲೊಂದೆರಡು ಹೆಜ್ಜೆ ನಡೆದರೆ ಬಾದಾಮಿ ಮರ
ಕೆಳಗೆಲ್ಲ ಬಿದ್ದಿರುವ ಬೀಜವನ್ನು ಕಲ್ಲಲ್ಲಿ ಕುಟ್ಟಿ ತಿಂದರೆ ಕಹಿ ಅಂದರೆ ಕಹಿ
ಇದೇನಿದು ಬೆಂಗಳೂರೋ, ಮೈಸೂರೋ, ಹಾಸನವೋ ಎಂದುಕೊಳ್ಳುತ್ತಿರುವಾಗ . . .

ಅಡಿಗೆಯ ಮನೆಯ ದೊಡ್ಡ ಗಾಜಿನ ಕಿಟಕಿಯಾಚೆ
ಹಿಂದೆ ಯಾವಾಗಲೋ ಮೇಜಿನ ಕೆಳಗೆ ಕುಳಿತು ಓದಿದ್ದ
ಯುದ್ಧದ ನಂತರದ ಸುವಾಸನೆಯ ಕಾಗದದ ಮೇಲೆ ಇಂಗ್ಲೆಂಡಿನಲ್ಲಿ ಪ್ರಕಟವಾಗಿ
ಹೇಗೋ, ದೊಡ್ಡವರೊಬ್ಬರ ಆಶೀರ್ವಾದದ ಜೊತೆ ಕೈಗೆ ಬಂದಿದ್ದ
ಪ್ರಪಂಚದ ಎಲ್ಲಾ ಕಡೆಯ ಅದ್ಭುತ ಚಿತ್ರವಿಚಿತ್ರಗಳನ್ನದರ ರೊಟ್ಟಿನ ಮಧ್ಯದಲ್ಲಿಟ್ಟುಕೊಂಡಿದ್ದ
ಪುಸ್ತಕದ ಪುಟದಿಂದ ಹಾರಿ ಬಂದ ಹಮಿಂಗ್ಬರ್ಡು
ಹೂವಿನ ಮೇಲೆ ಗಾಳಿಯಲ್ಲೇ ನಿಂತದರ ರಸವನ್ನು ಹೀರುತ್ತಿತ್ತು

*ಕಪಿನಯ್ಯ ಅಲ್ಲ

## ಹೋಮೋನಿಮ್ಮುಗಳು

(ಪ್ರಭು ಮೂರ್ತಿ)

ನಿನ್ನ ಅರಿ(ಶತ್ರು)ಗಳನ್ನು ಅರಿ(ತಿಳಿ).
ಮೇಲಿರುವ ವಾಕ್ಯದ ಎರಡು ಖಾಲೀ ಜಾಗಗಳಲ್ಲಿ ಒಂದೇ ಪದವನ್ನು ಹಾಕಿ ಆ ವಾಕ್ಯವನ್ನು ಪೂರ್ತಿಗೊಳಿಸಲಾಗಿದೆ. ಹಾಗೆಯೇ ಈ ವಾಕ್ಯಗಳನ್ನೂ ಪೂರ್ತಿಗೊಳಿಸಬಲ್ಲಿರಾ?

೧. ____ ಮತ್ತು ಮೇಕೆಗಳೊಡನೆ ____.
೨. ____ಯಾದ ಮನಸ್ಸಿನಿಂದ ಸೂಕ್ಷ್ಮವನ್ನು ____.
೩. ನನ್ನ ____ಗಾಗಿ ಈ ಉಡುಗೊರೆಯನ್ನು ____.
೪. ____, ಜೋಡಿ ಹಕ್ಕಿಯಲೊಂದನು ನೀ ಕೊಲ____.
೫. ಸೋರುತಿದೆ ಮನೆಯ ____. ಅದನ್ನು ರಿಪೇರಿ ____.
೬. ____ದ್ದದ ಮಲ್ಲಿಗೆಯ ಹಾರವನ್ನು ____.
೭. ____ಯ ಅಂಚಿನಲಿ ರವಿಯ ಕಿರಣಗಳು ____ಯುತ್ತಿದ್ದವು.

ಉತ್ತರಗಳು:

[illegible]

# ಈ ಅಭಿಸಾರವೆನಿತು ಲೇಸಾಯ್ತು

## (ಪು.ತಿ.ನ. ಸಂಗೀತದ ಬಗ್ಗೆ ಕೆಲವು ಅನಿಸಿಕೆಗಳು)

**ಎಚ್. ವೈ. ರಾಜಗೋಪಾಲ್**

ಮಿಡಿಯ, ಪೆನ್ಸಿಲ್ವೇನಿಯ, *hyr1195_AT_aol.com*

*"ನಮ್ಮ ಶುದ್ಧ ಸಂಗೀತದಲ್ಲಿ ಗತಸ್ವಪ್ನವಿದೆ, ಭಾವಜಾಗ್ರತಿ ಇಲ್ಲ...ಈ ಕಾಲದ ಬಾಳನೋಟ ಬೇರೆ, ಭಾವದೋಟ ಬೇರೆ. ಇದಕ್ಕೆ ಬೇರೆ ಸ್ವರಮೇಳ ಬೇಕು. ಬೇರೆ ತಾನ ಬೇಕು, ಬೇರೆ ಲಯ ಬೇಕು."*

*==ಪುತಿನ*

ಪುತಿನರವರ ಸಂಗೀತವನ್ನು ಬಹುಕಾಲದಿಂದ ಕೇಳಿ, ಒಟ್ಟಿನಲ್ಲಿ ಸಂಗೀತದ ಬಗ್ಗೆ, ತಮ್ಮ ಕೃತಿಗಳ ಬಗ್ಗೆ ಅವರು ಹೇಳಿರುವುದನ್ನು ಓದಿ, ಕೇಳಿ, ಅವುಗಳ ವಿಚಾರದಲ್ಲಿ ಅವರ ನಿಲುವು, ಆಲೋಚನೆ ಹೇಗಿತ್ತು ಎಂಬುದನ್ನು ನನ್ನ ಮಟ್ಟಕ್ಕೆ ನಿಲುಕುವಷ್ಟು ಅರ್ಥಮಾಡಿಕೊಂಡು ಅದನ್ನಿಲ್ಲಿ ನಿಮ್ಮೊಂದಿಗೆ ಪ್ರಸ್ತಾಪಿಸುತ್ತಿದ್ದೇನೆ. ಇಲ್ಲಿ ನಾನು ಹೇಳುವುದು ವೈಯುಕ್ತಿಕವಾಗಿ ಯಾವೊಬ್ಬ ಗಾಯಕ ಗಾಯಕಿಯನ್ನೂ ಉದ್ದೇಶಿಸಿದ್ದಲ್ಲ ಎಂದು ಮೊದಲಿಗೇ ನಿಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ.

ಪುತಿನರವರ 'ಗೋಕುಲ ನಿರ್ಗಮನ'ದ ಹೆಗ್ಗಳಿಕೆ ಅದೊಂದು ಉತ್ತಮ ಗೇಯನಾಟಕ ಎಂದು ಮಾತ್ರವೇ ಅಲ್ಲ, ಅದು ಅವರ ಸಂಗೀತದರ್ಶನಕ್ಕೆ ಒಂದು ಕೈಗನ್ನಡಿ ಕೂಡ. ಅದರ ಮೊದಲ ದೃಶ್ಯದಲ್ಲಿ ಕೃಷ್ಣನ ಕೊಳಲನ್ನು ಕೇಳಿ ಅಕ್ರೂರ ಹೀಗೆಂದುಕೊಳ್ಳುತ್ತಾನೆ:

*ನಂದಗೋಪನ ಮನೆಯ ತೂಗುಮಂಚದಮೇಲೆ*
*ನಿದ್ದೆಮೇಲುದುವಾತ್ಮ ಹೊದೆಯಲಿರೆ ಇನಿಯಳ್*
*ಮುಟ್ಟಿ ಬಾ ಎನುವಂತೆ ಈ ಕೊಳಲು ಕಿವಿಗೊಳಲು*
*ಬಂದೆನೀ ಅಭಿಸಾರವೆನಿತು ಲೇಸಾಯ್ತು*

ಕೃಷ್ಣನ ದಿವ್ಯವಾದ ಕೊಳಲ ನಾದ ಮಲಗಿದ್ದವನನ್ನು ಎಚ್ಚರಿಸಿ ಇನಿಯಳು ಮೈ ಮುಟ್ಟಿ ಬಾ ಎನ್ನುವಂತೆ ಅವನನ್ನು ತನ್ನ ಅಭಿಸಾರಿಕೆಯಲ್ಲಿ ತೊಡಗಿಸಿದೆ. ಕವಿ ಪುತಿನ ಅ ಸಂಗೀತದ ದಿವ್ಯಕ್ಕೆ ಮನತೆತ್ತವರು, ಅದನ್ನು ಅರಸಿ ಹೋದವರು, ಎದೆತುಂಬಿಕೊಂಡವರು, ಅದನ್ನು ತಾವೂ ಸವಿದು ಇತರರಿಗೂ ಹಂಚಿಕೊಟ್ಟವರು.

ಕನ್ನಡ ನವೋದಯ ಕವಿತ್ರಯರಾದ ಕುವೆಂಪು, ಬೇಂದ್ರೆ ಮತ್ತು ಪುತಿನ ಇವರ ರಚನೆಗಳಲ್ಲಿ ಸಂಗೀತದ ಪ್ರಭಾವ ಎದ್ದು ಕಾಣುವುದು ಬೇಂದ್ರೆ ಮತ್ತು ಪುತಿನ ಅವರಲ್ಲಿ. ಕುವೆಂಪು ಅವರಿಗೆ ಸಂಗೀತದ ಪರಿಚಯವಿರಲಿಲ್ಲ ಎಂದಲ್ಲ, ಅವರೂ ತಮ್ಮ ಎಷ್ಟೋ ಕವಿತೆಗಳನ್ನು ಹಾಡಿಕೊಂಡೇ ಬರೆಯುತ್ತಿದ್ದರು ಎಂದು ತೇಜಸ್ವಿ ಹೇಳುತ್ತಾರೆ ತಮ್ಮ 'ಅಣ್ಣನ ನೆನಪು' ಪುಸ್ತಕದಲ್ಲಿ. ಆದರೆ ಅವರ ಗೀತ ಪದ್ಯಗಳು ಇವರಿಬ್ಬರ ಗೀತ ಪದ್ಯಗಳಂತೆ ಸಂಗೀತವನ್ನು ಇಷ್ಟು ಸಾವಯವವಾಗಿ ಈ ಉನ್ನತ ಮಟ್ಟದಲ್ಲಿ ಮೈಗೂಡಿಸಿಕೊಂಡಂತೆ ಕಾಣುವುದಿಲ್ಲ. ಬೇಂದ್ರೆಯವರ ಸಂಗೀತದ ನೆಲೆಗಟ್ಟು ಜಾನಪದ ಶೈಲಿಯದು. ಅವರ ಸಂಗೀತ ಆಪಾತಮಧುರ - ಕೇಳಿದೊಡನೆ ಮೋಹಗೊಳಿಸುವಂಥದ್ದು. ಆದರೆ ಪುತಿನ ಅವರದು ಪರಿಷ್ಕೃತವಾದ ಶಾಸ್ತ್ರೀಯವಾದದ್ದು. ಅವರಿಗೆ ಅದರಲ್ಲಿ ಅಪೂರ್ವವಾದ ಕೇಳ್ಮೆ, ಗ್ರಹಿಕೆ, ಅನುಭವ, ಅಂತರ್ದೃಷ್ಟಿ, ಸೃಜನಶೀಲತೆ. ಆದರೆ ಶಾಸ್ತ್ರೀಯ ಸಂಗೀತವೇ ಸಂಗೀತ, ಉಳಿದದ್ದು ಸಂಗೀತವಲ್ಲ ಎನ್ನುವ ಮಡಿ ಮನೋಭಾವ ಅವರದಲ್ಲ. ಗೋಕುಲ ನಿರ್ಗಮನದ ಪ್ರಸ್ತಾವನೆಯಲ್ಲಿ ಹೇಗೆ ಒಬ್ಬ ಗೊಲ್ಲ ಹುಡುಗ ನುಡಿಸಿದ ಕೊಳಲು ಅವರನ್ನು ಭ್ರಾಂತಗೊಳಿಸಿ, ಅವರಲ್ಲಿ ಹಿಂದೆ ಯಾವ ಶಾಸ್ತ್ರೀಯ ಸಂಗೀತವೂ ಕಾಣಿಸದಿದ್ದ ಕಣಸನ್ನು ಎಬ್ಬಿಸಿ, ಅವರನ್ನು ಬೃಂದಾವನದಲ್ಲಿ ಬಿಟ್ಟುಹೋಯಿತು ಎಂದು ತಿಳಿಸಿದ್ದಾರೆ. ಅವರು ಅದು ಕೊಟ್ಟುಹೋದ ಭಾವಸ್ಫೂರ್ತಿಯಲ್ಲಿ ಆ ಗೇಯನಾಟಕದ ಎಲ್ಲ ಹಾಡುಗಳನ್ನೂ ರಚಿಸಿದರು. ಎಷ್ಟೋ ಹಾಡುಗಳನ್ನು ಹಾಡಿಕೊಂಡೇ ಬರೆದೆ ಎನ್ನುತ್ತಾರೆ. ರಾಗಗಳು, ರಚನೆಗಳು ನವೀನವೂ, ಕಾಂತಿಯುತವೂ ಆಗಿದ್ದವು ಎನ್ನುತ್ತಾರೆ. ಇನ್ನೊಂದು ಕಡೆ ಅವರು ತಮ್ಮ ನಿಲುವನ್ನು ಈ ರೀತಿ ಸ್ಪಷ್ಟಪಡಿಸಿದ್ದಾರೆ: "ನಮ್ಮ ಶುದ್ಧ ಸಂಗೀತದಲ್ಲಿ ಗತಸ್ವಪ್ನವಿದೆ, ಭಾವಜಾಗ್ರತಿ ಇಲ್ಲ...ಈ ಕಾಲದ ಬಾಳನೋಟ ಬೇರೆ, ಭಾವದೋಟ ಬೇರೆ. ಇದಕ್ಕೆ ಬೇರೆ ಸ್ವರಮೇಳ ಬೇಕು. ಬೇರೆ ತಾನ ಬೇಕು, ಬೇರೆ ಲಯ ಬೇಕು."

ಆಚಾರ್ಯರು ತಮ್ಮ ಹಾಡುಗಳಿಗೆ ಸ್ವತಃ ತಾವೇ ಸ್ವರಸಂಯೋಜನೆ ಮಾಡಿದ್ದರೂ ಅವಕ್ಕೆ ಸಂಗೀತ ಲಿಪಿಯಲ್ಲಿ ಸ್ವರಪ್ರಸ್ತಾರ ಬರೆದಿಡುವ ಶಿಕ್ಷಣ ಅವರಿಗಿರಲಿಲ್ಲ. ಸಂಗೀತವನ್ನು ಅವರು ಸಂಪ್ರದಾಯದ ರೀತಿಯಲ್ಲಿ, ಗುರುಮುಖೇನ ಕಲಿತವರಲ್ಲ. ಆದರೆ ಅವರದ್ದು ಒಬ್ಬ ಉತ್ತಮ ವಾಗ್ಗೇಯಕಾರನ ಮನೋಧರ್ಮ. ಜನಜನಿತ ರಾಗಗಳನ್ನು ಹೊಸ ಹೊಳಪಿನಲ್ಲಿ ಕಾಣಬಲ್ಲರು, ಅವಕ್ಕೆ ಹೊಸ ತಿರುವುಗಳನ್ನು ಕೊಡಬಲ್ಲರು, ಕಾಂತಿ ಲೇಪಿಸಬಲ್ಲರು, ಹೊಸ ರಾಗಗಳನ್ನು ಕಲ್ಪಿಸಬಲ್ಲರು. ವೀಣೆ ದೊರೆಸ್ವಾಮಿ ಅಯ್ಯಂಗಾರರು ಆಚಾರ್ಯರ ಸ್ವತಂತ್ರ ಮನೋಧರ್ಮವನ್ನು ಕೊಂಡಾಡುತ್ತ, "ಶಾಸ್ತ್ರದ ಜಾಡಿನ ಜಾಲದಲ್ಲಿ ಸಿಕ್ಕಿಕೊಂಡು ಸಂಪ್ರದಾಯಕ್ಕೆ ಶರಣು ಬಿದ್ದಿದ್ದರೆ, ಪ್ರಾಯಶಃ ಅವರು ತಮ್ಮದೇ ಆದ ಹೊಸ ದಾರಿಯನ್ನು ಹಿಡಿದು ರಮಣೀಯವಾದ ಕಲ್ಪನಾವಿಹಾರಗಳನ್ನು ನಿರ್ಮಿಸಲು ಸಾಧ್ಯವಾಗುತ್ತಿತ್ತೋ ಇಲ್ಲವೋ ಹೇಳಬರುವುದಿಲ್ಲ" ಎನ್ನುತ್ತಾರೆ. ಆಚಾರ್ಯರ ಸಂಗೀತಜ್ಞಾನ ಎಷ್ಟು ಆಳವಾದದ್ದು, ಅಸಾಧಾರಣವಾದದ್ದು, ವಿಶಿಷ್ಟವಾದದ್ದು ಎಂಬುದಕ್ಕೆ ಎಂ. ಎಲ್. ವಿ., ಸೆಮ್ಮಂಗುಡಿ, ಬಾಲಮುರಳಿಕೃಷ್ಣ ಮುಂತಾದ ಹಲವಾರು ದೊಡ್ಡ ಸಂಗೀತಗಾರರು ಅವರ ಬಗ್ಗೆ ಹೇಳಿರುವ ಮಾತುಗಳು ಸಾಕ್ಷಿಯಾಗಿವೆ. ಬಿ. ವಿ. ಕೆ. ಶಾಸ್ತ್ರಿಯವರು ಪುತಿನರ ಬಗ್ಗೆ ಬರೆದಿರುವ 'ಕಾವ್ಯ-ಸಂಗೀತಗಳ ಸುಂದರ ಸಮನ್ವಯಕಾರ' ಎಂಬ ಲೇಖನದಲ್ಲಿ ಆ ಬಗ್ಗೆ ಹಲವಾರು ಪ್ರಸಂಗಗಳನ್ನು ಎತ್ತಿ ಹೇಳಿದ್ದಾರೆ.

ಶಾಸ್ತ್ರಿಯವರು ಹೇಳುವ ಒಂದು ಪ್ರಸಂಗ: ಒಮ್ಮೆ ತಾವು ದೊರೆಸ್ವಾಮಿ ಐಯ್ಯಂಗಾರರನ್ನು ಕಾಣಲು ಹೋಗಿದ್ದಾಗ ಅಲ್ಲೇ ಇದ್ದ ಆಚಾರ್ಯರು ಐಯ್ಯಂಗಾರರನ್ನು ಕುರಿತು "ಬಹಳ ದಿವಸ ಆಯಿತು ಕೇಳಿ. ಸ್ವಲ್ಪ ಮೈಸೂರು ತೋಡಿ ನುಡಿಸಿ" ಎಂದರಂತೆ. ಶಾಸ್ತ್ರಿಯವರು ಎನ್ನುತ್ತಾರೆ: "ನನಗೆ ಸ್ವಲ್ಪ ಆಶ್ಚರ್ಯವೇ ಆಯಿತು. ಮೈಸೂರು ಮಲ್ಲಿಗೆ ಕೇಳಿದೀವಿ, ಮೈಸೂರು ಪಾಕ್ ಕೇಳಿದೀವಿ, ಮೈಸೂರು ಬೋಂಡ ಹೆಸರು ಕೇಳಿದೀವಿ. ಆದರೆ 'ಮೈಸೂರು ತೋಡಿ?' ಇದು ವಿಚಿತ್ರ ಬೇಡಿಕೆ ಎನಿಸಿತು." ಆಮೇಲೆ ಅಯ್ಯಂಗಾರರು ಶಾಸ್ತ್ರಿಯವರಿಗೆ ಅದನ್ನು ಸಂಗೀತದ ಪರಿಭಾಷೆಯಲ್ಲಿ ವಿವರಿಸಿದರಂತೆ. ತಮಿಳುನಾಡಿನ ಪ್ರಭಾವ ನಮ್ಮ ಮೇಲೆ ಈಗ ಎಷ್ಟು ಅತಿಯಾಗಿದೆಯೆಂದರೆ, ನಮ್ಮ ಸಾರು, ಹುಳಿಗಳು ರಸಂ, ಸಾಂಬಾರ್ ಆಗಿವೆ. ಸಂಗೀತದಲ್ಲಿ, ಭರತನಾಟ್ಯದಲ್ಲಿ ಮೈಸೂರು ಶೈಲಿ ಎಂಬುದೊಂದಿತ್ತು ಎಂಬುದೇ ನಮ್ಮಲ್ಲಿ ಅನೇಕರಿಗೆ ಗೊತ್ತಿಲ್ಲ. ಹಳೆಯ ಮೈಸೂರು ಸಂಸ್ಥಾನ ಸಂಗೀತ ಮತ್ತಿತರ ಕಲೆಗಳಿಗೆ ಒಂದು ದೊಡ್ಡ ಆಶ್ರಯವಾಗಿತ್ತು ಎಂಬುದನ್ನು ಮರೆತಿದ್ದೇವೆ.

ತಮ್ಮ ಸಂಗೀತ, ಸಾಹಿತ್ಯ ಹೇಗೆ ಜೊತೆಜೊತೆಯಾಗಿ ಬರುತ್ತವೆ ಎಂದು ಪುತಿನ ಹೇಳಿರುವುದು ಬಹಳ ಮನೋಜ್ಞವಾಗಿದೆ: "ಮನಸ್ಸು ಒಂದು ಲಹರಿಯಲ್ಲಿದ್ದಾಗ ಸಂಗೀತ ಸ್ವರಗಳು ಅದಕ್ಕೆ ಬಂದು ಮುತ್ತಿಕೊಳ್ಳುತ್ತವೆ. ಅವು ನಾನು ಹಿಂದೆ ಕೇಳಿದ ದಿವ್ಯ ಗಾನಗಳ ಪುನಃಸ್ಮರಣೆಯಲ್ಲ. ಎಂದೂ ಕೇಳಿಲ್ಲದಂತೆ ತೋರುವ ಸ್ವರಸಾಂಗತ್ಯಗಳು. ನಡುರಾತ್ರಿಯ ಮೌನದಲ್ಲಿ ಇವು ನನ್ನ ಕರ್ಣಾಕಾಶದಲ್ಲಿ ಸ್ಪಷ್ಟವಾಗಿ ಕೆಲವು ವೇಳೆ ಥಳಥಳನೆ ಹೊಳೆದಿವೆ. ಎದ್ದು ಅವನ್ನು ಹಿಡಿದಿಡಲು ನಾನು ಮಾತುಗಳನ್ನು ಬೀಸಿರುವುದುಂಟು. ಧಾತು ಮತ್ತು ಮಾತುಗಳ ಜೋಡಣೆಯಿಂದಲ್ಲವೆ ಗೀತಗಳು ಜನಿಸುವುದು? ಮಾತು - ಮೋಡ. ಸ್ವರಗಳು ಅದರಲ್ಲಿ ಸುಳಿದಾಡುವ ಮಿಂಚುಗಳು. ಮಾತು - ಬಲೆ. ಸ್ವರಗಳು ಅದರಲ್ಲಿ ಸಿಕ್ಕಿಕೊಳ್ಳುವ ಹಕ್ಕಿಗಳು." ಆ ಬಲೆಯಲ್ಲಿ ಸಿಕ್ಕಿಬಿದ್ದ ಎಷ್ಟೋ ಹಕ್ಕಿಗಳು ಮತ್ತೆ ಹಾರಿಹೋಗಿರಲೂ ಸಾಧ್ಯ.

ಮೊಟ್ಟಮೊದಲಿಗೆ ಅವರ ಗೋಕುಲ ನಿರ್ಗಮನ ಮತ್ತು ಅಹಲ್ಯೆ ರೂಪಕಗಳ - ಮುಖ್ಯವಾಗಿ ಗೋಕುಲ ನಿರ್ಗಮನದ, ಗೀತಗಳನ್ನು ಅವರಿಂದಲೇ ನೇರವಾಗಿ ಕಲಿತು, ಅವುಗಳ ಸ್ವರಪ್ರಸ್ತಾರವನ್ನು ಬರೆದಿಟ್ಟುಕೊಂಡು, ಅವರ ಕಲ್ಪನೆಯ ಛಾಪನ್ನು ತಮ್ಮ ಹಾಡಿಕೆಯಲ್ಲಿ ಇಳಿಸಿದವರು ಎಲ್.ಜಿ. ಸಹೋದರಿಯರು - ಸುಮಿತ್ರ ಮತ್ತು ವಿಮಲ ರಾಜಗೋಪಾಲ್.

ಮುಂದೆ ಪುತಿನರ ಕೃತಿಗಳನ್ನು ಆಕಾಶವಾಣಿಯಲ್ಲಿ ಪ್ರಸಾರಮಾಡುವ ಸಂದರ್ಭದಲ್ಲಿ ಪುತಿನರವರಿಗೂ ವಿ. ದೊರೆಸ್ವಾಮಿ ಐಯ್ಯಂಗಾರರಿಗೂ ಜೊತೆಯಾಯಿತು. ಪುತಿನರಿಗೆ ಬಹುಶಃ ಇದಕ್ಕಿಂತ ಉತ್ತಮ ಸಹಯೋಗ ಸಿಕ್ಕಿರಲು ಸಾಧ್ಯವಿಲ್ಲ. ಆಚಾರ್ಯರ ಕಲ್ಪನೆಗೆ ತಕ್ಕಂತೆ ಸಹೃದಯತೆಯಿಂದ, ರಸದೃಷ್ಟಿಯಿಂದ, ಅವರ ಅನೇಕ ಗೇಯನಾಟಕಗಳ ಹಾಡುಗಳಿಗೆ ಸ್ವರಪ್ರಸ್ತಾರ ಖಚಿತಗೊಳಿಸಿ ಅವನ್ನು ಅನೇಕ ಕಲಾವಿದರಿಗೆ ಹೇಳಿಕೊಟ್ಟಿದ್ದಾರೆ. ಇವುಗಳಲ್ಲಿ ಅನೇಕವು ಸ್ವರಪ್ರಸ್ತಾರದೊಂದಿಗೆ ಅಚ್ಚಾಗಿವೆ.

ನಮ್ಮ ಸಂಗೀತ ವಿದ್ವಾಂಸರು ಆಚಾರ್ಯರ ಸಂಗೀತವನ್ನು ಅರ್ಥಮಾಡಿಕೊಳ್ಳುತ್ತ, ಹೆಚ್ಚುಹೆಚ್ಚು ಮಂದಿ ಅವರ ಸಂಗೀತದ ಹಿರಿಮೆಯನ್ನು ಕಾಣುತ್ತಿರುವುದು ಸಂತೋಷದ ಸಂಗತಿ. ಆದರೆ ನನ್ನನ್ನು ಬಾಧಿಸುವ ಪ್ರಶ್ನೆ ಒಂದುಂಟು. ಇಂಥ ಸಾಹಿತಿ-ಕಲೋಪಾಸಕರ ಸಂಗೀತವನ್ನು ಹೇಗೆ ಬಳಸಬೇಕು ಎಂಬುದು. ಒಂದೊಂದು ಹಾಡೂ ವಾಗ್ಗೇಯಕಾರನ ತಪಸ್ಸಿನ ಫಲ. ಒಂದೊಂದು ಹಾಡಿನ ಬಗೆಗೂ ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ಆಗಿರುವ ಚಿಂತನೆ, ಮಂಥನ ಅಪಾರ. ಒಂದೊಂದು ಸನ್ನಿವೇಶಕ್ಕೂ ತಕ್ಕ ಬಣ್ಣಗಳನ್ನು, ಹೊಳಪುಗಳನ್ನು ಕೊಡುವ ಪದರಾಗಸಂಯೋಜನೆ ಸುಲಭವಾಗಿ ಕೈಗೆ ಸಿಕ್ಕುವುದಲ್ಲ. ಪುತಿನರವರೇ ಹೇಳುವಂತೆ ಅದೊಂದು 'ಸ್ವರಭಾವವಾಗರ್ಥಯೋಗ'. ಅದನ್ನು ಮುರಿಯಬಾರದೆಂದು ಸ್ವರಕೋವಿದರನ್ನು

ಕೇಳಿಕೊಂಡಿದ್ದಾರೆ.

ಹಾಗಾದರೆ ಸಂಗೀತನಿರ್ದೇಶಕರಿಗೆ, ಸಂಗೀತಗಾರರಿಗೆ ಈ ವಿಷಯದಲ್ಲಿ ಏನೂ ಸ್ವಾತಂತ್ರ್ಯವಿಲ್ಲವೆ? ಇದೆ. ಆದರೆ ಸಂಪೂರ್ಣವಾಗಿ ಅಲ್ಲ. ಒಂದು ಗೀತ ರಚಿತವಾದಾಗ ಕವಿಯ ಮನಸ್ಸು ಯಾವ ರೀತಿ ಕಾವುಗೊಂಡಿತ್ತೋ, ಅದನ್ನು ಕೇಳುಗರಲ್ಲಿ ಮರುಕಳಿಸುವಂತಿದ್ದರೆ, ಆಗ ಮಾತ್ರ ಇತರರ ರಾಗಸಂಯೋಜನೆಗೆ ಅವರ ಒಪ್ಪಿಗೆ ಉಂಟು. ಇಲ್ಲಿ ದೊರೆಸ್ವಾಮಿ ಐಯ್ಯಂಗಾರರ ಕಲಾನಿಷ್ಠೆಯನ್ನು ನೆನೆಯಬೇಕು: "...ನೀವು ಸಂಗೀತವನ್ನು ಶಾಸ್ತ್ರೀಯವಾಗಿ ಅಭ್ಯಾಸ ಮಾಡಿದ್ದೀರಿ. ಆದ್ದರಿಂದ ನಿಮ್ಮದೇ ಕ್ರಮದಲ್ಲಿ ಅಳವಡಿಸಿ ಎಂದು ಅವರು (ಪುತಿನ) ಹೇಳುತ್ತಿದ್ದರು. ಆದರೆ, ನಾನು, ನಿಮ್ಮ concept ಚೆನ್ನಾಗಿದೆ. ನಾನು ಅದನ್ನೇ, ನಿಮ್ಮ ಹಾಡುಗಳನ್ನು ಹಾಡುವವರಿಗೆ ಸಂಗೀತದ ಅಪಿ ಹಾಕಿ ಕೊಡುತ್ತೇನೆ, ಅದೇ ಇರಲಿ ಎಂದು ಅವರನ್ನೊಪ್ಪಿಸುತ್ತಿದ್ದೆ."

ಇದು ಗಹನವಾದ ಮಾತು. ಬಹು ಮಂದಿ ಗಾಯಕರು ಈ ಬಗ್ಗೆ ಲಕ್ಷ್ಯವಿಡದೆ ಅವರ ಕೃತಿಗಳನ್ನು - ರಾಗ, ಸ್ವರ, ತಾಳ ಸಂಯೋಜನೆ ಆಗಿರುವುದನ್ನೂ ಕೂಡ - ತಮಗೆ ತೋರಿದ ರೀತಿಯಲ್ಲಿ ಹಾಡುತ್ತಾರೆ. ಇದು ಸಾಧುವಲ್ಲ, ಒಬ್ಬ ದೊಡ್ಡ ಕಲಾವಿದನಿಗೆ ತೋರುವ ಗೌರವವಲ್ಲ ಎಂದು ಹೇಳಬಯಸುತ್ತೇನೆ.

ಆದರೆ ಹೇಗೆ ಹಾಡುವುದು? ಇಲ್ಲಿ ಒಂದು ವಿಚಿತ್ರ ಸಮಸ್ಯೆಯಿದೆ. ಈ ಹಾಡುಗಳ ಉತ್ತಮಾಂಶಗಳೇ ಅವುಗಳ ವ್ಯಾಪಕವಾದ ಪ್ರಚಾರಕ್ಕೆ ತೊಡಕಾಗಿವೆ. ಈ ರಚನೆಗಳ ಸಂಗೀತ ಉನ್ನತ ಮಟ್ಟದ್ದು, ಹಾಗೆಯೇ ಅವುಗಳ ಸಾಹಿತ್ಯ. ಬಹುಮಂದಿ ನಮ್ಮ ಸಂಗೀತಗಾರರಿಗೆ ಇಂಥ ಸಾಹಿತ್ಯವನ್ನು ಅರಗಿಸಿಕೊಳ್ಳುವುದು, ಅದನ್ನು ಸಮರ್ಥವಾಗಿ ಹಾಡಿನಲ್ಲಿ ನಿವೇದಿಸುವುದು ಕಷ್ಟ.

ನನಗನ್ನಿಸುವುದು, ಆಚಾರ್ಯರ ಕೃತಿಗಳನ್ನು ಸಾಂಪ್ರದಾಯಿಕ ಎರಕದಲ್ಲೇ ಹಾಡುವುದರ ಬದಲು, ಅವನ್ನೇ ಒಂದು ವಿಶಿಷ್ಟ ಪ್ರಭೇದವನ್ನಾಗಿ (genre) ಪರಿಗಣಿಸಿ ಹಾಡುವುದು ಉತ್ತಮವೇನೋ ಎಂದು. ಇಲ್ಲಿ ಸಾಂಪ್ರದಾಯಿಕ ಸಂಗೀತದ ಧಾಟಿ, ಅಬ್ಬರಗಳನ್ನು ಸ್ವಲ್ಪ ಕಡಿಮೆ ಮಾಡಿ, ಸಾಹಿತ್ಯಕ್ಕೆ, ಭಾವಜಾಗೃತಿಗೆ, ಮಾಧುರ್ಯಕ್ಕೆ, ಲಾಲಿತ್ಯಕ್ಕೆ, ಒಟ್ಟಿನ ಸಂವೇದನೆಗೆ ಹೆಚ್ಚಿನ ಮಹತ್ವ ಕೊಟ್ಟು, ಕವಿಯ ಮನೋಧರ್ಮಕ್ಕನುಗುಣವಾಗಿ, ಅವರು ಅಪೇಕ್ಷಿಸುವ 'ಸ್ವರಭಾವವಾಗರ್ಥ' ಪೋಷಣೆಯನ್ನು ಮಾಡಿದರೆ ಹೆಚ್ಚು ಸಾರ್ಥಕ ಎನಿಸುತ್ತದೆ. ನಮ್ಮ ಸಂಗೀತಗಾರರು ಅದಕ್ಕೆ ತಕ್ಕ ಬೇರೊಂದೇ ಮನೋಧರ್ಮ ಬೆಳೆಸಿಕೊಳ್ಳಬೇಕೇನೋ. ನಮ್ಮಲ್ಲಿ ಮಹಾರಾಷ್ಟ್ರ, ಆಂಧ್ರಗಳಲ್ಲಿರುವಂತೆ ರಂಗಸಂಗೀತದ ಒಂದು ಭದ್ರವಾದ ಸಂಪ್ರದಾಯ ಇಲ್ಲದಿರುವುದು ಈ ವಿಚಾರದಲ್ಲಿ ತೊಂದರೆಗೆ ಎಡೆಕೊಟ್ಟಿದೆ ಎಂದೂ ನನಗೆ ಅನ್ನಿಸುತ್ತದೆ. ಇದು ಸಂಗೀತಜ್ಞರು, ಸಾಹಿತ್ಯಾಭಿಮಾನಿಗಳು, ರಸಿಕರು ಆಲೋಚಿಸಬೇಕಾದ ವಿಷಯ.


'ಯದುಗಿರಿಯ ಬೆಳಕು' ಪುಸ್ತಕದಲ್ಲಿ ಸುಮಿತ್ರ ಅವರು ತಾವು ಬರೆದಿರುವ ಲೇಖನದಲ್ಲಿ ಹೇಳುವಂತೆ, "ಅವರ ಹಾಡುಗಳ ಮೂಲರೂಪವನ್ನು ಉಳಿಸಿಕೊಳ್ಳುವುದು ಅವರಿಗಾಗಿ ಅಲ್ಲ, ನಮ್ಮ ಸಂಗೀತ ಸಂಸ್ಕಾರದ ಉನ್ನತಿಗಾಗಿ. ಅದನ್ನು ಉಳಿಸಿದರೆ ಸಂಗೀತದ ಶ್ರೀಮಂತಿಕೆಯನ್ನು ಉಳಿಸಿ ಬೆಳೆಸಿದ ಹಾಗೆಯೇ ಸರಿ." ಇಪ್ಪತ್ತನೆಯ ಶತಮಾನ ಕಂಡ ಅಪೂರ್ವ ವಾಗ್ಗೇಯಕಾರರು ಪುತಿನ, ಇನ್ನಾದರೂ ನಮ್ಮ ಕನ್ನಡ ಜನ ತಮ್ಮ ಅಭಿಮಾನಶೂನ್ಯತೆಯನ್ನು ತೊರೆದು ಅವರನ್ನು ವಾಗ್ಗೇಯಕಾರರೆಂದು ಗುರುತಿಸಬೇಕೆಂದೂ ಆಗ್ರಹಪೂರ್ವಕ ಹೇಳುತ್ತಾರೆ.

ಈ ಮೊದಲಲ್ಲಿ ಅಕ್ರೂರ ಕೃಷ್ಣನ ಕೊಳಲಗಾನ ಕೇಳಿ ಪರವಶನಾಗಿದ್ದನ್ನು ನೆನೆದೆವು. ಆಚಾರ್ಯರು ತಮ್ಮ ದೀರ್ಘ ಜೀವನದ ಉದ್ದಕ್ಕೂ, ಆ ದಿವ್ಯ ಗಾನಕ್ಕೆ ಕಿವಿಗೊಡುತ್ತಲೇ ಅದರ ಜಾಡುಹಿಡಿದು ಹೋದವರು. ಆ ಸಂಗೀತವಾದರೂ ಅಷ್ಟೆ. ಆಚಾರ್ಯರು ಅದನ್ನು ಶಾಸ್ತ್ರೀಯವಾಗಿ ಅಭ್ಯಾಸ ಮಾಡದಿದ್ದರೂ, ಸಂಗೀತ ಅವರ ಪಾಲಿಗೆ ತಾನಾಗಿ ಒಲಿದು ಬಂದಿತ್ತು. ಇದೊಂದು ಇಬ್ಬಗೆಯ ಅಭಿಸಾರ. "ಈ ಅಭಿಸಾರವೆನಿತು ಲೇಸಾಯ್ತು!" ಅದು ನಮ್ಮ ಅದೃಷ್ಟ, ಕನ್ನಡದ ಅದೃಷ್ಟ.

*(ಪೆನ್ಸಿಲ್ವೇನಿಯ, ನ್ಯೂ ಜೆರ್ಸಿ ಮತ್ತು ಡೆಲವೇರ್ ತ್ರಿರಾಜ್ಯಗಳ ಕನ್ನಡ ಕೂಟ ತ್ರಿವೇಣಿ, ಪುತಿನರವರ ಬಂಧುಬಳಗ ಮತ್ತು ಕನ್ನಡ ಸಾಹಿತ್ಯ ರಂಗದವರ ಸಹಪ್ರವರ್ತನೆಯಿಂದ ಜೂನ್ ೪, ೨೦೦೫ರಂದು ನಡೆಸಿದ ಪುತಿನ ಜನ್ಮಶತಮಾನೋತ್ಸವದಲ್ಲಿ ಮಾಡಿದ ಭಾಷಣ.)*

◈








ಡಾಲ್ಫಿನ್‌ಗಳು ನೀರಿನಿಂದ ೨೦ ಅಡಿ ಮೇಲಕ್ಕೆ ಹಾರಬಲ್ಲವು!

ಕೆನ್ಯಾ ದೇಶವು ಜಗತ್ತಿನ ೧೩% 'ಟೀ'ಯನ್ನು ರಫ್ತು ಮಾಡುತ್ತದೆ.

ಕಣ್ಣನ್ನು ತೆರೆದುಕೊಂಡೇ ಕಪ್ಪೆಗಳು ಆಹಾರವನ್ನು ತಿನ್ನಲಾರವು.

ಜಿರಾಫೆಗೆ ತನ್ನ ಕಣ್ಣನ್ನೇ ನೆಕ್ಕಬಲ್ಲಷ್ಟು ಉದ್ದದ ನಾಲಗೆ ಇರುತ್ತದೆ!

SOUTHERN SPICE
INDIA BISTRO & BAR

# Grand Opening

## Travel to India by Taste

### A FINE DINING INDIAN CUISINE FEATURING

- Delicious Menu
- Elegant Party hall with Dance floor for Wedding, Birthday parties, corporate functions etc.
- Full Bar
- Excellent Quality and Service. Food served elegantly.
- Catering service available for any occasion.

OUR DELICACIES INCLUDE

* **HYDERABAD DUM-BIRYANI** * **GUTHI VANKAYA** (stuffed eggplant curry) * **NAATU KODI** (Andhra style Country Chicken curry) **CHEPA PULUSU** (Fish cooked in tamarind sauce) * A Large variety of DOSAS like **MLA PESARATTU WITH UPMA** * **ULAVA CHARU** * **CHICKEN TIKKA MASALA** * **KADAI PANEER**

*And a lot more...*

## Happy Hour

**Monday - Friday 5 to 7 pm** with Sizzling Hot Appetizer Specials (Free WIFI)

Lunch: 11:30am - 2:30pm
Dinner: 5:00pm - 10:00pm

**Southern Spice**

*India Bistro & Bar*

2700 West El Camino Real. Mountain View, CA 94040
Phone: **650-948-0123** • Fax: 650-948-0125

For special promotions and offers please visit our website
http://www.southernspicebistro.com

# ಅಮ್ಮ



*೧೦ ವರ್ಷಗಳ ಹಿಂದೆ, ೨೫ ವರ್ಷದ ನನ್ನಣ್ಣನನ್ನು ಸ್ಕೂಟರ್ ಅಪಘಾತದಲ್ಲಿ ಕಳೆದುಕೊಂಡಾಗಲೇ ಅರ್ಧವಾಗಿದ್ದ ಅಮ್ಮನಿಗೆ, ಈಗ ಮಗಳೂ, ಮೊಮ್ಮಗನೂ ದೂರ ಹೋಗುತ್ತಾರೆ ಎನ್ನುವುದು ನುಂಗಲಾರದ ತುತ್ತಾಗಿತ್ತು.*

**ಲಕ್ಷ್ಮಿ ಶ್ರೀನಾಥ್**
ಸನ್ನಿವೇಲ್, ಕ್ಯಾಲಿಫೋರ್ನಿಯ, *lakshmishrinath_AT_yahoo.com*

ಅವತ್ತು "ಅಮ್ಮಂದಿರ ದಿನ". ಬೆಳಗ್ಗೆ ಎದ್ದಾಗಿನಿಂದಲೂ ನನಗೆ ಅಮ್ಮನದೇ ನೆನವರಿಕೆ. "Happy Mother's Day, Mom!" ಎನ್ನುತ್ತ ೬ ವರ್ಷದ ಕ್ಷಿತಿಜ, ತಾನೇ ಮಾಡಿದ ಸುಂದರವಾದ ಕಾರ್ಡನ್ನು ಒಂದು ಜಿನಿಯ ಹೂವಿನ ಉದ್ದದ ತೊಟ್ಟಿಗೆ ಲಗತ್ತಿಸಿ, ಆ ಹೂವನ್ನೊಂದು ಅಂದವಾದ ಹೂದಾನಿಯಲ್ಲಿಟ್ಟು, ನನ್ನ ಮುಂದೆ ಹಿಡಿದಾಗ, ನನ್ನ ಮನಸ್ಸು ನನ್ನಮ್ಮನ ಬಗ್ಗೆಯೇ ಯೋಚಿಸುತ್ತಿತ್ತು. "Thank you, ಪುಟ್ಟ!" ಎಂದು ಅವನಿಗೆ ಒಂದು hug ಕೊಟ್ಟು, ನಿಧಾನವಾಗಿ ಕಾರ್ಡ್ ತೆಗೆದು ಓದುತ್ತಿದ್ದಂತೆ, ನನ್ನ ಮನಸ್ಸು ಎಂಟು ವರ್ಷಗಳಷ್ಟು ಹಿಂದಕ್ಕೆ ಓಡಿತು.

★ ★ ★

"ಕ್ಷಿತೀ . . , ಕ್ಷಿತಿ ಪುಟ್ಟೂ . . . , ಮಮ್ಮು ತಿಂತೀಯಂತೆ ಬಾರೋ . ." ಎಂದು ಕರೆಯುತ್ತಿದ್ದ ಅಜ್ಜಿಯ ಧ್ವನಿ ಕೇಳಿ, ಪುಟ್ಟ ಕ್ಷಿತಿಜ ಮುಂಬಾಗಿಲಿನಿಂದ ಹೊರಗೋಡಿ, ಬುಡು ಬುಡು ಎಂದು ಮಹಡಿ ಹತ್ತಿಯೇ ಬಿಟ್ಟ. ಊಟ ಮಾಡಿಸಲು ಅಜ್ಜಿ ತನ್ನ ಹಿಂದೆ ಬಂದೇ ಬರುತ್ತಾರೆಂದು ಒಂದೂವರೆ ವರ್ಷದ ಆ ಪೋರನಿಗೂ ಗೊತ್ತು. "ಕಳ್ಳ, ನನ್ನ ಕೈಯಿಂದ ತಪ್ಪಿಸಿಕೊಂಡು ಓಡುತ್ತೀಯ? ಬಂದೆ ತಾಳು," ಎನ್ನುತ್ತ ಅಮ್ಮನೂ ಊಟದ ತಟ್ಟೆ ಹಿಡಿದುಕೊಂಡು ಅವನ ಹಿಂದೆಯೇ ಮಹಡಿ ಹತ್ತಿದರು. ಮಹಡಿ ಕಟ್ಟೆಯ ಮೇಲೆ ಕೂತು, ಅಜ್ಜಿ ತೋರಿಸುವ ಹಸು, ಕರು, ನಾಯಿ, ಕೋಳಿ ಎಲ್ಲ ನೋಡುತ್ತ ಊಟ ಮಾಡುವುದೆಂದರೆ ಕ್ಷಿತಿಜನಿಗೆ ಭಾರೀ ಖುಷಿ. "ಇನ್ನೆಷ್ಟು ದಿನ ನನ್ನ ಕೈಯಿಂದ ಹೀಗೆ ತಿನ್ನುತ್ತೀಯೋ ನೀನು, ಇನ್ನೆರಡು-ಮೂರು ವಾರಗಳಲ್ಲಿ ನೀನೂ, ನಿಮ್ಮಮ್ಮನೂ ಅಮೇರಿಕಾಕ್ಕೆ, ನಿಮ್ಮಪ್ಪನ ಹತ್ತಿರಕ್ಕೆ ಹಾರುತ್ತೀರ," ಎಂದು ಹೇಳುತ್ತಿರುವಂತೆ ಅಮ್ಮನ ಕಣ್ಣಾಲಿಗಳಲ್ಲಿ ನೀರು ತುಂಬಿಕೊಂಡಿತ್ತು. ಇರುವ ಒಬ್ಬಳೇ ಮಗಳನ್ನು ಬಿಟ್ಟಿರಬೇಕಲ್ಲ, ಪ್ರೀತಿಯ ಮೊಮ್ಮಗನ ಆಟ-ಪಾಠ ಎಲ್ಲ ನೋಡಲಾಗುವುದಿಲ್ಲವಲ್ಲ ಎನ್ನುವ ದುಗುಡ ಅವರ ಮನಸ್ಸಿನ ತುಂಬ ಆವರಿಸಿತ್ತು.

ಮೊದಲಿನಿಂದಲೂ ಅಷ್ಟೆ, ಇರುವ ಒಬ್ಬಳೇ ಮಗಳು ಮದುವೆಯಾದ ಮೇಲೂ ಆದಷ್ಟು ಹತ್ತಿರವೇ ಇರಲಿ ಎಂದು ಅಮ್ಮನ ಆಸೆ. ಅದಕ್ಕೋಸ್ಕರ ಸುತ್ತಿದ ಜಾಗಗಳೆಷ್ಟೊ, ನೋಡಿದ ವರಗಳೆಷ್ಟೊ. ಇಂಜನಿಯರ್ ಆದ ಮಗಳಿಗೆ ಸಿಗುತ್ತಿದ್ದ ವರಗಳೆಲ್ಲ ಮುಕ್ಕಾಲು ಅಮೇರಿಕದಲ್ಲಿರುವವರೆ ಆದ್ದರಿಂದ, ಭಾರತದಲ್ಲೇ ಇರುವ ವರ ಸಿಗಲು ಸಾಕಷ್ಟು ಹುಡುಕಬೇಕಾಯಿತು. ಕಡೆಗೂ ಒಬ್ಬ ಒಳ್ಳೆಯ ಹುಡುಗ, ಅಲ್ಲೇ Indian Space Research Organizationನಲ್ಲಿ ಕೆಲಸದಲ್ಲಿರುವವನು ಸಿಕ್ಕಾಗ, ಅಂತೂ ನಮ್ಮ ಶ್ರಮ ಸಾರ್ಥಕವಾಯಿತು ಎಂದು ಅಮ್ಮ, ಅಪ್ಪ ಇಬ್ಬರೂ ಸಂತೋಷಪಟ್ಟಿದ್ದರು. ಸದ್ಯ, ಮಗಳು, ಅಳಿಯ ಆಸ್ಟ್ರೇಲಿಯ, ಅಮೇರಿಕ ಎಲ್ಲೂ ಹೋಗದೆ, ನಮಗೆ ಹತ್ತಿರದಲ್ಲೇ ಇರುತ್ತಾರೆ ಎಂದು ಸಂಭ್ರಮ ಪಟ್ಟಿದ್ದರು.

ಮದುವೆಯಾದ ಎರಡು ವರ್ಷಗಳ ನಂತರ ಪುಟ್ಟ ಕ್ಷಿತಿಜ ಹುಟ್ಟಿದಾಗಲಂತೂ ಅಮ್ಮನ ಸಂತೋಷಕ್ಕೆ ಎಣೆಯೇ ಇಲ್ಲ. ಅವನು ಹೊಟ್ಟೆಯಲ್ಲಿರುವಷ್ಟು ದಿನವೂ ನನಗೆ ಮಾಡಿಕೊಡದಿದ್ದ ತಿನಿಸಿಲ್ಲ, ತಿನ್ನಿಸದಿದ್ದ ಹಣ್ಣಿಲ್ಲವೇನೋ! ಆದರೂ, ಕೊಟ್ಟ ತಾರೀಖು ಕಳೆದು ವಾರವಾದರೂ, ಮಗು ಹುಟ್ಟುವ ಸೂಚನೆಯೇ ಕಾಣದೆ ಅಮ್ಮ ಸ್ವಲ್ಪ ಭಯಪಟ್ಟಿದ್ದು ನಿಜ. ಆದರೆ ಡಾಕ್ಟರು ಮಾತ್ರ, "ನಾಳೆ ದೀಪಾವಳಿ. ಹಬ್ಬ ಎಲ್ಲ ಚೆನ್ನಾಗಿ ಮಾಡಿಕೊಂಡು, ತಿಂದು, ಉಂಡು, ಪಟಾಕಿ ಎಲ್ಲ ಚೆನ್ನಾಗಿ ಹೊಡೆದು, ನಾಡಿದ್ದು ಆರಾಮಾಗಿ ಬನ್ನಿ. ನಾ ಎಲ್ಲ ನೋಡ್ಕೋತೀನಿ. ನೀವೇನು ಹೆದರಬೇಡಿ," ಎಂದು ಧೈರ್ಯ ಹೇಳಿ ಕಳಿಸಿದ್ದರು. ಹಬ್ಬ ಮುಗಿದ ಮಾರನೇ ದಿನ ಸಂಜೆ, ಸಣ್ಣ-ಪುಟ್ಟ ತೊಂದರೆಗಳನ್ನು ನಿವಾರಿಸಿ, ಕ್ಷಿತಿಜ ಹೊರ ಪ್ರಪಂಚಕ್ಕೆ ಕಾಲಿಟ್ಟಾಗ, ಅಮ್ಮನ ಕಣ್ಣಲ್ಲಿ ಆನಂದದ ಕಣ್ಣೀರು. ಅಲ್ಲದೆ, ನನ್ನ ತಾತ, ಅಂದರೆ ಅಮ್ಮನ ಅಪ್ಪ, ಮಗುವನ್ನು ನೋಡಿ, "ಒಳ್ಳೆ ಮಹಾನಕ್ಷತ್ರದಲ್ಲಿ ಹುಟ್ಟಿದ್ದಾನಮ್ಮ ನಿನ್ನ ಮಗ, Congratulations!" ಎಂದು ನನ್ನ ಕೈ ಕುಲುಕಿದಾಗ ಅಮ್ಮನಿಗೆ ಖುಷಿಯೋ ಖುಷಿ.

ಮೆಚ್ಚಿನ ಒಬ್ಬಳೇ ಮಗಳಿಗೆ ಅಚ್ಚುಕಟ್ಟಾಗಿ ಬಾಣಂತನ ಮಾಡಲು ಅಮ್ಮ ಮೊದಲೇ ಎಲ್ಲ ಸಿದ್ಧತೆಯನ್ನೂ ಮಾಡಿಕೊಂಡಿದ್ದರು. ೧೧ನೇ ದಿನ, ಅಪ್ಪ ಅದೆಲ್ಲಿಂದ ಅಷ್ಟು ಔಷಧೀಯ ಎಲೆ-ಕಡ್ಡಿಗಳನ್ನು ತಂದರೊ? ಎಲ್ಲವನ್ನೂ ನೀರಿಗೆ ಹಾಕಿ ಕುದಿಸಿ, ಆ ನೀರಲ್ಲಿ ನನಗೆ ತಲೆ ಸ್ನಾನ ಮಾಡಿಸಿದ್ದರು ಅಮ್ಮ. ಅಮ್ಮನಿಗೆ ಅಪ್ಪ ಎಲ್ಲಕ್ಕೂ ಬಲಗೈ ಇದ್ದಂತೆ; ಪ್ರತಿಯೊಂದರಲ್ಲೂ ಸಹಾಯ ಮಾಡುತ್ತಿದ್ದರು. ಆದರೆ ಅಷ್ಟರಲ್ಲೇ ಅದಕ್ಕೂ ಯಾರದೋ ಕಣ್ಣು ಬಿತ್ತು. ಎಂದೂ ವಾರಕ್ಕಿಂತ ಹೆಚ್ಚು ಇರದಿದ್ದ ತಾತ, ಈ ಬಾರಿ, ಮಗುವನ್ನು ನೋಡಲು ಬಂದವರು ನಮ್ಮ ಮನೆಯಲ್ಲೇ ೩ ವಾರ ಇದ್ದುಬಿಟ್ಟರು. ಈ ಕಡೆ ಬಾಣಂತಿ, ಆ ಕಡೆ ವಯಸ್ಸಾದ ತಂದೆ – ಇಬ್ಬರಿಗೂ ಸಮಯಕ್ಕೆ ಸರಿಯಾಗಿ ಎಲ್ಲವನ್ನೂ ಒದಗಿಸುವಲ್ಲಿ ಅಮ್ಮ ಸುಸ್ತು ಹೊಡೆದಿರಬೇಕು. ಎರಡು ವಾರ ಕಳೆಯುವಷ್ಟರಲ್ಲಿ ತಾತನಿಗೆ ಶುರುವಾದ ಕೆಮ್ಮು, ಹೆಚ್ಚುತ್ತಲೇ ಹೋಯಿತು. ಮತ್ತೊಂದು ವಾರದ ನಂತರ ತಾತ ಊರಿಗೆ ಹೊರಟು ನಿಂತರು. ಹೋದ ಎರಡೇ ದಿನಗಳಲ್ಲಿ ಅವರು ದೇವರ ಪಾದ ಸೇರಿಕೊಂಡಾಗ, ಎಲ್ಲರ ಮನದಲ್ಲೂ ದು:ಖ. ತಾತನ ಕೆಲಸ-ಕಾರ್ಯಕ್ಕೆಂದು ಊರಿಗೆ ಹೋದ ಅಪ್ಪ, ಅಪಘಾತದಲ್ಲಿ ಕೈ ಮುರಿದುಕೊಂಡಿದ್ದು ಅಮ್ಮನಿಗೆ ಬಲವಾದ ಹೊಡೆತ. ಅಮ್ಮನ ದುರದೃಷ್ಟವೋ ಏನೋ; ೨೪ ಘಂಟೆಯೂ ನೀರು ಕೊಡುತ್ತಿದ್ದ ಭಾವಿಯ ಮೋಟರ್ ಪಂಪ್ ಸಹ ಅದೇ ಸಮಯಕ್ಕೆ ಕೆಟ್ಟುಹೋಯಿತು. ಇಷ್ಟೆಲ್ಲ ಆದರೂ ಅಮ್ಮ ಮಾತ್ರ ಒಮ್ಮೆಯೂ ಹೀಗೆಲ್ಲ ಆಯಿತಲ್ಲ ಎಂದು ಬೇಸರಪಡಲಿಲ್ಲ, ಧೈರ್ಯಗೆಡಲಿಲ್ಲ. ನನ್ನ ಬಾಣಂತನವನ್ನಂತೂ ಐದು ತಿಂಗಳು ಸಾಂಗೋಪಾಂಗವಾಗಿ ಮಾಡಿದರು. ಕೆಲಸದವಳು ನೀರು ಸೇದುತ್ತಿರಲಿಲ್ಲವಾದ್ದರಿಂದ, ಭಾವಿಯಿಂದ ತಾನೇ ನೀರು ಸೇದಿ, ನನಗೆ ದಿನ ಬಿಟ್ಟು ದಿನ ಮತ್ತು ಮಗುವಿಗೆ ಪ್ರತಿದಿನ ನೀರು ಹಾಕುತ್ತಿದ್ದರು. ಗ್ರಂಧಿಗೆ ಅಂಗಡಿಗೆ ಹೋಗಿ, ಲೇಹ್ಯಕ್ಕೆ ಬೇಕಾದ ೪೫-೫೦ ಸಾಮಾನನ್ನು ತಂದು, ಕಬ್ಬಿನ ಹಾಲನ್ನೂ, ಹೆರಳೇಕಾಯಿಯ ರಸವನ್ನೂ ಸೇರಿಸಿ ಲೇಹ್ಯ ಮಾಡುವುದರಿಂದ ಹಿಡಿದು ಅಂಟಿನುಂಡೆ ಮಾಡಿಕೊಡುವುದು, ಸಾಂಬ್ರಾಣಿ ಹಾಕಿ ತಲೆ ಕಾಸುವುದು ಒಂದನ್ನೂ ಕಮ್ಮಿ ಮಾಡಲಿಲ್ಲ. ಅಪ್ಪನ ಸಹಾಯವೂ ಇಲ್ಲದೆ, ಪ್ರತಿಯೊಂದನ್ನೂ ಒಬ್ಬಳೇ ಮಾಡಿದ ಆ ಅಮ್ಮನ ಋಣವನ್ನು ಎಂದಾದರೂ ತೀರಿಸುವುದು ಸಾಧ್ಯವೆ? ಊಹೂಂ, ಖಂಡಿತಾ ಸಾಧ್ಯವಿಲ್ಲ.

ಇದೆಲ್ಲದರ ನಡುವೆಯೂ, ಅಜ್ಜಿಯ ಆರೈಕೆಯಲ್ಲಿ, ಕ್ಷಿತಿಜ ಸುಂದರವಾಗಿ ಬೆಳೆಯುತ್ತಿದ್ದ. ಅವನ ಹೊಸ ಹೊಸ ಆಟಗಳನ್ನು ನೋಡುತ್ತಿದ್ದರೆ, ದಿನಗಳು ಕಳೆಯುತ್ತಿದ್ದುದೇ ಗೊತ್ತಾಗುತ್ತಿರಲಿಲ್ಲ. ಈ ನಡುವೆ ಅಪ್ಪನಿಗೂ ಒಂದು ಸರ್ಜರಿ ಆಗಿ, ಅವರೂ ಗುಣವಾಗುತ್ತ ಬಂದರು. ಕ್ಷಿತಿಜ ಹುಟ್ಟಿದಾಗಲೇ ಅವನ ಅಪ್ಪ, ತಮ್ಮ ಮೊದಲಿನ ಕೆಲಸಕ್ಕೆ ರಾಜೀನಾಮೆ ಕೊಟ್ಟು multinational companyಯೊಂದಕ್ಕೆ ಸೇರಿಕೊಂಡಿದ್ದರು. ಖರ್ಚುಗಳು ಹೆಚ್ಚುತ್ತಿದ್ದುದರಿಂದ ಇದೇ ಸರಿಯಾದ ನಿರ್ಧಾರ ಎಂದು ನನಗೆ ಮನವರಿಕೆ ಮಾಡಿಸಿದ್ದರು. ಮಗುವಿಗೆ ವರ್ಷವಾಗುವ ವೇಳೆಗೆ ಎರಡು ಬಾರಿ ಅಮೇರಿಕಾಗೂ ಹೋಗಿಬಂದಾಗಿತ್ತು. ಮುಂಚಿನಿಂದಲೂ ಇಲ್ಲಿನ ಧೂಳು, ಹೊಗೆ, ಪಾರ್ಥೇನಿಯಮ್ಮುಗಳ ಅಲರ್ಜಿಯಿಂದ ಕಷ್ಟ ಪಡುತ್ತಿದ್ದ ಇವರು, "ಅಮೇರಿಕಾಕ್ಕೇ ಹೋಗಿಬಿಡೋಣವೇ ಎಂದುಕೊಳ್ಳುತ್ತಿದ್ದೇನೆ; ಒಳ್ಳೆ offer ಸಹ ಸಿಕ್ಕಿದೆ," ಎಂದಾಗ, ಅಮ್ಮನ ಎದೆ ಧಸಕ್ ಎಂದಿತು. ಈಗ ಮಗಳನ್ನಷ್ಟೇ ಅಲ್ಲದೆ, ಮೊಮ್ಮಗನನ್ನೂ ತುಂಬ ಹಚ್ಚಿಕೊಂಡುಬಿಟ್ಟಿದ್ದರು. "ಇಲ್ಲೇ ಡೆಲ್ಲಿ, ಹೈದರಾಬಾದ್ ಎಲ್ಲಾದರೂ ಟ್ರೈ ಮಾಡಿ, ನಮಗೆ ಬೇಕಾದಾಗ ನಿಮ್ಮನ್ನೆಲ್ಲಾ ಬಂದು ನೋಡಬಹುದು. ಈ ಪಾಸ್‌ಪೋರ್ಟ್, ವೀಸಾ ಗಲಾಟೆಯೆಲ್ಲ ಇರೋಲ್ಲ," ಎಂದು ಮೆತ್ತಗೆ ಅಳಿಯನಿಗೆ ಹೇಳಿದರು. ಅವರ ಮನಸ್ಸು ನೋಯಿಸಲಿಚ್ಛಿಸದೆ, ಇವರೂ ದೆಹಲಿಯಲ್ಲೆ ಒಂದು ಒಳ್ಳೆಯ ಕೆಲಸ ನೋಡಿ ಸೇರಿಕೊಂಡರು. ಆದರೆ ತಿಂಗಳೊಳಗೇ, ಅಲ್ಲಿಯ ಹವಾಮಾನ, ಕೆಲಸ ಒಂದೂ ಇಷ್ಟವಾಗದೆ ವಾಪಸ್ಸೂ ಬಂದುಬಿಟ್ಟರು. ಬರುವಾಗಲೇ ಅಮೇರಿಕಾಕ್ಕೆ ಟಿಕೆಟ್ ಹಿಡಿದುಕೊಂಡೇ ಬಂದಿದ್ದರು. ಆರೋಗ್ಯದ ಕಾರಣವಿದ್ದುದರಿಂದ ಅಮ್ಮ, ಅಪ್ಪ ಹೆಚ್ಚೇನೂ ಹೇಳಲಾರದೆ ಸುಮ್ಮನಾದರು. ಅವರಿಗೂ ಗೊತ್ತಿತ್ತು, ಅಳಿಯನಿಗಾಗಲೀ, ಮಗಳಿಗಾಗಲೀ ಅಮೇರಿಕ ಹುಚ್ಚೇನೂ ಇಲ್ಲ, ಬಲವಾದ ಕಾರಣ ಇರುವುದರಿಂದಲೇ ಹೋಗುತ್ತಿದ್ದಾರೆ ಎಂದು.

ಕೆಲವೇ ದಿನಗಳಲ್ಲಿ ಮಗುವನ್ನೂ, ನನ್ನನ್ನೂ ಕರೆಸಿಕೊಳ್ಳುತ್ತೇನೆಂದು ಹೇಳಿ, ಇವರು ಅಮೇರಿಕಕ್ಕೆ ಹಾರಿದ್ದರು. "Man proposes, God disposes" ಎಂಬಂತೆ, ಅಮ್ಮ, ಅಪ್ಪ ಎಷ್ಟೇ ಕಷ್ಟಪಟ್ಟು ಭಾರತದಲ್ಲೇ ಇರುವ ಅಳಿಯನನ್ನು ಹುಡುಕಿದರೂ, ಆ ಅಳಿಯನೂ ಅಮೇರಿಕಾಕ್ಕೆ ಹೋಗಬೇಕಾದುದು ದೇವರ ಆಟವಲ್ಲದೆ ಮತ್ತೇನು? ೧೦ ವರ್ಷಗಳ ಹಿಂದೆ, ೨೫ ವರ್ಷದ ನನ್ನಣ್ಣನನ್ನು ಸ್ಕೂಟರ್ ಅಪಘಾತದಲ್ಲಿ ಕಳೆದುಕೊಂಡಾಗಲೇ ಅರ್ಧವಾಗಿದ್ದ ಅಮ್ಮನಿಗೆ, ಈಗ ಮಗಳೂ, ಮೊಮ್ಮಗನೂ ದೂರ ಹೋಗುತ್ತಾರೆ ಎನ್ನುವುದು ನುಂಗಲಾರದ ತುತ್ತಾಗಿತ್ತು. ಅಷ್ಟಾದರೂ ತಮ್ಮ ದುಗುಡವನ್ನು ಎಂದೂ ನಮಗೆ ತೋರಗೊಡಲಿಲ್ಲ. ಮುಖದ ಮೇಲಿನ ನಗು ಎಂದಿನಂತೆ ಈಗಲೂ ಇರುತ್ತಿತ್ತು. "ಎಲ್ಲಿದ್ದರೂ ನೀವುಗಳು ಚೆನ್ನಾಗಿದ್ದರೆ ಸಾಕು." ಎನ್ನುವ ಮನೋಭಾವ. ಪಕ್ಕದ ಮನೆಯವರು, "ಏನಮ್ಮ ನೀವು, ಎಲ್ಲರೂ ಮಗಳು, ಅಳಿಯ ಅಮೇರಿಕಾದಲ್ಲಿದ್ದಾರೆ ಎಂದರೆ ಜಂಭ ಹೇಳಿಕೋತಾರೆ, ನೀವು ಕೊರಗುತ್ತೀರಲ್ಲ, ಫೋನ್ ಮಾಡುತ್ತಿರುತ್ತಾರೆ ಬಿಡಿ," ಎಂದು ಧೈರ್ಯ ಹೇಳುತ್ತಿದ್ದರು.

ಅಮೇರಿಕಾದಲ್ಲಿ ಹೋಗಿರಲು ಸ್ವಲ್ಪ ತಯಾರಾಗಿದ್ದರೆ ವಾಸಿ ಎಂದು ನಾನು ಡ್ರೈವಿಂಗ್ ಕಲಿಯುವುದು, ಶಾಪಿಂಗ್ ಮಾಡುವುದು, ಡಾಕ್ಟರನ್ನು ನೋಡುವುದು ಮುಂತಾದ ಕೆಲಸಗಳನ್ನೆಲ್ಲ ಮಾಡಿಕೊಳ್ಳುತ್ತಿದ್ದರೆ, ಕ್ಷಿತಿಜನ ಊಟ, ಆಟ, ಸ್ನಾನ, ನಿದ್ದೆ ಎಲ್ಲ ಅಮ್ಮ ನೋಡಿಕೊಳ್ಳುತ್ತಿದ್ದರು. ಈಗಂತೂ ಅವನಿಗೆ ಅಜ್ಜಿಯೇ ಸರ್ವಸ್ವ. ಬೆಳಗ್ಗೆ ಏಳುತ್ತಿದ್ದಂತೆಯೇ "ಅದ್ದೀ!" (ಅಜ್ಜಿ ಎನ್ನಲು ಬರದೆ) ಎನ್ನುತ್ತಾ ಸೀದ ಅಡಿಗೆ ಮನೆಗೇ ಹೋಗುತ್ತಿದ್ದ. ಮಲಗುವಾಗಲೂ ಅಷ್ಟೆ – ಅಜ್ಜಿ ಯಾವುದಾದರೊಂದು ಲಾಲಿ ಹಾಡಿದ ನಂತರವೇ ನಿದ್ದೆ. ಕೆಲವೇ ದಿನಗಳಲ್ಲಿ ನಾವು ಹೊರಡುವ ದಿನ ಸಹ ಫಿಕ್ಸ್ ಆಯಿತು. ನಮ್ಮ ಏರ್ ಟಿಕೆಟ್ ಸಹ ಬಂದು, ಇನ್ನು ಹತ್ತು ದಿನಕ್ಕೆ ನಾವು ಹೊರಡುವುದು ಎಂದಾಯಿತು. ಮೊದಲ ಬಾರಿ ಪ್ಲೇನಿನಲ್ಲಿ, ಅದೂ ಮಗುವಿನ ಜೊತೆ ಹೋಗುತ್ತಿದ್ದುದರಿಂದ, ಅಪ್ಪ ಬಾಂಬೇ ತನಕ ಬಂದು ನನ್ನನ್ನು ಕಳುಹಿಸಿಬರುವುದು ಎಂದೂ ನಿಶ್ಚಯವಾಯಿತು. ನಾನು ತೆಗೆದುಕೊಂಡು ಹೋಗುವುದಕ್ಕೋಸ್ಕರ ಅಮ್ಮ ಮೆಣಸಿನ ಪುಡಿ, ಹುಳಿಪುಡಿ, ಚಕ್ಕುಲಿಹಿಟ್ಟು, ಮುಚ್ಚೋರುಹಿಟ್ಟು, ಉಪ್ಪಿನಕಾಯಿಗಳು, ಪುಳಿಯೋಗರೆ ಗೊಜ್ಜು ಮುಂತಾದ್ದೆಲ್ಲವನ್ನು ಒಂದೊಂದಾಗಿ ಮಾಡಿಟ್ಟರು. ಬರುವ ಬುಧವಾರ ನಾನು ಹೊರಡುವುದಿದೆ ಎನ್ನುವಾಗ ಹಿಂದಿನ ಗುರುವಾರ ಅಪ್ಪನ ಬಾಂಬೇ ಟಿಕೆಟ್ ಬಂತು. ಅವತ್ತು ರಾತ್ರಿ ಅಮ್ಮ ನನ್ನ, ಕ್ಷಿತಿಜನ ಜೊತೆಯೇ ಮಲಗಿದ್ದು, ೧೨ ಘಂಟೆಯ ತನಕ ತುಂಬ ವಿಷಯಗಳ ಬಗ್ಗೆ ಮಾತಾಡುತ್ತಲೇ ಇದ್ದರು. ಆಗ ನಮ್ಮ ಮನೆಯಲ್ಲಿ ಇನ್ನೂ ಫೋನ್ ಇರದಿದ್ದುದರಿಂದ, "ಸಾಧ್ಯವಾದಾಗಲೆಲ್ಲ ಪಕ್ಕದ ಮನೆಗೆ ಫೋನ್ ಮಾಡು, ಸಮಯ ಸಿಕ್ಕಾಗಲೆಲ್ಲ ಪತ್ರ ಬರೀತಿರು, ಅಲ್ಲಿನ ವಿಷಯಗಳನ್ನೆಲ್ಲ ಕೂಲಂಕಷವಾಗಿ ಬರಿ, ಮಗುವನ್ನ ಜೋಪಾನವಾಗಿ ನೋಡಿಕೋ," ಅಂತೆಲ್ಲ ಹೇಳಿದರು. "ನಾಳೆ ಸ್ವಲ್ಪ ಚಟ್ನಿಪುಡಿ ಮಾಡ್ಬಿಟ್ರೆ ಹೆಚ್ಚುಕಮ್ಮಿ ಎಲ್ಲ ರೆಡಿಯಾದ ಹಂಗೆ. ಇನ್ನೊಂದೆರಡು ದಿನ ಬಿಟ್ಟು ಸ್ವಲ್ಪ ಕೋಡುಬಳೆ, ಸಜ್ಜಪ್ಪ, ಪುಳ್ಳಂಗಾಯುಂಡೆ ಎಲ್ಲ ಮಾಡ್ಬಿಟ್ರೆ ಸರಿಹೋಗುತ್ತೆ. ಕ್ಷಿತಿಜನಿಗೆ ಇವತ್ತು ನೀರು ಹಾಕಿದ್ದೀನಿ, ನೀನೂ ನಾಳೆ ಎಣ್ಣೇ-ನೀರು ಹಾಕ್ಕೊಂಬಿಡು. ಹೊರಡೋ ಹೊತ್ತಿಗೆ ಇನ್ನೊಂದ್ಸಲ ಇಬ್ಬರೂ ಹಾಕ್ಕೊಂಡ್ಬಿಡ್ತೀರಂತೆ. ಇನ್ನು ಅಲ್ಲಿಗೆ ಹೋದ್ಮೇಲೆ ಎಣ್ಣೇನೂ ಕಾಣೆ, ನೀರೂ ಕಾಣೆ," ಅಂತೆಲ್ಲ ಹೇಳಿ ಮಲಗಿದರು. ಸುಮಾರು ಹೊತ್ತು ನಿದ್ದೆಯಿಲ್ಲದೇ ಹೊರಳುತ್ತಿದ್ದ ನನಗೆ ಮೂರು ಗಂಟೆಯ ವೇಳೆಗೆ ನಿದ್ದೆ ಬಂದಿರಬೇಕು. ಬೆಳಗಿನ ಜಾವ ಸುಮಾರು ನಾಕೂವರೆಯ ಹೊತ್ತಿಗೆ ಅಮ್ಮ, "ಯಾಕೋ ಎಡ ತೋಳು ನೋಯುತ್ತಿದೆ ಕಣೆ, ಅಪ್ಪನ ಹತ್ತಿರ ಹೋಗಿ ಮಲಕ್ಕೋತೀನಿ." ಎಂದು ಹೇಳಿ ಎದ್ದುಹೋದರು. ಒಂದು pain-killer ತೆಗೆದುಕೊಂಡು, ಸ್ವಲ್ಪ ಹಾಲು ಕುಡಿದು ಹಾಗೇ ಸುಮಾರು ಹೊತ್ತು ಕೂತಿದ್ದರಂತೆ. ಸುಮಾರು ಏಳು ಗಂಟೆಯ ಹೊತ್ತಿಗೆ, ಕೂತಿದ್ದ ಜಾಗದಲ್ಲೇ, ಇದ್ದಕ್ಕಿದ್ದಂತೆ ಧಢನೆ ಬಿದ್ದವರು, ಮತ್ತೆ ಏಳಲೇ ಇಲ್ಲ. ನನ್ನನ್ನು ದೂರ ಕಳಿಸುವುದಕ್ಕೆ ಮುಂಚೆ ತಾವೇ ದೂರ, ಬಹು ದೂರ ನಮ್ಮನ್ನೆಲ್ಲ ಬಿಟ್ಟು ಹೊರಟೇಹೋದರು. ಒಂದು ದಿನವೂ ಜ್ವರ, ಸುಸ್ತು ಎಂದು ಕೂಡ ಮಲಗದ, ಕೇವಲ ೪೫ ವರ್ಷದ ಅಮ್ಮ ನಮ್ಮನ್ನೆಲ್ಲ ಬಿಟ್ಟು ಒಂದೇ ಬಾರಿಗೆ ಹೊರಟುಹೋದರು. ಶುಕ್ರವಾರ, ಸುಮಂಗಲಿಯಾಗಿ ಇಷ್ಟು ಸುಖವಾದ ಸಾವು ಬರಲು ಎಷ್ಟು ಪುಣ್ಯ ಮಾಡಿದ್ದರೋ ಎಂದು ಎಲ್ಲರೂ ಮಾತಾಡಿಕೊಳ್ಳುತ್ತಿದ್ದರೆ, ಅಮ್ಮನಿಗೆ ಹೋಗುವ ವಯಸ್ಸಾಗಿತ್ತೆ ಎಂಬುದೇ ನನ್ನ ಪ್ರಶ್ನೆಯಾಗಿತ್ತು. ನಮ್ಮನ್ನು ಬಿಟ್ಟಿರಬೇಕಲ್ಲ ಎನ್ನುವುದೇ ಇಷ್ಟು ದೊಡ್ಡ ಅನಾಹುತಕ್ಕೆ ಕಾರಣವಾಯಿತೆ???

★ ★ ★


ಅಂಥಾ ತ್ಯಾಗಮಯಿ, ಪ್ರೇಮಮಯಿ ಅಮ್ಮನನ್ನು ಕಳೆದುಕೊಂಡು ಎಂಟು ವರ್ಷಗಳಾದರೂ, ಅವಳ ಸುಂದರ ನಗುಮುಖ ಮಾತ್ರ ಇಂದಿಗೂ ನನ್ನ ಕಣ್ಣ ಮುಂದೆ ಹಾಗೆಯೇ ಇದೆ. ಅಂಥಾ ಅಮ್ಮನನ್ನು ಒಂದು ದಿನವಾದರೂ ಕೂರಿಸಿ, "Happy Mother's Day, ಅಮ್ಮ," ಎಂದು ಹೇಳಲಾಗಲಿಲ್ಲವಲ್ಲ ಎಂದು ಪ್ರತಿ ಅಮ್ಮಂದಿರ ದಿನದಂದೂ ಎರಡು ಹನಿ ಕಣ್ಣೀರು ಹಾಕುವುದೂ ಒಂದು ವಾಡಿಕೆಯಾಗಿಬಿಟ್ಟಿದೆ. ಅಮ್ಮನ ಪ್ರೀತಿಯ ಕ್ಷಿತಿಜ ಟ್ರೋಫಿಗಳನ್ನು ಗೆದ್ದು ಗೆದ್ದು ತಂದಾಗಲೆಲ್ಲ, "ಅಮ್ಮ ಈಗಿದ್ದಿದ್ದರೆ?" ಎಂದು ಹಂಬಲಿಸುವುದಷ್ಟೆ ಈಗುಳಿದಿರುವುದು ಎಂದುಕೊಳ್ಳುತ್ತಿರುವಂತೆ, ಕಾಕತಾಳೀಯವೋ ಎಂಬಂತೆ kannadaaudio.comನಿಂದ ಈ ಹಾಡು ಕೇಳಿಬರತೊಡಗಿತು:

**ತಾಯಿ ದೇವಿಯನು ಕಾಣೆ ಹಂಬಲಿಸಿ ಕಾಯುತಿಹೆ ಭ್ರಮೆಯಾವರಿಸಿ,**
**ತಾಯಿ ದೇವಿಯನು ಕಾಣೆ ಹಂಬಲಿಸಿ ಕಾಯುತಿಹೆ ಭ್ರಮೆಯಾವರಿಸಿ**
**ಕಾಣುವೆಯಾ ಕರುಣಾಮಯಳಾ . . .**
**ಕಾಣುವೆಯಾ ಕರುಣಾಮಯಳಾ, ನಿಜ ಜೀವನದೆ ಮರೆಯಾದವಳ?**

◈




*ನ್ಯೂಯಾರ್ಕಿನಲ್ಲಿರುವ 'ಲಿಬರ್ಟಿ' ಪ್ರತಿಮೆಯ ಬಾಯಿ ೩ ಅಡಿ ಅಗಲವಿದೆ.*



# ನಾನು ಅನಿವಾಸಿ!




**ಕೆ. ತ್ರಿವೇಣಿ ಶ್ರೀನಿವಾಸರಾವ್**

ಇಲಿನಾಯ್, ಅಮೆರಿಕಾ, *venivas_AT_hotmail.com*


ಬಂದಿಳಿದಿದ್ದೇನೆ ನಾನು
ಈ ಹೊಚ್ಚಹೊಸ ನೆಲದಲ್ಲಿ
ನಿನ್ನೆ ಇಲ್ಲಿರಲಿಲ್ಲ ಅಲ್ಲಿದ್ದೆ
ಬರುವುದು ಬೇಕಿತ್ತೇ ಈ ಹೊತ್ತು ನಾನಿಲ್ಲಿ?

ಕಣ್ಣು ಕಂಡಿದ್ದೆಲ್ಲಾ ಬಲು ಹೊಸತು
ಹತ್ತುವಂತಿಲ್ಲ ಯಾವೊಂದು ಮುಖ ಗುರುತು
ಪರಿಚಿತರು ಬೇರೆ ಯಾರಿಲ್ಲ
ನನಗೆ ನನ್ನ ಹೊರತು!

ಅವರ ಮೈಬಣ್ಣ ಕಣ್ಣು ಕೂದಲು ಬೇರೆ
ಅವರಾರು ನನ್ನಂತಿಲ್ಲ, ನಾನೆಲ್ಲರಂತಿಲ್ಲ;
ಹಿಂಡು ಜನಗಳ ನಡುವೆ
ಒಡೆದು ತೋರುವುದು ನನ್ನೊಂದು ಮೋರೆ

ಸಂವಹನದ ಭಾಷೆ ಬೇರೆ
ನಾಲಿಗೆಯು ತೊಡರುವುದು
ಅಂದು ಕಲಿತಂತ ಆ ನುಡಿಯ ಘಮವೊಂದೇ
ಹಿತವಾಗಿ ಮೂಗಿಗಡರುವುದು

ಇಲ್ಲಿಲ್ಲ ನಾ ಬಲ್ಲೆ ; ಹುಡುಕುವಂತಿಲ್ಲ
ಅಜ್ಜಮುತ್ತಜ್ಜರ ಹೆಜ್ಜೆ ಗುರುತುಗಳ
ರಾಮಕೃಷ್ಣರು ಕೂಡ ಇಲ್ಲಿ ನಡೆದಾಡಿದಂತಿಲ್ಲ
ಹುಡುಕಿನೋಡಿದೆ ಎಲ್ಲಾ ಪುರಾಣಗಳ

ಆದರೂ ನಾ ಸೋಲೊಪ್ಪುವಂತಿಲ್ಲ
ತುಂಬು ಹೊಳೆ ನಡುವೆ ಕೈಚೆಲ್ಲುವಂತಿಲ್ಲ
ಆ ದಡವೋ ಈಗ ಕಣ್ಗೆ ಮರೆಯಾಗಿ ಹೋಗಿದೆ
ಈ ದಡವೊಂದೇ ಈಗ ಆಸರೆಗೆ ಕರೆಯುತಿದೆ

ಬೇರೂರಿ ಬಿಡಬೇಕು ಹೂಹಣ್ಣುಕಾಯಿಗಳ
ಈ ಅಪರಿಚಿತ ನೆಲದಲ್ಲಿ
ಬೆಳೆದುಕೊಳ್ಳಲೇ ಬೇಕು ಜಳ್ಳಿರದ ಕಾಳುಗಳ
ಈ ಎದೆಯ ಹೊಲದಲ್ಲಿ

ಇಲ್ಲಿರುವವರ ಕಣ್ಣಲ್ಲಿ
ನಾನು ಅನ್ಯ ಅನಿವಾಸಿ
ಅಲ್ಲಿರುವವರ ಮನದಲ್ಲೂ
ಕೊಂಚ ಇದೇ ತರದ ಕಸಿವಿಸಿ

ಅನಿವಾಸಿ ನಾನು, ನಾನು ಅನಿವಾಸಿ
ಮೆಟ್ಟಿದೂರಲ್ಲು, ಹುಟ್ಟಿದೂರಲ್ಲೂ!
ಅನಿವಾಸಿ ನಾನು, ನಾನು ಅನಿವಾಸಿ
ಇಲ್ಲೂ....ಅಲ್ಲೂ .... ಎಲ್ಲೆಲ್ಲೂ..... !!

# ಸರ್ವಾಂತರ್ಯಾಮಿ ಗಣಕಯಂತ್ರ - ಸಮೀಕ್ಷೆ




*ಯಂತ್ರಾಂಶದ ಪರಿಗಣನಾ ಶಕ್ತಿ ಪ್ರತಿ 18-24 ತಿಂಗಳಿಗೆ ದುಪ್ಪಟ್ಟು ಆಗ್ತಿರ್ತದ. ಈ ಸಂಗತಿ ಸ್ವಲ್ಪ ವರ್ಷ ನಡೆದಿದ್ದಲ್ಲ - ಸುಮಾರು ನಲವತ್ತು ವರ್ಷ ನಡೆದು ಬಂದಿದ್ದದ. ಇದಕ್ಕ ಮೂರನ ನಿಯಮ ಅಂತಾರ.*

**ದತ್ತಾತ್ರೇಯ ಕುಲಕರ್ಣಿ**
ಸಾಂತಾ ಕ್ಲಾರಾ, ಕ್ಯಾಲಿಫೋರ್ನಿಯ, *suhasini.datta_AT_gmail.com*

ಕನ್ನಡ ಶಾಲೆಗೆ ಹೋದೆ, ಕನ್ನಡ ಕಲಿತೆ, ಕನ್ನಡಿಗನಾಗಿ ಬೆಳೆದೆ, ಕನ್ನಡದ ಹೆಮ್ಮೆ ಮೈದುಂಬಿಸಿಕೊಂಡೆ. ಆದ್ರ ಏನಾತು, ಎಲ್ಲಾರ ಹಂಗ, ಜನಪ್ರಿಯ ಜೀವನೋಪಾಯ ಮಾರ್ಗ ಹಿಡಿದೆ. ವಿಜ್ಞಾನ ಪದವಿ-ಪೂರ್ಣವಾಯಿತು ಇಂಗ್ಲೀಷನ್ಯಾಗ. ತಂತ್ರಜ್ಞಾನ ಮಾಡ್ಲಿಕ್ಕೇ ಬೇಕು ಅಂದೆ, ಅದೂ ಆತು, ಹಂಗ ಮುಂದಮುಂದಕ್ಕ ಮುಗಿಯದ ದಾರಿ ತುಳಿದೂ ಆತು. ಕಲಿತಿದ್ದೆಲ್ಲ ಎಲೆಕ್ಟ್ರಾನಿಕ್ಸ ಮತ್ತು ಕಂಪ್ಯೂಟರ ಸೈನ್ಸ. ಮಾತಾಡಿದ್ದು, ಹರಟಿದ್ದು, ತರ್ಕಿಸಿದ್ದು ಎಲ್ಲಾ ಕನ್ನಡದಾಗ. ಆದ್ರ ಕೆಲಸದ, ಟೆಕ್ನಿಕಲ್ ಶಬ್ದ ಬಂದಾಗ ಕನ್ನಡ ಮಾತು ಬ್ಯಾರೆ ಅನಸ್ತಿದ್ದು. “ಕಂಪ್ಯೂಟರ ನಮ್ಮಂಗ ವಿಚಾರ ಮಾಡಬೇಕು ಅಂದ್ರ ಅದು ಇನ್ಫಾರ್ಮೇಶನ್ ಹೆಂಗ ಪ್ರೊಸೆಸ್ ಮಾಡಬೇಕು, ರೀಸನಿಂಗ ಹಿಂದ ಇರು ಲಾಜಿಕ ಏನು,” ಹಿಂಗ ಏನೇನೋ ವಿಚಾರ ಕನ್ನಡ-ಇಂಗ್ಲೀಷ ಕಲಸುಮೇಲೋಗರ. ವರ್ಷಗಳು ಹೋದ್ರೂ ನನ್ನ ಸಂಶೋಧನೆಗಾಗಲಿ, ಇಲ್ಲಾ ಕೆಲಸಕ್ಕಾಗಲಿ ಸಂಬಂಧಿಸಿದ್ದು ಕನ್ನಡ ಶಬ್ದ ಅವ ಏನು ಅಂತ ವಿಚಾರನಽ ಬರಲಿಲ್ಲ, ಬಂದ್ರು ಮುಂದುವರಿಲಿಲ್ಲ. ಕನ್ನಡಕ್ಕೂ ನನ್ನ ವ್ರತ್ತಿಸೀಮೆಗೂ ಸಂಬಂಧನಽ ಇಲ್ಲದಂಗ ಇತ್ತು. ಈಗ ಅನಸ್ತು, ಎಲ್ಲಾಕು ಇಲ್ಲ, ನನ್ನ ಕನ್ನಡಕ್ಕ ನಿಲಿಕಿದಷ್ಟು ಆದ್ರು ಯಾಕ ಬ್ಯಾಡ, ಅಷ್ಟಾದ್ರೂ ಪ್ರಯತ್ನ ಮಾಡಬೇಕಾಗಿತ್ತು. ನಾನೇನು ಕನ್ನಡದಾಗ ವ್ರತ್ತಿಸೀಮೆಗೆ ಸಂಬಂಧಿಸಿದ್ದು ಏನೇನು ಶಬ್ದ ಸೃಷ್ಟಿ ಮಾಡ್ಯಾರ ಅಂತ ಸಂಶೋಧನೆ ಮಾಡಿದವ ಅಲ್ಲ. ನನಗೇನು ಎಲ್ಲಾ ವ್ರತ್ತಿಸೀಮೆಗೆ ಸಂಬಂಧಿಸಿದ ಶಬ್ದಕ್ಕೂ ಕನ್ನಡ ಶಬ್ದ ಬೇಕೇ ಬೇಕು ಅಂತ ಅನಸೂದೂ ಇಲ್ಲ. ಇಷ್ಟ, ಕನ್ನಡ ಮಾತು ಟೆಕ್ನಾಲಜಿ ಕಾಲಾಗ ಸಿಕ್ಕು ಸೊರಗಬಾರ್ದು ಅಂತ. ನನಗ ಕನ್ನಡ ಬರ್ತದ ಹೊರತಾಗಿ ಸಾಹಿತ್ಯಿಕ ಕನ್ನಡ ಬರೂದಿಲ್ಲ. ಅಂದಕೊಂಡೆ, ನನಗ ಬಂದಂಗ ನನ್ನ ವ್ರತ್ತಿಗೆ ಸಂಬಂಧಿಸಿದ್ದ ವಿಷಯದ ಮ್ಯಾಲೆ ಏನರೆ ಬರಿಯೂ ಪ್ರಯತ್ನ ಮಾಡೋಣ. ಆಗ ಶುರು ಆತು - ಸರ್ವಾಂತರ್ಯಾಮಿ ಕಂಪ್ಯೂಟರ್ ಕ್ಷೇತ್ರದ ಸಮೀಕ್ಷೆ – ಕನ್ನಡದಾಗ.

ಕಂಪ್ಯೂಟರ - ಹೂಂ ಪ್ರಯತ್ನ ಶುರು ಆಗಲಿ - ಗಣಕಯಂತ್ರ - ಹೆಸರಿನ್ಯಾಗ ಇದ್ದಂಗ ಒಂದು ಯಂತ್ರ. ಇದರೊಳಗ ಹಲವಾರು ತರಹ. ದೊಡ್ಡದೊಡ್ಡ ಪರಮಗಣಕ ಅವ, ಪುಟ್ಟಪುಟ್ಟ ಸ್ವಕೀಯಸಹಾಯಕ ಅವ, ನಡುವ ಸ್ವಕೀಯಗಣಕ ಅವ, ಮತ್ತ ಕಚೇರಿ ಒಳಗ ಇರೂ ಇಲಾಖಾಗಣಕ ಅವ. ಇವೆಲ್ಲಕ್ಕೂ ಪರಿಗಣನಾ ಸಾಮರ್ಥ್ಯ ಬ್ಯಾರೆಬ್ಯಾರೆ, ಅವುಗಳ ರಚನಾವಿನ್ಯಾಸ (ವಾಸ್ತು) ಬ್ಯಾರೆಬ್ಯಾರೆ. ಆದ್ರ, ಮೂಲಯಂತ್ರ, ಮತ್ತು ಯಂತ್ರದ ಮೂಲ ತತ್ವ ಎಲ್ಲಾ ಒಂದ. ಮೂಲಯಂತ್ರದೊಳಗ ಕೇಂದ್ರ ಪರಿಗಣನಾ ಘಟಕ ಇರ್ತದ. ಸ್ಮೃತಿಸಂಚಯದೊಳಗ ಮಾಹಿತಿಭಂಡಾರ ಇರ್ತದ. ಕೇಂದ್ರ ಪರಿಗಣನಾ ಘಟಕ ಗಣಕಪ್ರಬಂಧದ ಸೂಚನೆ ಹೆಂಗ ಇರ್ತದೊ ಹಂಗ ಮಾಹಿತಿ ಪರಿಷ್ಕಾರ ಮಾಡ್ತದ. ಇದಕ್ಕ ಫಾನ್ ನೊಯಮನ್ ವಿನ್ಯಾಸ ಅಂತಾರ. ಪರಮಗಣಕದೊಳಗ ಭಾಳಷ್ಟು ಕೇಂದ್ರ ಪರಿಗಣನಾ ಘಟಕ ಇರ್ತಾವ, ಉದಾಹರಣೆಗೆ ೧೦,೦೦೦. ಇಲಾಖಾಗಣಕದೊಳಗ ೪ರಿಂದ ೩೨ ಇರಬಹುದು. ಸ್ವಕೀಯಗಣಕದೊಳಗ ಒಂದು ಕೇಂದ್ರ ಪರಿಗಣನಾ ಘಟಕ ಇರ್ತಿತ್ತು, ಹೊಸಾ ಸುದ್ದಿ, ಎರಡು ಇರುವು ಪ್ಯಾಟಿಯೊಳಗ ಬಂದಾವ. ಮೊದಮೊದಲಿಗೆ, ಬ್ಯಾರೆಬ್ಯಾರೆ ಗಣಕ ನಿರ್ಮಾಪನಾ ಉದ್ಯೋಗದವರ ಗಣಕಯಂತ್ರ ಬ್ಯಾರೆಬ್ಯಾರೆ ರಚನಾವಿನ್ಯಾಸದ್ದು ಇರತಿದ್ದು. ಈಗ, ಅದೂ ಸ್ವಕೀಯಗಣಕ ಜನಪ್ರಿಯ ಆದಂಗ, ರಚನಾವಿನ್ಯಾಸ ಒಂದೇ ತರಹ ಆಗ್ಲಿಕತ್ತಾವ. ರಚನಾವಿನ್ಯಾಸ, ಅದಕ್ಕ ಬೇಕಾಗಿರು ಅಂಗಗಳು, ಸಾಮಗ್ರಿಗಳು ಇಷ್ಟು ನಿರ್ದಿಷ್ಟಮಾನ ಆಗ್ಯಾವಲ್ಲ, ಪ್ರಯತ್ನ ಮಾಡಿದ್ರ ಮನೆಯೊಳಗ ಪರಮಗಣಕ ಮಾಡಬಹುದು. ಅದರಲೆ ಮನಿಯೊಳಗ ಏನು ಉಪಯೋಗ ಮಾಡ್ತೀರಿ ಅದು ಬ್ಯಾರೆ ಮಾತು.

ಗಣಕಯಂತ್ರ ಸಂಶೋಧನೆ ನಡೀತಿರುದು ಈ ಎಲ್ಲ ತರಹ ಅಂತ ಹೇಳಬಹುದು. ಗಣಕಯಂತ್ರದ ವಿನ್ಯಾಸ, ಗಣಕಾಂಗ ವ್ಯವಸ್ಥಾಪಕ, ಗಣಕಪ್ರಬಂಧದ ಭಾಷೆಗಳು, ಅವುಗಳ ವಿನ್ಯಾಸ, ಪ್ರಬಂಧ ಕ್ರಮವಿಧಿ, ಅವುಗಳ ಕ್ಲಿಷ್ಟತೆ, ಪ್ರಯೋಜನೆಗಳು, ಮಾಹಿತಿಯ ಭಂಡಾರಗಳು, ಕಾರ್ಯನಿರ್ವಹಣಾಶಕ್ತಿಯ ಸುಧಾರಣೆ, ಮುಂತಾದವು. ಎಲ್ಲ ಒಟ್ಟುಗೂಡಿಸಿ ಯಂತ್ರಾಂಶ ಮತ್ತು ತಂತ್ರಾಂಶ ಅಂತ ವಿಂಗಡಿಸಬಹುದು. ಯಂತ್ರಾಂಶ ಅಂದ್ರ ಗಣಕಯಂತ್ರ ಮಾಡಲಿಕ್ಕೆ ಏನೇನು ಎಲೆಕ್ಟ್ರಾನಿಕ್ಸ ಬೇಕಾಗ್ತದ ಅದೆಲ್ಲ. ತಂತ್ರಾಂಶ ಅಂದ್ರ ಗಣಕಯಂತ್ರ ಉಪಯೋಗಿಸಲಿಕ್ಕೆ ಏನೇನು ಗಣಕಪ್ರಬಂಧ ಇರತಾವ ಅದೆಲ್ಲ. ಭಾಳಷ್ಟು ಸಂಶೋಧನೆ ಗುರಿ - ಹೆಚ್ಚು ಕೆಲಸ ಬೇಗ, ಅಂದ್ರ, ಕಡಿಮೆ ಹೊತ್ತಿನೊಳಗ ಹೆಂಗ ಮಾಡೂದು ಅಂತ. ಈ ಸಂಶೋಧನೆಯಿಂದ ಯಂತ್ರಾಂಶ ಇಲ್ಲಾ ತಂತ್ರಾಂಶ ಸುಧಾರಣೆ ಸದಾ ಆಗ್ತಿರ್ತದ. ದೊಡ್ಡ ದೊಡ್ಡ ಕಾರ್ಯಾಲಯದೊಳಗ ಮಾತ್ರ ಒಂದಾನೊಂದು ಕಾಲಕ್ಕ ಸಿಗತಿರತಿದ್ದ ಪರಿಗಣನಾ ಶಕ್ತಿ, ಜೇಬಿನೊಳಗ ಇಡು ಸ್ವಕೀಯಸಹಾಯಕಕ್ಕ ಬಂದದ. ಪರಮಗಣಕದೊಳಗ ತಿಂಗಳಗಟ್ಟಲೆ ಏನು ವರ್ಷಗಟ್ಟಲೆ ಪರಿಗಣಿಸಬೇಕಾದ ಕೆಲಸ ಎಷ್ಟೋ ಪಟ್ಟು ಲಗು ಆಗ್ತಾವ. ಕಾರ್ಖಾನೆಯೊಳಗ ತಯಾರು ಮಾಡು ಮೊದಲನ, ಬರೆ ತಂತ್ರಾಶದಲೆ ಸೃಷ್ಟಿ ಮಾಡಿ,





ಚಿತ್ರ ೧ (ಕೃಪೆ : ಇಂಟೆಲ್ ಕಾರ್ಪೊರೇಶನ್)

ಅಕಸ್ಮಾತ್ ಡಿಕ್ಕಿ ಹೊಡದ್ರ ಕಾರಿಗೆ ಏನೇನ ಧಕ್ಕೆ ಆಗಬಹುದು ಅಂತ ನೋಡ್ಲಿಕ್ಕೆ ಬರ್ತದ. ಒಂದ ವಾರ ಆದ ಮ್ಯಾಲೆ ಏನು ಹವಾಮಾನ ಇರಬಹುದು ಅಂತ ಹೇಳಲಿಕ್ಕೆ ಬರ್ತದ.

ಯಂತ್ರಾಂಶದ ಪರಿಗಣನಾ ಶಕ್ತಿ ಪ್ರತಿ ೧೮-೨೪ ತಿಂಗಳಿಗೆ ದುಪ್ಪಟ್ಟು ಆಗ್ತಿರ್ತದ. ಈ ಸಂಗತಿ ಸ್ವಲ್ಪ ವರ್ಷ ನಡೆದಿದ್ದಲ್ಲ - ಸುಮಾರು ನಲವತ್ತು ವರ್ಷ ನಡೆದು ಬಂದಿದ್ದದ. ಇದಕ್ಕ ಮೂರನ ನಿಯಮ ಅಂತಾರ. ೧೯೬೫ರೊಳಗ ಗೊರ್ಡನ್ ಮೂರ್ ಅವರು ಆವಾಗಿನ ಎಲೆಕ್ಟ್ರಾನಿಕ್ಸ ಉದ್ದಿಮೆ ಮತ್ತು ಸಂಶೋಧನೆಯ ಪ್ರಗತಿಯನ್ನು ಅವಲೋಕಿಸಿ ೧೨ ತಿಂಗಳಿಗೊಂದು ಸಾರಿ ಇಂಟಗ್ರೇಟೆಡ್ ಸರ್ಕೀಟ್ ಸಾಂದ್ರತೆ ದುಪ್ಪಟ್ಟಾಗುವದು ಸ್ವಯಂಸಿದ್ಧ ಅಂತ ಹೇಳಿದ್ರು. ಮುಂದಿನ ವರ್ಷಗಳೊಳಗ ಸಂಶೋಧಕರು ಈ ನಿಯಮಾನ ಗುರಿಯೆಂದು ಹಿಡಿದು, ಸಂಶೋಧನೆ ಮಾಡಿ, ನಿಯಮಾನ ಸತ್ಯ ಮಾಡ್ಲಿಕತ್ತಾರ. ಇಂಟಗ್ರೇಟೆಡ್ ಸರ್ಕೀಟ್ ಸಾಂದ್ರತೆ ಜಾಸ್ತಿ ಆದಂಗ ಗಣಕಯಂತ್ರಶಿಲ್ಪಿಗಳು ಹೊಸಹೊಸ ವಿನ್ಯಾಸ ಮಾಡ್ಲಿಕ್ಕಾತು. ಕೇಂದ್ರ ಪರಿಗಣನಾ ಘಟಕ ಅರ್ಥ ಮಾಡಕೊಳು ಸೂಚನಾಸಮೂಹಗಳ (instruction set) ವಿನ್ಯಾಸ ಬ್ಯಾರೆಬ್ಯಾರೆ ಆತು, ಮತ್ತ ಅವುಗಳ ಕ್ಲಿಷ್ಟತಾ ಹೆಚ್ಚು ಆತು. ಒಂದ ಇರತಿದ್ದ ಕೇಂದ್ರ ಪರಿಗಣನಾ ಘಟಕದ ಅಂಗಗಳು ಅನೇಕ ಆದು. ಕೇಂದ್ರ ಪರಿಗಣನಾ ಘಟಕದ ವೇಗ ಹೆಚ್ಚು ಆತು. ಆದ್ರ ಖರೆ - ಸ್ಮೃತಿಸಂಚಯದಿಂದ ಮಾಹಿತಿ ತರೂ ವೇಗ, ಕೇಂದ್ರ ಪರಿಗಣನಾ ಘಟಕದ ವೇಗದಷ್ಟು ವರ್ಷದಿಂದ ವರ್ಷಕ್ಕ ಹೆಚ್ಚು ಆಗಲಿಲ್ಲ. ಅದಕ್ಕ, ಗಣಕಯಂತ್ರದ ಶಿಲ್ಪಿಗಳು ಕೇಂದ್ರ ಪರಿಗಣನಾ ಘಟಕದ ಜೋಡಿ ಕೂಡಿಸಿ ಸ್ಮೃತಿಸಂಚಯ ವಿನ್ಯಾಸ ಮಾಡಿದ್ರು - ಅದು ಶೀಘ್ರಸ್ಮೃತಿಸಂಚಯ ಆತು. ಮತ್ತಮತ್ತ ಬೇಕಾಗಿರು ಮಾಹಿತಿ ಶೀಘ್ರಸ್ಮೃತಿಸಂಚಯದೊಳಗ ಇರ್ತದ - ಹಿಂಗಾಗಿ ಉದ್ದಕ ಸ್ಮೃತಿಸಂಚಯಕ್ಕ ಹೋಗುದು ಕಡಿಮೆ ಆತು. ಇದರಿಂದ ಕೇಂದ್ರ ಪರಿಗಣನಾ ಘಟಕ ಮಾಹಿತಿಯಿಂದ ಮಾಹಿತಿ ಸಲುವಾಗಿ ಕಾಯುವ ಬದಲಿಗೆ ಗಣಕಪ್ರಬಂಧ ಸೂಚನಾ ಲಗುಲಗು ಪಾಲಿಸಲಿಕ್ಕಾತು. ವರ್ಷ ಹೋದಂಗ ಶೀಘ್ರ ಸ್ಮೃತಿಸಂಚಯಗಾತ್ರ ಹೆಚ್ಚು ಆಗ್ಲಿಕತ್ತದ. ಗಣಕಯಂತ್ರದಿಂದ ಮಾಡುವ ಉಪಯೋಗ, ಅದಕ್ಕ ಬೇಕಾಗುವ ತಂತ್ರಾಂಶ ಹೆಚ್ಚು ಆದು. ಅವಕ್ಕೆಲ್ಲಾ ಹೆಚ್ಚು ಸ್ಮೃತಿಸಂಚಯ ಬೇಕಾತು. ಅದಕ್ಕ ಪ್ರತಿ ೧೮-೨೪ ತಿಂಗಳಿಗೆ ಸ್ಮೃತಿಸಂಚಯದ ಸಾಂದ್ರತೆ ಮತ್ತು ಗಾತ್ರ ದುಪ್ಪಟ್ಟು ಆಗ್ಲಿಕತ್ತು. ಖರೆ, ಅದರ ವೇಗ ದುಪ್ಪಟ್ಟಾಗವಲ್ಲು ಅಂತ ಹೇಳಬೇಕಾಗಿಲ್ಲ.

ಗಣಕಯಂತ್ರಗಳ ಉಪಯೋಗ ಮತ್ತು ಅದರ ಸಂಖ್ಯ ಹೆಚ್ಚು ಆದಂಗ ಅವೆಲ್ಲದರ ನಡುವ ಹೇಳು-ಕೇಳು ಸವಲುತ್ತು ಇರಬೇಕಾತು. ಮೊದಲಿಗೆ ಒಂದು ಕಾರ್ಯಾಲಯದೊಳಗಿರು ಗಣಕಯಂತ್ರಗಳ ನಡುವ ಹೇಳು-ಕೇಳು ಮಾಡ್ಲಿಕ್ಕಾತು. ಅದರಿಂದ ಒಂದರಿಂದ ಇನ್ನೊಂದು ಗಣಕಯಂತ್ರಕ್ಕ ಮಾಹಿತಿ ವಿನಿಮಯ ಮಾಡ್ಲಿಕ್ಕಾತು. ಹೇಳು-ಕೇಳು ಸಂಶೋಧನೆ ಹೆಚ್ಚು ಆದಂಗ, ಗಣಕಯಂತ್ರಗಳ ಉಪಯೋಗ ಹೆಚ್ಚು ಆದು. ಈ-ಮೇಲ್ ಬಂತು, ಸುದ್ದಿಸಮೂಹಗಳು ಹುಟ್ಟಿದವು. ಅಂತರ್ಜಾಲ ಇವೆಲ್ಲ ಉಪಯೋಗ ಕೂಡಿ ಆದ ಒಂದು ಮುಖ್ಯ ಉಪಯೋಗ. ಅದರಿಂದ ಅಂತರ್ಜಾಲ ಸಿಗು ಕಡೆ ಜನಜೀವನಕ್ಕ ಹೊಸ ತಿರುವು ಬಂತು. ಬ್ಯಾಂಕ ಕ್ಲಾರ್ಕ ಮುಖ ನೋಡದ ಹಣಕಾಸು ವ್ಯವಹಾರ ಮಾಡ್ಲಿಕ್ಕಾತು. ವಿದ್ಯಮಾನ ಆಗೊ ಪುರುಸೊತ್ತಿಲ್ಲದ, ಅದರ ಸುದ್ದಿ ನೋಡ್ಲಿಕ್ಕಾತು. ಅಂತರ್ಜಾಲದ ಮ್ಯಾಲೆ ದೂರವಾಣಿ, ದೂರದೃಶ್ಯ, ದೂರಹರಟಿ ಸಾಧ್ಯ ಆದು. ಈಗ ನಡೆದಿರು ಸಂಶೋಧನೆ ಎಲ್ಲ ಪರಿಗಣನಾ-ಶಕ್ತಿ ಮತ್ತು ಹೇಳು-ಕೇಳು ವೇಗ ಎರಡೂ ಉಪಯೋಗಿಸಿ ಹೊಸಹೊಸ ಜನೋಪಯೋಗಿ-ಪ್ರಯೋಜನ ಇಲ್ಲ ಆ ಪ್ರಯೋಜನ ಸಲುವಾಗಿನ ಇರು ಯಂತ್ರ ಸೃಷ್ಟಿ ಮಾಡೂದು. ಏನ ಒಂದು ಯಂತ್ರ ಬಂದ್ರು ಅದು ಶೀಘ್ರ ಇರಬೇಕಾಗ್ತದ, ಮತ್ತ ಅಂತರ್ಜಾಲದಲೆ ಮಾಹಿತಿ ಶೀಘ್ರ ತಂದು ತೋರಸಬೇಕಾಗ್ತದ.





**ಚಿತ್ರ ೨**

ಇನ್ನು ಯಂತ್ರಾಂಶ ಮತ್ತು ತಂತ್ರಾಂಶದಲ್ಲಾದ ಮುಖ್ಯ ಸಂಶೋಧನಾ ಪ್ರಗತಿಗಳಲ್ಲಿ ಹಲವು ತರಹದ ಸಮಾನಾಂತರತೆ ಒಂದು. ಸಮಾನಾಂತರತೆ ಎಲ್ಲಿ ಉಪಯೋಗಸ್ಲಿಕ್ಕೆ ಆಗ್ತದೊ ಅಲ್ಲಿ ಕೆಲಸ ಲಗು ಆಗ್ತಾವ. ಇರುವೆ ಸಾಲು ಇದಕ್ಕೊಂದು ಒಳ್ಳೆ ಉದಾಹರಣೆ. ಒಂದ ಇರುವೆ ಆಹಾರ ಗೂಡಿಗೆ ಸಾಗಿಸುದಕ್ಕಿಂತ ಬಹಳಷ್ಟು ಜೋಡಿ ಕೂಡಿ ಸಾಗಿಸುದು ಎಷ್ಟು ಸರಳ. ಒಂದೊಂದು ಇರುವೆ ತರುವ ಆಹಾರ ಸ್ವಲ್ಪ, ಖರೆ. ಆದರೆ ಎಲ್ಲಾ ಕೂಡಿ ಎಷ್ಟು ತರ್ತಾವ. ಆಹಾರ ಸಾಗಿಸಬೇಕಾದ್ರ ಒಂದಕ್ಕೊಂದು ಸಂಜ್ಞೆ ಕೊಟ್ಟು ಹೇಳು-ಕೇಳು ಮಾಡಿ ಮೇಳೈಸ್ತಾವ. ಸಮಾನಾಂತರತೆ ಇಲ್ಲದ ಪರಿಗಣನಾ ಶಕ್ತಿ ಹೆಚ್ಚು ಮಾಡೂದು ಕಷ್ಟ ಅದ. ಅದಕ್ಕ ಯಂತ್ರಾಂಶ ಮತ್ತು ತಂತ್ರಾಂಶಗಳೊಳಗ ಸಮಾನಾಂತರತೆ ಬಹಳ ಉಪಯೋಗ ಆಗ್ತದ. ಕೇಂದ್ರ ಪರಿಗಣನಾ ಘಟಕ ಹಲವು ಗಣಕಪ್ರಬಂಧದ ಸೂಚನೆಗಳನ್ನು ಒಂದ ಕಾಲಕ್ಕ ಪರಿಷ್ಕರಿಸ್ತದ. ತಂತ್ರಾಂಶದ ಸೂಚನೆ ಒಂದ ತಂತು ಇರು ಬದಲಿಗೆ ಬಹಳ ತಂತುಗಳೊಳಗ ಇರಬಹುದು. ಇವೆಲ್ಲ ತಂತು ಇರುವ ಎಲ್ಲ ಕೇಂದ್ರ ಪರಿಗಣನಾ ಘಟಕಗಳು ಒಂದ ಕಾಲಕ್ಕ ಪರಿಷ್ಕರಿಸಬಹುದು. ಚಿತ್ರ ೨ರೊಳಗ ಸಮಾನಾಂತರ ಗಣಕ ಪ್ರಬಂಧದ ಒಂದು ಉದಾಹರಣೆ ಅದ. ಒಂದ ಪ್ರಬಂಧದೊಳಗ ಬಹಳಷ್ಟು ತಂತು ಇರ್ತಾವ. ಒಂದೊಂದು ತಂತು ಒಂದೊಂದು ಕೆಲಸ ಮಾಡತಿರಬಹುದು, ಇಲ್ಲ ಅದ ಕೆಲಸ ಬ್ಯಾರೆ ಬ್ಯಾರೆ ಮಾಹಿತಿ ಮ್ಯಾಲೆ ಮಾಡಬಹುದು. ನಡುನಡುವ, ಪ್ರಬಂಧದ ಸೂಚನೆ ಪ್ರಕಾರ ತಂತುಗಳು ಮೇಳೈಸ್ತಾವ. ಈ ಮೇಳೈತ, ಬರೆ ತಂತುಗಳ ನಡುವ ಮಾಹಿತಿ ಬದಲಾಯಿಸಲಿಕ್ಕೆ ಹೇಳು-ಕೇಳು ಮಾಡಿನೂ ಆಗಬಹುದು. ಒಟ್ಟಿಗೆ ಮಾಡು ಕೆಲಸ ಎಲ್ಲ ತಂತುಗಳುಗಳೊಳಗ ಹಂಚಿಹೋಗತದ. ಇದರಿಂದ ಪ್ರಬಂಧದ ವೇಗ ಹೆಚ್ಚು ಆಗ್ತದ. ಮೇಳೈತ ಎಷ್ಟು ಕಡಿಮೆ ಇರತದೊ ಅಷ್ಟೂ ವೇಗ ಹೆಚ್ಚು, ತಂತುಗಳ ಸಂಖ್ಯಾ ಎಷ್ಟು ಹೆಚ್ಚು ಇರತದೊ ಅಷ್ಟೂ ವೇಗ ಹೆಚ್ಚು. ಪ್ರಬಂಧ ಕ್ರಮವಿಧಿಯೊಳಗ ಸ್ವಾಭಾವಿಕವಾದ ಮತ್ತು ಅನಿವಾರ್ಯವಾದ ಏಕತಂತು ಭಾಗ ಪರಿಷ್ಕರಿಸಲಿಕ್ಕೆ ಎಷ್ಟು ಸಮಯ ಬೇಕೊ, ಅದ ವೇಗದ ಮಿತಿ ನಿಶ್ಚಯ ಮಾಡತದ.


ಸಮಾನಾಂತರತೆ ಬಗ್ಗೆ ಇನ್ನು ಸ್ವಲ್ಪ ಮುಂದ ವಿಚಾರ ಮಾಡಬೇಕಂದ್ರ, ಚಿತ್ರ ೨ರೊಳಗಿನ ಸಮಾನಾಂತರತೆ ಒಂದು ಉದಾಹರಣೆ ಮಾತ್ರ. ಯಂತ್ರಾಂಶದೊಳಗಿರಲಿ, ತಂತ್ರಾಂಶದೊಳಗಿರಲಿ, ಎರಡು ಮುಖ್ಯ ತರಹ ಸಮಾನಾಂತರತೆ ಇರ್ತಾವ ಅನಬಹುದು. ಚಿತ್ರ ೩ರೊಳಗ ನಾಳ-ಸಮಾನಾಂತರತೆಯ ಉದಾಹರಣೆ ಅದ. ಎರಡು ಉಂಡೆ ಐಸ್‌ಕ್ರೀಮ ಹಾಕಿ, ಮ್ಯಾಲೆ ಚೆರ್ರಿ ಇಟ್ಟುಕೊಡಲಿಕ್ಕೆ ೩ ಮಿನಟು ಬೇಕಾದೀತು ಅಂತ ಇರಲಿ. ಅಂದ್ರ ಪ್ರತಿ ಗಿರಾಕಿಗೂ ೩ ಮಿನಟನಂತೆ ಕಾಯಬೇಕಾತು. ಆದ್ರ ನಾಳ-ಸಮಾನಾಂತರತೆ ಉಪಯೋಗಿಸಿದ್ರ ಪ್ರತಿ ಗಿರಾಕಿಗೂ ೧ ಮಿನಟು ಕಾಯ್ದರೆ ಸಾಕು. ಒಬ್ಬ ಕೆಲಸದವ ಖಾಲಿ ಬಟ್ಟಲಲ್ಲಿ ಒಂದು ಉಂಡೆ ಐಸ್‌ಕ್ರೀಮ ಹಾಕಿ, ಮುಂದಿನ ಕೆಲಸದವಗ ಕೊಡತಾನ. ಇನ್ನೊಬ್ಬ ಕೆಲಸದವ ಇನ್ನೊಂದು ಉಂಡೆ ಹಾಕಿ, ಮುಂದಿನ ಕೆಲಸದವಗ ಕೊಡತಾನ. ಕೊನೆಯವ ಚೆರ್ರಿ ಇಟ್ಟು ಕೊಡತಾನ. ಒಟ್ಟಿಗೆ ೩ ಪಟ್ಟು ವೇಗ ಹೆಚ್ಚು ಆತು. ಅದರೊಳಗ ಒಬ್ಬ ಗಿರಾಕಿಗೆ ಒಂದೇ ಉಂಡೆ ಐಸ್‌ಕ್ರೀಮ ಬೇಕಾದ್ರ ಎರಡನೆ ಕೆಲಸದವ ಖಾಲಿ ಇರತಾನ. ಅವನ ಪೂರ್ತಿ ಉಪಯೋಗ ಆಗಲಿಲ್ಲ. ನಾಳ-ಸಮಾನಾಂತರತೆ ಬಹಳ ಕಡೆ ಉಪಯೋಗ ಆಗತದ. ಕಾರು ತಯಾರಿ ಮಾಡು ಕಾರ್ಖಾನೆ ಒಂದು ಉದಾಹರಣೆ. ಯಂತ್ರಾಂಶದೊಳಗ ಕೇಂದ್ರ ಪರಿಗಣನಾ ಘಟಕ ಪ್ರತಿ ಸೂಚನೆಯನ್ನೂ ಹಿಂಗ ಪರಿಷ್ಕಾರ ಮಾಡತಾವ.

ಅಂಗಡಿಗಳೊಳಗಿನ ಗಲ್ಲೆ ಸಾಲುಗಳು ಇನ್ನೊಂದು ತರಹದ ಸಮಾನಾಂತರತೆಗೆ ಉದಾಹರಣೆ. ಗಲ್ಲೆ ಸಾಲು ಹೆಚ್ಚು ಇದ್ದಷ್ಟು ವೇಗವಾಗಿ ಗಿರಾಕಿಗಳು ಕೆಲಸ ಮುಗಿಸುತ್ತಾರೆಂದು ಹೇಳಬೇಕಾಗಿಲ್ಲ. ಕೆಲಸದವರು ಒಬ್ಬರಿಗೊಬ್ಬರು ಹೇಳಿ-ಕೇಳಿ ಪ್ರತಿ ಗಿರಾಕಿಯ ಸಾಮಾನಿನ ಲೆಕ್ಕ ಹೆಚ್ಚುತ್ತಾರೆ. ಈ ಸಮಾನಾಂತರತೆ ಮತ್ತು ನಾಳ-ಸಮಾನಾಂತರತೆ ಕೂಡಿಸಬಹುದು. ಉದಾಹರಣೆಗೆ ಪ್ರತಿ ಗಲ್ಲೆಯಲ್ಲೂ, ದರ ಹಚ್ಚುವವರೊಬ್ಬರು, ಚೀಲದಲ್ಲಿ ಹಾಕುವವರೊಬ್ಬರು, ಚೀಲ ಸಾಮಾನು ಚಕ್ಕಡಿಯಲ್ಲಿಡುವವರೊಬ್ಬರು ಇರಬಹುದು.




**ಚಿತ್ರ ೩**

ಒಟ್ಟು ಮಿಶ್ರ ಸಮಾನಾಂತರತೆ ಯಂತ್ರಾಶದೊಳಗ, ತಂತ್ರಾಂಶದೊಳಗ ಇರೋದು ಸಾಮಾನ್ಯ, ಮತ್ತು ವೇಗ ಹೆಚ್ಚು ಮಾಡಲಿಕ್ಕೆ ಅನಿವಾರ್ಯ.




**ಚಿತ್ರ ೪**

ಸಮಾನಾಂತರತೆ ಇದ್ದಲ್ಲಿ ವೇಗ ಹೆಚ್ಚು ಆಗೇ ಅಗ್ತದ. ಆದ್ರ ಸಮಾನಾಂತರತೆ ಹುಡುಕೋದು, ಅದನ್ನ ಸರಿಯಾಗಿ ಅನ್ವಯಿಸುವದು ಅಷ್ಟು ಸರಳ ಇಲ್ಲ. ಸಮಾನಾಂತರತೆ ದೊಡ್ಡ

ಸಂಶೋಧನಾ ಕ್ಷೇತ್ರ. ನಮ್ಮ ವಿಚಾರ ಏಕತಂತು ಇರ್ತದ ಅಂತಾರ. ನನಗೇನು ಹಂಗ ಅನಸೋದಿಲ್ಲ. ನಮಗ ಏಕತಂತು ಗಣಕ ಪ್ರಬಂಧ ಬರಿಯೋದು ಸಹಜ ಅದ. ಬಹುತಂತು ಪ್ರಬಂಧ ಬರಿಯಲಿಕ್ಕೆ, ಅದರ ಕ್ರಮವಿಧಿ ವಿಚಾರಿಸಲಿಕ್ಕೆ ಕಷ್ಟ ಅದ. ಭಾಷಾಂತರಿಕ ಏಕತಂತು ಗಣಕ ಪ್ರಬಂಧಗಳನ್ನು ಬಹುತಂತು ಪ್ರಬಂಧವಾಗಿ ಪರಿಷ್ಕರಿಸಬಹುದು. ಖರೆ ಅಂತ ಪರಿಷ್ಕರಣೆಯೊಳಗೆ ಸಂಶೊಧನೆ ಮಾಡುವ ಕೆಲಸ ಬಹಳ ಅದ. ಭಾಷಾಂತರಿಕಗಳು ಏಕತಂತು ಗಣಕ ಪ್ರಬಂಧಗಳನ್ನು ೧೦ ಪಟ್ಟು ಶೀಘ್ರಗೊಳಿಸುವದು ಸಾಮಾನ್ಯ. ಗಣಕಯಂತ್ರಗಳ ಉಪಯೋಗ ಹೆಚ್ಚು ಆದಂಗ ಪರಿಗಣನಾ ಶಕ್ತಿ ಹೆಚ್ಚು ಬೇಕಾಗ್ಲಿಕತ್ತದ. ಖರೆ ಅಂದ್ರ, ಪರಿಗಣನಾ ಶಕ್ತಿ ಹೆಚ್ಚು ಆದಂಗ ಉಪಯೋಗನೂ ಹೆಚ್ಚು ಆಗ್ತಾವ. ಪರಿಗಣನಾ ಶಕ್ತಿ ಬೇಕು ಅನ್ನು ಹಸಿವೆಗೆ ಕೊನೆನ ಇಲ್ಲ. ಎಲ್ಲಿ ನೋಡಿದಲ್ಲೆ ಗಣಕಯಂತ್ರಗಳ ಬಳಕೆ ಕಾಣಸ್ತದ. ಗಣಕಯಂತ್ರ ಸರ್ವಂತರ್ಯಾಮಿ ಆಗಿಬಿಟ್ಟದ. ಉಪಯೋಗ ಹೆಚ್ಚು ಆದಂಗ, ಉಪಯೋಗಿಸುವ ವಿಧಾನ ಸರಳ ಆಗ್ಲಿಕತ್ತಾವ. ಇದಕ್ಕ ಅಂತರ್ಜಾಲ ಒಳ್ಳೆ ಉದಾಹರಣೆ. ಇನ್ನು ಮಿಗಿಲಾಗಿ, ಸಾವಕಾಶ ಗಣಕಯಂತ್ರ ಕಣ್ಣಿಗೆ ಕಾಣದನs ಬರೆ ಅದರ ಉಪಯೋಗದ ಅನುಭವ ಬರುಹಂಗ ಆಗ್ತದ. ಹೊಸ ವಾಹನದೊಳಗ ೨೦ಕ್ಕಿಂತ ಹೆಚ್ಚು ಗಣಕ ಅವ ಅಂತ ಗೊತ್ತಿರುದಿಲ್ಲ, ಖರೆ ಅದರಿಂದಾದ ಸೌಕರ್ಯ, ಅರಾಮ ಗೊತ್ತಾಗ್ತದ.

ಗಣಕಯಂತ್ರ ಕ್ಷೇತ್ರದ ಪ್ರಗತಿಗೆ ಕೊನೆ ಇಲ್ಲ. ಯಾರೋ ಅಂದ ಮಾತು – ಕಾರು ಉದ್ದಿಮೆಯೊಳಗ ಗಣಕಯಂತ್ರ ಉದ್ದಿಮೆಯೊಳಗಿನಂಗ ಪ್ರಗತಿ ಆಗಿದ್ರ, ಕಾರು ಗ್ಯಾಲನ್ನಿಗೆ ೫೦೦,೦೦೦ ಮೈಲು ಹೋಗುತ್ತಿತ್ತು, ಅಷ್ಟೇ ಅಲ್ಲ, ಕಾರು ನಿಲುಗಡೆ ಶುಲ್ಕಕ್ಕಿಂತ ಕಡಿಮೆ ದರಕ್ಕೆ ಹೊಸ ಕಾರು ಕೊಳ್ಳಬಹುದಾಗಿತ್ತು. ಖರೆ, ಗಣಕಯಂತ್ರ ಕ್ಷೇತ್ರದ ಪ್ರಗತಿಗೆ ಸರಳವಾಗಿ ನಿಲುಕದ ಉಪಯೋಗ ಅಂದ್ರ ಅರಿವು ಇಲ್ಲ ಕೃತಕ ಬುದ್ಧಿಶಕ್ತಿ ಎನ್ನಬಹುದು. ಸಂಶೋಧನೆ ಆಗಿದ್ದು, ಅಂತಹ ಫಲಕಾರಿಯಾಗಿಲ್ಲ. ಕೃತಕ ಬುದ್ಧಿಶಕ್ತಿ ಉಪಯೋಗ ಮಾಡಿದ್ದು ಅಲ್ಪಸ್ವಲ್ಪ ಮಟ್ಟಿಗೆ ಯಶಸ್ವಿ ಅನಬಹುದು. ಯಾರಿಗೆ ಗೊತ್ತು, ಸರಿ ಸಂಶೋಧನೆ ನಡದ್ರ ೨೦ ವರ್ಷಕ್ಕ ಕೃತಕ ಬುದ್ಧಿಶಕ್ತಿ ನಿಜ ಆದೀತು.

ನನಗನಿಸುವಂತೆ, ಪ್ರತಿ ಮನುಷ್ಯ ಉಪಯೋಗಿಸುವ ಸಾಮಾನುಗಳಲ್ಲಿನ ಟ್ರಾನ್ಸಿಸ್ಟರ್ ಸಂಖ್ಯೆ ಪ್ರತಿ ೨ ವರ್ಷಕ್ಕೆ ದುಪ್ಪಟ್ಟಾಗುವ ಕಾಲ ಬಂದದ. ಅದರಂತೆ ಕನ್ನಡ ಭಾಷೆಯಲ್ಲಿನ ತಾಂತ್ರಿಕ ಶಬ್ದಗಳ ಸಂಖ್ಯೆಯೂ ಪ್ರತಿ ೨ ವರ್ಷಕ್ಕೆ ದುಪ್ಪಟ್ಟಾದರೆ ಎಷ್ಟು ಚೆಂದ!

## ಗಣಕ ಶಬ್ದಕೋಶ

ಗಣಕಯಂತ್ರ - Computer
ಪರಮಗಣಕ – Super Computer
ಸ್ವಕೀಯಸಹಾಯಕ – PDA (personal digital assistant)
ಸ್ವಕೀಯಗಣಕ - PC
ಇಲಾಖಾಗಣಕ – Server or Dept Computer
ರಚನಾವಿನ್ಯಾಸ – Architecture
ಗಣಕಾಂಗ ವ್ಯವಸ್ಥಾಪಕ – Operating System
ಪರಿಗಣನಾ ಸಾಮರ್ಥ್ಯ – Computing Power
ಕೇಂದ್ರ ಪರಿಗಣನಾ ಘಟಕ – CPU or cental processing unit
ಸ್ಮೃತಿಸಂಚಯ - Memory
ಮಾಹಿತಿಭಂಡಾರ – Data Storage, Information storage
ಗಣಕಪ್ರಬಂಧ - Program
ಮಾಹಿತಿಪರಿಷ್ಕಾರ – Information processing, data processing
ಪ್ರಬಂಧಕ್ರಮವಿಧಿ - Algorithm
ಯಂತ್ರಾಂಶ - Hardware
ತಂತ್ರಾಂಶ - Software
ಶೀಘ್ರಸ್ಮೃತಿಸಂಚಯ - Cache
ಹೇಳು-ಕೇಳು - Communication
ಸುದ್ದಿಸಮೂಹಗಳು – News Groups, Bulletin boards
ಅಂತರ್ಜಾಲ - Internet
ದೂರದೃಶ್ಯ – Video mail
ದೂರಹರಟೆ - Chat
ಭಾಷಾಂತರಿಕ – Compiler
ಸಮಾನಾಂತರತೆ – Parallelism
ನಾಳ-ಸಮಾನಾಂತರತೆ – Pipelined parallelism
ಕೃತಕ ಬುದ್ಧಿಶಕ್ತಿ – Artificial Intelligence
ಮೇಳೈತ – Synchronization
ಸೂಚನಾಸಮೂಹ - Instrction Set

◈



# ಪೊಪ್ಪು

ಗೀತಾ ಸ್ವಾಮಿ
ರೆಡ್‌ವುಡ್ ಸಿಟಿ, ಕ್ಯಾಲಿಫೋರ್ನಿಯ, *geejs_AT_yahoo.com*

ಇದು ಆಂಧ್ರಪ್ರದೇಶದಲ್ಲಿ ತುಂಬಾ ಜನಪ್ರಿಯ. ಇದೇನು ಕನ್ನಡ ಪುಸ್ತಕದಲ್ಲಿ ಆಂಧ್ರದ್ದೇಕೆ ವಿಷಯ ಅನ್ನಬೇಡಿ. ಅಡುಗೆ ಚೆನ್ನಾಗಿದ್ದರೆ ಆಯ್ತು, ಯಾವೂರಿಂದಾದರೆ ನಮಗೇನು ಅಲ್ಲವೇ? ಅಂದಹಾಗೆ ಬೆಂಗಳೂರಿನಲ್ಲಿ ಆಂಧ್ರ ಹೋಟೆಲ್ಲುಗಳ ಜನಪ್ರಿಯತೆ ಗೊತ್ತೇ ಇದೆಯಲ್ಲ. ಇಂತಹ ಸ್ಥಳಗಳಲ್ಲೆಲ್ಲ ತುಂಬಾ ಕೇಳಿಬರುವ ಅಡುಗೆ ಎಂದರೆ 'ಪೊಪ್ಪು'. ಸಾಮಾನ್ಯವಾಗಿ ಪೊಪ್ಪು ಅಂದರೆ ಬೇಳೆಯಂತಿರುವ ಪದಾರ್ಥ. ಅಂತಹದರಿಂದ ಮಾಡಿದ ಸಾರನ್ನು 'ಪೊಪ್ಪಿನ ಸಾರು' ಎನ್ನಬಹುದಾದರೂ, ಪೊಪ್ಪು ಎಂದೇ ಬಳಸಿ ರೂಢಿ.

ಈ ಪೊಪ್ಪು ಮಾಡುವ ವಿಧಾನವನ್ನು ನೋಡೋಣ.

### ಬೇಕಾಗುವ ಪದಾರ್ಥಗಳು (೬ ಜನಕ್ಕೆ):

- ತೊಗರಿ ಬೇಳೆ - ೧ ಕಪ್ಪು
- ಸೊಪ್ಪು - ೨ ಕಟ್ಟು
- ಟೊಮ್ಯಾಟೋ - ೨
- ಈರುಳ್ಳಿ - ೧
- ಬದನೆಕಾಯಿ - ೨
- ಬೆಳ್ಳುಳ್ಳಿ - ೧/೪
- ಹಸಿಮೆಣಸಿನಕಾಯಿ - ೪
- ಒಗ್ಗರಣೆ ಸಾಮಾನುಗಳು (ಕರಿಬೇವು, ಒಣಮೆಣಸಿನಕಾಯಿ, ಜೀರಿಗೆ, ಸಾಸುವೆ, ಅರಿಸಿನ, ಇತ್ಯಾದಿ)
- ರುಚಿಗೆ ತಕ್ಕಂತೆ ಹುಣಸೆ ಹಣ್ಣು, ಉಪ್ಪು
- ದನಿಯಾ ಪುಡಿ - ೨ ಚಮಚ


೪ ಕಪ್ಪು ನೀರಿನಲ್ಲಿ ತೊಗರಿ ಬೇಳೆ, ಹಾಗೂ ಕತ್ತರಿಸಿದ ಟೊಮ್ಯಾಟೋ, ಅರ್ಧ ಈರುಳ್ಳಿ, ಬದನೆಕಾಯಿ, ಬೆಳ್ಳುಳ್ಳಿ, ಹಸಿಮೆಣಸಿನಕಾಯಿ ಸೇರಿಸಿ ಸುಮಾರು ಹತ್ತು ನಿಮಿಷ ಬೇಯಿಸಿ (ಕುಕ್ಕರ್ರಿನಲ್ಲಿ ಅಲ್ಲ). ಈ ಮಿಶ್ರಣಕ್ಕೆ, ತೊಳೆದು ಚಿಕ್ಕದಾಗಿ ಕತ್ತರಿಸಿದ ಸೊಪ್ಪನ್ನು ಮತ್ತು ದನಿಯಾ ಪುಡಿಯನ್ನು ಸೇರಿಸಿ ಸುಮಾರು ಹದಿನೈದು ನಿಮಿಷ ಬೇಯಿಸಿ. ನಂತರ, ಹೆಚ್ಚಿನ ನೀರನ್ನು ತೆಗೆದಿಟ್ಟು ಉಳಿದ ಮಿಶ್ರಣವನ್ನು ಸ್ವಲ್ಪ ಅರೆಯಿರಿ (mash).

ತೆಗೆದಿಟ್ಟ ನೀರನ್ನು ಈ ಮಿಶ್ರಣಕ್ಕೆ ಸೇರಿಸಿ, ಅದಕ್ಕೆ ಹುಣಸೆ ಹಣ್ಣಿನ ರಸ ಹಾಕಿ ಮತ್ತೆ ೫ ನಿಮಿಷ ಕುದಿಸಿ, ನಂತರ ಘಮಘಮಿಸುವ ಹಾಗೆ ಒಗ್ಗರಣೆ ಹಾಕಿರಿ. ರುಚಿಗೆ, ಸ್ವಲ್ಪ ತುಪ್ಪ ಸೇರಿಸಿ ಚಪ್ಪರಿಸಬಹುದು.

◈

### ಅಂಶಗಣ ಘಟಿತ ಷಟ್ಪದಿಯಲ್ಲಿ ಆಮ್ಲೆಟ್

ಕೋಳಿಯ ಮೊಟ್ಟೆಯ
ಹೋಳಾಗಿಸುತ್ತೊಳ
ಲೋಳೆಯ ಹಳದಿಯ ಪಾತ್ರೆಯೊಳು
ಬೀಳಿಸಿ ಕದಡುತ
ಸೀಳಿದ ಈರುಳ್ಳಿ
ಹೋಳುಗಳನು ಕರಿದರಾಯ್ತು!



--ಎಚ್. ಎಸ್. ಬಿಳಿಗಿರಿ (ವರಸೆಗಳು)

**Best Wishes to Kannada Koota of Northern California**

# Kumar Tallam



**SERVING SANTA CLARA & ALAMEDA COUNTIES**
**MULTIMILLION DOLLAR PRODUCER**
**FREE MARKET ANALYSIS & CONSULTATION**
**Kumartallam.com**

COLDWELL BANKER

kumar@magiclink.net

| | |
|---|---|
| **BUSINESS:** | **(408) 715 1128** |
| **RESIDENCE:** | **(408) 946-8771** |
| **CELL:** | **(408) 712-8787** |

# ಸಂಹಿತಾ



*ಆ ಲಂಬಾಣಿ ಇವಳ ಕೈಯನ್ನು ನೋಡುತ್ತಾ ಏನೋ ಹೊಳೆದವಳ ತರಹ "ನೀನು ನಿನ್ನ ತಂದೆತಾಯಿಗೆ ಸಾಕುಮಗಳು ಅಲ್ವೇನವ್ವ?" ಎಂದು ಕೇಳಿದಾಗ, ಸಂಹಿತಳಿಗೆ ಒಂದು ಕಡೆ ದುಃಖ ಇನ್ನೊಂದು ಕಡೆ ನಗು ಬಂದಿತು.*

**ಪೂರ್ಣಿಮಾ ರಾಮಪ್ರಸಾದ್**
ಮಿಲ್ಪೀಟಸ್, ಕ್ಯಾಲಿಫೋರ್ನಿಯ, *poornima_AT_sbcglobal.net*

ಎರಡನೇ ವರ್ಷದ ವೈದ್ಯಕೀಯ ಪದವಿಯಲ್ಲಿ ಓದುತ್ತಿದ್ದ ಸಂಹಿತಳಿಗೆ ಯಾಕೋ ಅಂದು ನಿದ್ರೆಯೇ ಬರದಷ್ಟು ಚಿಂತೆ ಆಗಿತ್ತು. ಅಂದು ಪರೀಕ್ಷೆ ಇದ್ದಿದ್ದರಿಂದ ಅವಳು ಕಾಲೇಜಿಗೆ ಹೋಗುವ ಮುನ್ನ ದೊಡ್ಡಗಣಪತಿ ದೇವಸ್ಥಾನಕ್ಕೆ ಹೋಗಿದ್ದಳು. ಅಲ್ಲೇ ಸ್ವಲ್ಪ ಓದುತ್ತ ಕುಳಿತಿದ್ದಾಗ ಇದ್ದಕ್ಕಿದ್ದಂತೆ ಯಾವುದೋ ಒಂದು ಕಡೆಯಿಂದ ಒಬ್ಬ ಲಂಬಾಣಿ ಹೆಂಗಸು ಬಂದು "ಐದು ರೂಪಾಯಿ ನನ್ನ ಕೈಯಲ್ಲಿ ಇಡವ್ವ, ನಿನ್ನ ಹಣೆಬರಹ ಎಲ್ಲಾ ಹೇಳ್ತೀನಿ." ಎಂದು ಹೇಳಿದಾಗ, ತಮಾಷೆಗೆ, ಸರಿ ಎಂದು ಇಟ್ಟಿದ್ದಳು. ಆ ಲಂಬಾಣಿ ಇವಳ ಕೈಯನ್ನು ನೋಡುತ್ತಾ ಏನೋ ಹೊಳೆದವಳ ತರಹ "ನೀನು ನಿನ್ನ ತಂದೆತಾಯಿಗೆ ಸಾಕುಮಗಳು ಅಲ್ವೇನವ್ವ?" ಎಂದು ಕೇಳಿದಾಗ, ಸಂಹಿತಳಿಗೆ ಒಂದು ಕಡೆ ದುಃಖ ಇನ್ನೊಂದು ಕಡೆ ನಗು ಬಂದಿತು. "ಅಜ್ಜಮ್ಮ, ನನ್ನ ತಾಯಿ ನಾನು ಒಂದು ವರ್ಷದವಳಾಗಿದ್ದಾಗಲೇ ತೀರಿಹೋದಳು. ನನ್ನನ್ನು ಸಾಕಿ ಬೆಳೆಸಿದ್ದೆಲ್ಲ ನನ್ನ ಅಜ್ಜಿ, ಹಾಗಾಗಿ ನೀನು ಹೇಳುತ್ತಿರುವುದು ಒಂದು ರೀತಿಯಲ್ಲಿ ಸರಿಯಾಗಿದೆ." ಎಂದಾಗ, ಆ ಲಂಬಾಣಿ ಹೆಂಗಸು ಸುಮ್ಮನಾಗಲಿಲ್ಲ. "ಬಿಡವ್ವ, ಅದಲ್ಲ ನಾನು ಹೇಳೋದು, ನೀನು ನಿನ್ನ ತಂದೆತಾಯಿಗೆ ಸಾಕುಮಗಳೇ ಆ ಶಿವನಾಣೆಗು. ನಿನ್ನ ನಿಜವಾದ ತಾಯಿ ಎಲ್ಲೋ ಇದ್ದಾಳವ್ವ, ಹುಡುಕು. ಆ ದೇವರು ನಿನ್ನ ಚೆನ್ನಾಗಿ ಮಡಗ್ಲಿ." ಎಂದು ಹೇಳಿ ಬೇರೆ ಗಿರಾಕಿಯನ್ನು ಹಿಡಿಯಲು ಹೊರಟುಹೋದಳು.

ಈ ವಿಷಯವನ್ನು ಅಜ್ಜಿಯ ಬಳಿ ಪ್ರಸ್ತಾಪಿಸಲು ಸ್ವಲ್ಪ ಹಿಂಜರಿಕೆ ಆಗುತ್ತಿತ್ತು. ಅಮ್ಮ ಹೋದ ಮೇಲೆ ಅಜ್ಜಿ ತನ್ನನ್ನು ಕರೆದುಕೊಂಡು ಬಂದು, ಯಾವ ಕೊರತೆಯೂ ಇಲ್ಲದಂತೆ ಮಗಳಿಗಿಂತ ಹೆಚ್ಚಾಗಿ ಅಚ್ಚುಮೆಚ್ಚಾಗಿ ಬೆಳೆಸಿದ್ದರು. ಓದಿನಲ್ಲಿ ಜಾಣೆಯಾಗಿ, ಅಜ್ಜಿಯ ಪ್ರೀತಿಯ ನೆರಳಿನಲ್ಲಿ ಬೆಳೆದ ಸಮು ವೈದ್ಯಕೀಯ ವ್ಯಾಸಂಗಕ್ಕೆ ಏನೂ ಕಷ್ಟವಿಲ್ಲದೆ ಸೇರಿಕೊಂಡಿದ್ದಳು. ಇಷ್ಟು ಪ್ರೀತಿಯ ಅಜ್ಜಿಯ ಬಳಿ ಆ ಲಂಬಾಣಿ ಹೇಳಿದ ವಿಷಯವನ್ನು ಹೇಳುವುದಾದರೂ ಹೇಗೆ? ಮಗಳ ನೆನಪು ಬರುವುದಲ್ಲದೇ ಈ ರೀತಿಯ ಸುದ್ದಿ ಕೇಳಿ ಅವರ ಎದೆ ಒಡೆದೇ ಹೋಗಬಹುದು. ಯಾವಾಗಲಾದರೂ ನಿಧಾನವಾಗಿ ಕೇಳಿದರಾಯಿತು ಎಂದು ಸಮಾಧಾನ ಹೇಳಿಕೊಂಡು, ಮುಂದಿನ ಪರೀಕ್ಷೆಗಳ ಕಡೆಗೆ ಗಮನ ಹರಿಸಿದ್ದಳು.

ಪರೀಕ್ಷೆ ಮುಗಿದು ಕೆಲವು ದಿನ ರಜೆ ಬಂದಾಗ, ಅಜ್ಜಿಯ ಜೊತೆ ಆರಾಮವಾಗಿ ಹರಟುತ್ತಾ ಕಾಲ ಕಳೆಯುವ ದಿನಗಳಿಗೆ ಸಂಹಿತ ಹಾಗೂ ಅಜ್ಜಿ ಇಬ್ಬರೂ ಎದುರುನೋಡುವರು. ಹೀಗೇ ಒಂದು ದಿನ ಅಜ್ಜಿ ಒಂದಷ್ಟು ನಿಪ್ಪಟ್ಟು ಮಾಡುತ್ತಾ ಸಂಹಿತಳಿಗೆ ಏನೋ ಹಳೆಯ ವಿಷಯ ಹೇಳುತ್ತಿದಾಗ, ಸಂಹಿತಳು ಒಮ್ಮೆಲೆ ಕೇಳಿಯೇ ಬಿಟ್ಟಳು - "ಅಜ್ಜಿ, ನಾನು ಅಮ್ಮನ ಹೆತ್ತ ಮಗಳಾ ಅಜ್ಜಿ?" ಎಂದು. ಅಜ್ಜಿಗೆ ಭೂಮಿಯೇ ಬಾಯಿಬಿಟ್ಟಷ್ಟು ಗಾಬರಿ ಆಯಿತು. ಸಾವರಿಸಿಕೊಂಡು "ನೀನು ಈಗ ನನ್ನ ಪ್ರೀತಿಯ ಮೊಮ್ಮಗಳು." ಎಂದು ಹೇಳಿ, "ನಡಿ ನಿಪ್ಪಟ್ಟು ಕಾಫಿ ಕೊಡ್ತೀನಿ." ಎಂದರು. ಸಂಹಿತಳಿಗೆ ಈ ಉತ್ತರ ಅಷ್ಟು ಒಪ್ಪಿಗೆಯಾಗಲಿಲ್ಲ. ಅವಳು ಆ ಲಂಬಾಣಿಯ ಪ್ರಕರಣವನ್ನೆಲ್ಲಾ ವಿವರಿಸುತ್ತಾ ಮತ್ತೊಮ್ಮೆ ಅದೇ ಪ್ರಶ್ನೆ ಕೇಳಿದಳು. ಆಗ ಅಜ್ಜಿಯು ನಡೆದ ಕಥೆ ಹೇಳಲೇ ಬೇಕಾಯಿತು.

ಅಜ್ಜಿ ಸರಸ್ವತಮ್ಮನವರ ಮಗಳು ಭಾರತಿ ಹಾಗು ಅಳಿಯ ಶ್ರೀನಾಥರ ಮದುವೆಯಾಗಿ ಸುಮಾರು ಐದು ವರ್ಷಗಳಲ್ಲಿ ಭಾರತಿಗೆ ಆರು ಬಾರಿ ಬಸಿರು ಇಳಿದುಹೋಗಿತ್ತು. ಕಡೆಯ ಸಲ ಡಾಕ್ಟರ್ ಬಳಿ ಹೋದಾಗ ತಿಳಿಯಿತು ಅವರಿಬ್ಬರಿಂದ ಸಂತಾನವಾಗುವುದು ಇನ್ನು ಸಾಧ್ಯವಿಲ್ಲ ಎಂದು. ಆಗ ಬಹಳ ಯೋಚನೆ ಮಾಡಿ ಒಂದು ನಿರ್ಧಾರಕ್ಕೆ ಬಂದು ದತ್ತು ಸ್ವೀಕರಿಸಲು ಬಸವನಗುಡಿಯ ಅನಾಥಾಶ್ರಮಕ್ಕೆ ಹೋದರು. ಅಂದು ತಾನೇ ಬಂದಿದ್ದ ಕೆಲವೇ ದಿನಗಳ ಮಗು ಒಂದು ಮುದ್ದಾಗಿ ಕಣ್ಣುಬಿಟ್ಟು ನೋಡಿದಾಗ ಅದೇ ತಮ್ಮದೆಂದು ನಿರ್ಧರಿಸಿ ಕರೆತಂದಿದ್ದರು. ಮಗು ಬಂದ ಮೇಲೆ ಸಂತೋಷವಾಗಿದ್ದ ಭಾರತಿಯು ಇದ್ದಕ್ಕಿದ್ದಂತೆ ಒಂದು ದಿನ ರಸ್ತೆ ಅಪಘಾತದಲ್ಲಿ ತೀರಿಹೋದಳು. ಆಗ ಅಳಿಯನು ಸ್ವಂತ ಮಗಳಲ್ಲದ ಸಂಹಿತಳು ಎಲ್ಲ ರೀತಿಯಲ್ಲೂ ತನಗೆ ತೊಂದರೆ ಎಂದು ಯೋಚಿಸುತ್ತಿದ್ದ. ಸರಸ್ವತಮ್ಮನವರು ಕೆಲಕಾಲದ ಮುಂಚೆಯಷ್ಟೆ ತಮ್ಮ ಗಂಡನನ್ನು ಕಳೆದುಕೊಂಡು ಒಬ್ಬಂಟಿಯಾಗಿದ್ದರು. ಈಗ ಮಗಳೂ ಹೋದ ಸುದ್ದಿ ಬಂದಾಗ ಅವರಿಗೆ ದಿಕ್ಕುತೋಚದಂತಾಗಿತ್ತು. ಅಳಿಯನಿಗೆ ತನ್ನ ಸ್ವಂತದ್ದಲ್ಲದ ಮಗುವನ್ನು ಸಾಕಿ ಬೆಳೆಸುವುದು ಕಷ್ಟವೆಂದು ಅರ್ಥಮಾಡಿಕೊಂಡು ಮೊಮ್ಮಗಳ ಜವಾಬ್ದಾರಿಯನ್ನು ತಾವು ವಹಿಸಿಕೊಂಡು ಅವಳಲ್ಲಿ ಮಗಳನ್ನು ಕಂಡುಕೊಂಡಿದ್ದರು. ಇಷ್ಟು ಹೇಳಿದ ಅವರು ಒಂದು ರೀತಿಯಲ್ಲಿ ತಮ್ಮಲ್ಲಿದ್ದ ಗುಟ್ಟನ್ನು ಹೇಳಿದ್ದಕ್ಕೆ ಮನಸ್ಸು ಹಗುರವಾಯಿತು ಎಂದುಕೊಂಡರು.

"ಆದರೆ ಸಮು, ನೀನು ಮಾತ್ರ ಯಾರೇ ಹೆತ್ತ ಮಗಳಾದರೂ ನನ್ನ ಮುದ್ದಿನ ಮೊಮ್ಮಗಳು ಕಣೆ." ಎಂದು ಹೇಳಿ ಅವಳನ್ನು ಅಪ್ಪಿಕೊಂಡಾಗ, ಅವರ ಕಣ್ಣಂಚಿನಲ್ಲಿ ನೀರು ಬಂದಿತ್ತು. ಇದನ್ನು ಕೇಳಿ ಸಂಹಿತಳಿಗೆ ಮಾತ್ರ ಮನಸ್ಸು ಹಗುರವಾಗಲಿಲ್ಲ. ಲಂಬಾಣಿ ಹೇಳಿದ್ದೆಲ್ಲ ನಿಜವೇ ಆದರೆ ತನ್ನ ತಾಯಿ ಬದುಕಿದ್ದಾಳೆ ಎಂದು ಯೋಚಿಸತೊಡಗಿದಳು. ಇಳಿವಯಸ್ಸಿನ ಅಜ್ಜಿಗೆ ಇನ್ನು ಬೇಜಾರು ಮಾಡುವುದು ಬೇಡವೆಂದು ಅದನ್ನು ತನ್ನಲ್ಲೇ ಇಟ್ಟುಕೊಂಡಳು.



ರಜೆ ಕಳೆದು ಮತ್ತೆ ಕಾಲೇಜು ಶುರುವಾಯಿತು. ಹೊಸ ವರ್ಷದ ಹುಡುಗರ ರ್‍ಯಾಗಿಂಗ್ ಕೂಡಾ ನಡೆಯುತ್ತಿತ್ತು. ಒಂದು ದಿನ, ಒಂದು ಗುಂಪು ಗಂಡುಹುಡುಗರನ್ನು ಹಿಡಿದು ತನ್ನ ತರಗತಿಯವರೆಲ್ಲ ಏನೇನೋ ಕೇಳುತ್ತಿದ್ದಾಗ, ಒಬ್ಬ ಹುಡುಗ ಬಂದು "ನೀವು ನನ್ನ ಅಮ್ಮನಂತಿದ್ದೀರ." ಎಂದು ಸಂಹಿತಳಿಗೆ ಹೇಳಿದಾಗ ಎಲ್ಲರೂ ಗೊಳ್ಳೆಂದು ನಕ್ಕರು. ತಕ್ಕಮಟ್ಟಿಗೆ ಸುಂದರಿಯೇ ಆಗಿದ್ದ ಸಂಹಿತಳಿಗೆ ಕಾಲೇಜು ವಯಸ್ಸಿನ ಹುಡುಗ "ಅಮ್ಮ" ಎಂದಿದ್ದು ಕೇಳಿ ಎಲ್ಲರೂ ನಕ್ಕಾಗ ಮುಜುಗರವಾಯಿತು. ಮನೆಗೆ ಬಂದು ಬಹಳ ಯೋಚಿಸಿ ಕಡೆಗೆ ಒಂದು ನಿರ್ಧಾರಕ್ಕೆ ಬಂದಳು. ಮಾರನೇ ದಿನ ಆ ಹುಡುಗನ ತರಗತಿಯವರು ಅನಾಟಮಿ ಲ್ಯಾಬ್ ಮುಗಿಸಿಬರುವ ಸಮಯಕ್ಕೆ ಸರಿಯಾಗಿ ಇವಳು ಲ್ಯಾಬ್ ಬಳಿ ಹೋಗಿ ಕಾಯುತ್ತ ನಿಂತಿದ್ದಳು. ಅವನು ಬಂದೊಡನೆ ಅವನನ್ನು ಕೇಳಿದಳು, "ನಾನು ಸಂಹಿತ ಅಂತ. ಮೂರನೇ ವರ್ಷದಲ್ಲಿದ್ದೇನೆ, ನಿನ್ನ ಹೆಸರು?". ಅದಕ್ಕೆ ಅವನು, "ನಾನು ಜಯಂತ್." ಎಂದು ನಗುಮುಖದಿಂದ ಹೇಳಿದ. "ನಿನ್ನ ಅಮ್ಮನಂತಿರುವ ನನ್ನ ಜೊತೆ ಸ್ವಲ್ಪ ಹೊತ್ತು ಮಾತನಾಡಲು ಬರ್ತೀಯಾ?" ಎಂದು ಕೇಳಿದಾಗ ಅವನು ಒಪ್ಪಿದ. ಇಬ್ಬರೂ ಹಾಗೇ ಕ್ಯಾಂಟೀನಿಗೆ ಹೋಗಿ ಕಾಫಿ ಹೀರುತ್ತಾ ಕುಳಿತಾಗ ಅವನು, "ಅದೇ ಕಣ್ಣು, ಅದೇ ಮೂಗು, ತದ್ರೂಪು ನನ್ನ ಅಮ್ಮನೇ ನೀವು. ಪ್ರಪಂಚದಲ್ಲಿ ಒಂದೇ ತರದವರು ಏಳು ಜನ ಇರುತ್ತಾರಂತಲ್ಲ, ನಾನಂತೂ ಇಬ್ಬರನ್ನು ನೋಡಿದ್ದೇನೆ." ಎಂದ. ಅವಳಿಗೆ ಕುತೂಹಲ ತಡೆಯಲಾಗಲಿಲ್ಲ. "ನನಗೆ ನಿನ್ನ ಅಮ್ಮನ ಛಾಯಾಚಿತ್ರ ಒಂದನ್ನು ಕೊಡುವೆಯಾ?" ಎಂದು ಕೇಳಿದಳು. "ಅಮ್ಮನನ್ನೇ ನಾನು ಕರೆತರುತ್ತೇನೆ. ಅವಳು ಬಹಳ ಫ್ರೆಂಡ್ಲಿ." ಎಂದು ಹೇಳಿದ. ಹಾಗೇ ಮಾತು ಕೊಟ್ಟಂತೆ ಮಾರನೆಯ ದಿನ ಜಯಂತ್ ತನ್ನ ತಾಯಿಯ ಜೊತೆಗೆ ಬಂದು ಸಂಹಿತಳಿಗಾಗಿ ಅವಳ ಕ್ಲಾಸ್ ಮುಂದೆ ಕಾಯುತ್ತಿದ್ದ. ಸಂಹಿತಳು ಆಚೆ ಬರುತ್ತಿದಂತೆ ಅವಳಿಗೆ ಅಚ್ಚರಿಯಾಯಿತು. ಆದರೆ ಅದೆಲ್ಲ ಕಾಲೇಜಿನಲ್ಲಿ ಬೇಡವೆಂದು ಅವಳು ಜಯಂತನನ್ನು "ಒಟ್ಟಿಗೆ ಸುಖಸಾಗರ್‌ಗೆ ಹೋಗೋಣವೇ" ಎಂದು ಕೇಳಿದಳು. ಅವನು ತನಗೆ ಲ್ಯಾಬ್ ಇರುವುದಾಗಿಯೂ, ಅಮ್ಮನೂ ಅವಳೂ ಹೋಗಿ ತಮ್ಮನ್ನು ತಾವು ಸರಿಯಾಗಿ ನೋಡಿಕೊಂಡು ಅಚ್ಚರಿ ಪಡಬೇಕೆಂದೂ ಹೇಳಿ ನಗುತ್ತಾ ಹೊರಟುಹೋದ.

ಜಯಂತ್ ಆ ಕಡೆ ಹೋಗುತ್ತಿದಂತೆ ಅವನ ತಾಯಿ "ನನ್ನ ಹೆಸರು ರೋಹಿಣಿ ಅಂತ, ನಿನ್ನ ಹೆಸರೇನಮ್ಮ?" ಎಂದು ಪ್ರೀತಿಯಿಂದ ಕೇಳಿದಳು. "ಸಂಹಿತ" ಎಂದಷ್ಟೇ ಹೇಳಿ ಒಂದು ಆಟೋ ಕರೆದು "ಸುಖಸಾಗರ್" ಎಂದು ಹೇಳಿ ಕುಳಿತಳು. ಇಬ್ಬರೂ ಇಳಿದು ಹೋಟೆಲಿನೊಳಗೆ ಹೋಗಿ ತಂಪಾದ ಪಾನೀಯವನ್ನು ತರಿಸಿಕೊಂಡು ಹೀರಲಾರಂಭಿಸಿದರು. ಸಂಹಿತಳು ಅತಿ ವಿನಯ ಪ್ರದರ್ಶಿಸದೇ "ನಾನು ನನ್ನ ತಂದೆ ತಾಯಿಗೆ ಸಾಕು ಮಗಳು, ನನ್ನ ಹೆತ್ತ ತಾಯಿ ಯಾರು ಎಂದು ಗೊತ್ತಿಲ್ಲ, ನನ್ನನ್ನು ಬಸವನಗುಡಿಯ ಅನಾಥಾಶ್ರಮದಲ್ಲಿ ದತ್ತು

ತೆಗೆದುಕೊಂಡಿದ್ದರು.” ಎಂದು ಒಂದೇ ಬಾರಿ ಧೈರ್ಯವಾಗಿ ಹೇಳಿಯೇಬಿಟ್ಟಳು. ರೋಹಿಣಿಗೆ ಆಕಾಶವೇ ಕೆಳಗೆ ಬಿದ್ದಂತಾಯಿತು. ಹೀಗೆ ಎಂದೋ ಒಂದು ದಿನ ತನ್ನ ಮಗಳನ್ನು ನೋಡುತ್ತೇನೆ ಎಂದು ಅವಳು ಕನಸು ಮನಸ್ಸಿನಲ್ಲೂ ಅಂದುಕೊಂಡಿರಲಿಲ್ಲ. ಮಗು ಹುಟ್ಟುವ ಕೆಲವೇ ದಿನ ಮುಂಚೆ ಗಂಡನು ತೀರಿ ಹೋದಾಗ, ಹುಟ್ಟಿದ ಮಗುವಿನ ವಿಷಯವಾಗಿ ರೋಹಿಣಿಗೆ ಏನೂ ತೋಚಲಿಲ್ಲ. ಬಡತನದಲ್ಲಿದ್ದ ಅವಳ ತಂದೆ ತಾಯಿ, ಮಗುವನ್ನು ಅವಳಿಗೆ ತಿಳಿಯದಂತೆ ಅನಾಥಾಶ್ರಮಕ್ಕೆ ಕೊಟ್ಟುಬಿಟ್ಟರು. ವಿಷಯ ತಿಳಿದ ಮೇಲೆ ಅಲ್ಲಿಗೆ ಹೋದಾಗ ಮಗುವನ್ನು ಒಂದು ಒಳ್ಳೆಯ ಕುಟುಂಬದ ದಂಪತಿಗಳು ದತ್ತು ತೆಗೆದುಕೊಂಡಾಯಿತು ಎಂದು ತಿಳಿದು ಮನಸ್ಸಿಗೆ ಖೇದವಾದರೂ ಯಾರೋ ಸಜ್ಜನರ ಮನೆ ಸೇರಿತು ಎಂದು ಸುಮ್ಮನಾಗಿದ್ದಳು. ಇದಾದ ಒಂದು ವರ್ಷದಲ್ಲಿ ತನಗೆ ಎರಡನೇ ಮದುವೆಗೆ ಗಂಡು ಸಿಕ್ಕಿ, ಒಪ್ಪಿಕೋ ಎಂಬ ತಂದೆ ತಾಯಿಯ ಬಲವಂತಕ್ಕೆ ಮಣಿದು ಒಪ್ಪಿ ಮದುವೆಯಾಗಿದ್ದಳು. ತನ್ನ ಹೆತ್ತಮಗಳ ವಿಷಯ ತನ್ನ ಅಂತರಾಳದಲ್ಲೇ ಹುದುಗಿಸಿದ್ದಳು. ಅದು ಇಂದು ಕಟ್ಟೆ ಒಡೆದಿದೆ. ಈಗ ಗಂಡನ ಬಳಿ ತನಗೊಬ್ಬಳು ಮಗಳಿದ್ದಾಳೆ, ತನ್ನ ಪ್ರತಿಬಿಂಬದಂತೆ ಇದ್ದಾಳೆಂದು ಹೇಳುವುದಾದರೂ ಹೇಗೆ? ಜಯಂತನಿಗೆ ಬೇರೆ ಇವಳು ಪರಿಚಿತಳು. ಆದರೆ ಅವನಿಗೆ ಅಮ್ಮನ ಮೇಲೆ ಕಿಂಚಿತ್ತೂ ಅನುಮಾನವಿಲ್ಲ. ಹಾಗೇ ಸಂಭಾಳಿಸಿಕೊಂಡು, “ನಿನ್ನ ಸಾಕು ತಂದೆ-ತಾಯಿ ಯಾರಮ್ಮ?” ಎಂದು ಕೇಳಿದಳು. ಅದಕ್ಕೆ ಸಂಹಿತ ತನ್ನ ವಿಷಯವನ್ನೆಲ್ಲಾ ಹೇಳಿ ಲಂಬಾಣಿ ವಿಷಯ ಕೂಡ ಹೇಳಿದಳು. ಇದನ್ನು ಕೇಳಿ ರೋಹಿಣಿಗೆ ಬಹಳ ದುಃಖವಾಯಿತು. ಸರಸ್ವತಮ್ಮನವರ ಮೇಲೆ ಅಪಾರ ಗೌರವ ಉಕ್ಕಿಬಂದಿತು. ರೋಹಿಣಿಗೆ ಇನ್ನು ತಾನು ಸುಮ್ಮನಿದ್ದು ಮಗಳ ಕಣ್ಣಲ್ಲಿ ಕೆಟ್ಟವಳಾಗಬಾರದು ಎಂದೆನಿಸಿತು. ಗಂಡನಲ್ಲಿ ಎಲ್ಲವನ್ನೂ ತೋಡಿಕೊಳ್ಳುತ್ತೇನೆ ಎಂದು ನಿಶ್ಚಯಿಸಿದಳು. “ಸಮು, ನೀನು ನನ್ನ ಪ್ರೀತಿಯ ಕಂದ. ನನ್ನಿಂದ ನಿನಗೆ ಬಹಳ ಅನ್ಯಾಯವಾಗಿದೆ, ಅದೆಲ್ಲ ಸರಿಪಡಿಸುತ್ತೇನೆ. ನೀನು ನಿನ್ನ ಅಜ್ಜಿಯೊಡನೆ ಬರೋ ಭಾನುವಾರ ನಮ್ಮ ಮನೆಗೆ ಬರುವೆಯಾ?” ಎಂದು ಕೇಳಿದಳು. “ಸಮು” ಎಂದು ಅಜ್ಜಿಯೊಬ್ಬರೇ ಅವಳನ್ನು ಕರೆಯುತ್ತಿದ್ದುದು, ಈಗ ಇವಳು ಕರೆಯುತ್ತಿದ್ದಾಳೆ, ತನ್ನ ಹೆತ್ತ ತಾಯಿ. ಕರುಳಿನ ಕರೆಗೆ ಕರುಳು ಓ ಗೊಟ್ಟಿತು. ಸಂಹಿತಳು “ಅಮ್ಮ” ಎನ್ನುತ್ತ “ಅಜ್ಜಿಯನ್ನು ಹೇಗಾದರೂ ಒಪ್ಪಿಸಿ, ಅವರೊಂದಿಗೆ ಬರುತ್ತೇನೆ.” ಎಂದು ಹೇಳಿದಳು. ಇಬ್ಬರೂ ಸ್ವಲ್ಪ ಹೊತ್ತು ಸುಮ್ಮನೇ ಒಬ್ಬರನ್ನೊಬ್ಬರು ನೋಡುತ್ತಾ ಕುಳಿತಿದ್ದರು. ನಂತರ ಇಬ್ಬರ ಮನಸ್ಸೂ ತಿಳಿಯಾಗಿ ಭಾನುವಾರ ಭೇಟಿಯಾಗುವ ಭರವಸೆಯಲ್ಲಿ ಹೊರಟರು.

ಸಂಹಿತ ಅಜ್ಜಿಗೆ ಹೇಳುವುದು ಹೇಗೆ ಎಂದು ಯೋಚಿಸುತ್ತ ಮನೆಯ ಕಡೆಗೆ ಹೆಜ್ಜೆ ಇಟ್ಟಳು. ಆದರೆ ಅಜ್ಜಿ ಧೈರ್ಯಸ್ಥೆ. ತನ್ನ ಮೇಲೆ ಪ್ರಾಣ ಇಟ್ಟಿದ್ದಾರೆ ಎಂದುಕೊಂಡು ಮನೆಗೆ ಹೋಗಿ ಮುಖ ತೊಳೆದು ಅಡಿಗೆ ಮನೆಯಲ್ಲಿ ಕಾಫಿ ಕುಡಿಯುತ್ತಾ, “ಅಜ್ಜಿ, ನನ್ನ ಹೆತ್ತ ಅಮ್ಮನನ್ನು ನೋಡಿದೆ.” ಎಂದಾಗ, ಅಜ್ಜಿಗೆ ಕಸಿವಿಸಿಯಾಯಿತು. ಗಾಬರಿಗೊಂಡು ಇವಳ ಕಡೆ ತಿರುಗಿದರು. “ಹೌದು ಅಜ್ಜಿ, ನನ್ನನ್ನು  ಹೆತ್ತವಳು ನನ್ನ ಹಾಗೇ ಇದ್ದು, ಅವಳ ಮಗ ನನ್ನ ಕಾಲೇಜಿಗೇ ಬರ್ತಾನೆ. ನಾನು ಅವಳೊಂದಿಗೆ ಎಲ್ಲ ಹಂಚಿಕೊಂಡು ಹಾಗೂ ತಿಳಿದುಕೊಂಡು ಬಂದಿದ್ದೇನೆ. ಅವಳು ನಿಮ್ಮನ್ನು ಕೃತಜ್ಞತೆಯಿಂದ ನಮಿಸಿ ನಿಮ್ಮೊಂದಿಗೆ ಭಾನುವಾರ ಅವಳ ಮನೆಗೆ ಬರಲು ಹೇಳಿದ್ದಾಳೆ. ಅವಳು ತನ್ನ ಗಂಡನ ಹತ್ತಿರ ನನ್ನ ವಿಷಯ ಪ್ರಸ್ತಾಪಿಸುತ್ತಾಳಂತೆ.” ಎಂದಳು. ಅಜ್ಜಿಯ ಮುಖ ಗ್ರಹಣ ಹಿಡಿದ ಚಂದ್ರನಂತೆ ಆಯಿತು.  ಅವರಿಗೆ ಧೈರ್ಯ ಹೇಳಿ ಸಂಹಿತಳು ತನ್ನ ತಾಯಿಯ ಮನೆಗೆ ಹೋಗಲು ಒಪ್ಪಿಸಿದಳು.

ಭಾನುವಾರ ಎಲ್ಲರಿಗೂ ಏನೋ ಒಂದು ರೀತಿಯ ಅಂಜಿಕೆ. ರೋಹಿಣಿಯ ಮನೆಯಲ್ಲಿ ತಿಂಡಿ ಮಾಡಿಕೊಂಡು ಗಂಡ-ಹೆಂಡತಿಯರಿಬ್ಬರೂ ಕಾಯುತ್ತಿದ್ದರು. ಸಂಹಿತ ಸರಿಯಾಗಿ ೧೦.೧೫ಕ್ಕೆ ಅಜ್ಜಿಯೊಡನೆ ಆಟೋದಲ್ಲಿ ಬಂದು ಇಳಿದು ಕರೆಗಂಟೆ ಬಾರಿಸಿದಾಗ ಬಾಗಿಲು ತೆರೆದವರು ರೋಹಿಣಿಯ ಗಂಡ. ಹಿಂದೆಯೇ ರೋಹಿಣಿಯೂ ಇದ್ದಳು. ನೋಡಿದಾಕ್ಷಣ ಅಜ್ಜಿಯ ಮುದಿಕಣ್ಣುಗಳು ಏನನ್ನೋ ಗುರುತಿಸಲು ಪರದಾಡುತ್ತಿದ್ದವು. ಕಡೆಗೆ “ಅಳಿಯಂದ್ರೇ” ಎಂದು ಉದ್ಗರಿಸಿಯೇ ಬಿಟ್ಟರು. ಅದನ್ನು ಕೇಳಿ ಸಂಹಿತಳಿಗೆ ಶಾಕ್ ಹೊಡೆದ ಹಾಗಾಯಿತು. “ಹೌದು ಸಮು, ಇವರೇ ನಿನ್ನ ತಂದೆ.” ಎಂದು ಅಜ್ಜಿ ಹೇಳಿದಾಗ ಸಂಹಿತಳಿಗೆ ದಿಕ್ಕೇ ತೋಚದಂತಾಯಿತು. ತಾನು ಇಲ್ಲಿ ಹುಡುಕಿ ಬಂದದ್ದು ತನ್ನ ಹೆತ್ತತಾಯಿಯನ್ನು. ಇದೇನು ಅಜ್ಜಿ ಇಲ್ಲಿ ನನ್ನ ತಂದೆಯ ಪರಿಚಯ ಹೇಳುತ್ತಿದ್ದಾರೆ ಎಂದು ಅವಳಿಗೆ ತಲೆ ತಿರುಗಿಹೋಯಿತು. ರೋಹಿಣಿಗೂ, ಶ್ರೀನಾಥನಿಗೂ ಒಂದಕ್ಕೆ ಒಂದು ಸೇರಿಸಿ ಸಮು ರೋಹಿಣಿಯು ಹೆತ್ತವಳಾದರೂ, ಶ್ರೀನಾಥನ ಸಾಕುಮಗಳು ಎಂದು ಗೊತ್ತಾಗಿತ್ತು. ಇಬ್ಬರೂ ತಮ್ಮ ತಪ್ಪು ಒಪ್ಪಿಕೊಳ್ಳುತ್ತಾ ಅಜ್ಜಿ ಹಾಗೂ ಸಂಹಿತಳನ್ನು ತಮ್ಮವರನ್ನಾಗಿ ಸ್ವೀಕರಿಸುವ ಆಸೆಯನ್ನು ತೋಡಿಕೊಂಡರು. ಅದಕ್ಕೆ ಅಜ್ಜಿಯು “ಸಮು ನಿಮ್ಮ ಮಗಳು. ಅವಳು ನನಗೆ ಅತಿ ಪ್ರೀತಿಪಾತ್ರಳಾದರೂ ನಿಮಗೆ ಅವಳ ಮೇಲೆ ಅಧಿಕಾರವಿದೆ. ಆದರೆ, ಈ ಇಳಿವಯಸ್ಸಿನಲ್ಲಿ ನನ್ನ ಮನಸ್ಸು ಈ ಹೊಸ ಪ್ರಪಂಚಕ್ಕೆ ಹೊಂದಿಕೊಳ್ಳುವುದಿಲ್ಲ. ಆದ್ದರಿಂದ ನನ್ನ ಪಾಡಿಗೆ ನಾನು ರಾಮಾ, ಕೃಷ್ಣ ಎಂದು ಇರುತ್ತೇನೆ.” ಎಂದು ನಿಟ್ಟುಸಿರುಬಿಡುತ್ತಾ, ಸಂಹಿತಳ ಕೈ ಹಿಡಿದು ಮುತ್ತು ಕೊಟ್ಟು ಕಣ್ಣೀರು ಹಾಕಿದರು. ಎಲ್ಲರೂ ಈಗ ಸಂಹಿತಳ ಕಡೆ ತಿರುಗಿದರು. “ಅಪ್ಪ-ಅಮ್ಮ-ತಮ್ಮ, ನೀವೆಲ್ಲ ಸಿಕ್ಕಿದ್ದು ನನಗೆ ಸಂತೋಷವಾಗಿದೆ. ಆದರೆ ನನ್ನನ್ನು ಹೆತ್ತವರಿಗಿಂತ ಹೆಚ್ಚಾಗಿ ನೋಡಿಕೊಂಡ ಅಜ್ಜಿಯನ್ನು ನಾನು ಎಂದಿಗೂ ಬಿಟ್ಟಿರಲಾರೆ. ನಾನು ಸರಸ್ವತಮ್ಮನವರ ಮೊಮ್ಮಗಳು ಎಂದೇ ಉಳಿಯಲು ಇಷ್ಟಪಡುತ್ತೇನೆ. ಇಲ್ಲಿಗೆ ಆಗಾಗ ಬಂದು ಹೋಗುತ್ತೇನೆ. ಇದಕ್ಕೆ ಎಲ್ಲರೂ ಒಪ್ಪಲೇ ಬೇಕು.” ಎಂದು ಮೊದಲನೇ ಬಾರಿ ಮಗಳಿಗೆ ಇರುವ ಸಹಜ ಸ್ವಾತಂತ್ರ್ಯವನ್ನು ಪ್ರಯೋಗಿಸುತ್ತಾ, ಹಗುರವಾದ ಮನಸ್ಸಿನಿಂದ ಸಂಹಿತ ಹೇಳಿದಳು. ರೋಹಿಣಿಗೆ ಸ್ವಲ್ಪ ನಿರಾಸೆಯಾದರೂ ಸರಸ್ವತಮ್ಮನವರ ಮೇಲಿನ ಅಭಿಮಾನ ಹಾಗೂ ಮಗಳ ಮೇಲಿನ ಮಮಕಾರದಿಂದ ಒಪ್ಪಿಕೊಂಡಳು. ಎಲ್ಲರೂ ನಗುತ್ತಾ ಮಾಡಿದ್ದ ಉಪ್ಪಿಟ್ಟು, ಕೇಸರಿಭಾತು, ಕೋಡುಬಳೆ ತಿನ್ನುತ್ತ ಎಷ್ಟೋ ಹೊತ್ತು ಕುಳಿತುಬಿಟ್ಟರು.

◈



# ಪ್ರತ್ಯಗಾತ್ಮ


**ಶಿವರಾಮಯ್ಯ ಎನ್. (ನೇ ನಂ ಶಿ)**

ತುಮಕೂರು, ಕರ್ನಾಟಕ


ಪೂರ್ಣವನು ಪೂರ್ಣದಿಂ ಕೂಡಿ ಕಳೆದರೂ ಕೂಡ
ಪೂರ್ಣವೇ ಉಳಿಯುವುದು ಕಡೆಗೆ ಎಂದೆಂದು
ಪೂರ್ಣವಿದು ಪೂರ್ಣವದು ಪೂರ್ಣದಿಂದಲೆ ಎಲ್ಲ
ಪೂರ್ಣತೆಗೆ ಶರಣೆನ್ನು - ಪ್ರತ್ಯಗಾತ್ಮ

ವಿಶ್ವದೇವನ ವರ್ಣಮಾಲೆಯನು ಕಂಡಾಗ
ಹ್ರಸ್ವ ನಾನಾಗುವೆನು ದೀರ್ಘಚಿಂತನದಿ
ವಿಶ್ವಪ್ರಕೃತಿಯ ಭವ ಎಂದೆಂದು ಅವ್ಯಯವು
ವಿಶ್ವಾತ್ಮನಿಗೆ ಶರಣು - ಪ್ರತ್ಯಗಾತ್ಮ

ಋಷಿಯಲ್ಲದವರಾರೂ ಕವಿಯಾಗಲಾರರೈ
ಋಷಿಯ ಅಂಶವು ಬೇಕು ಕಾವ್ಯಕರ್ಮಕ್ಕೆ
ಋಷಿ ತಪಸ್ ಸಾಧನೆಯು, ಸಿದ್ಧಿ ಮೇಣ್ ದರ್ಶನವು
ರಸಋಷಿಗಿದತಿ ಮುಖ್ಯ - ಪ್ರತ್ಯಗಾತ್ಮ

ಅರಿಗಳನು ವೈರಿಯೆಂದೆಂದಿಗೂ ಜರೆಯದಿರು
ಗುರುವಾಗಬಹುದು ಅವರೆ ನಿನ್ನ ಏಳಿಗೆಗೆ
ಗುರು ವಸಿಷ್ಠರ ಎದುರು ಬ್ರಹ್ಮನಾದನಲ್ಲ
ಅರಸು ವಿಶ್ವಾಮಿತ್ರ! - ಪ್ರತ್ಯಗಾತ್ಮ

ಉದ್ಯೋಗಶೀಲನಹ ಪುರುಷಸಿಂಹನ ಬಳಿಗೆ
ಆದ್ಯಾದಿ ಲಕ್ಷ್ಮಿಯರು ತಾವಾಗಿ ಬಹರು
ಸಾಧ್ಯವಾಗಿಸು ಸಿದ್ಧಿ ಪುರುಷಪ್ರಯತ್ನದಲಿ
ಸದ್ಯ ಫಲವದರಿಂದೆ - ಪ್ರತ್ಯಗಾತ್ಮ

ಉಂಡುಂಡು ತೇಗಿದರೆ, ದಿಂಡುರುಳಿ ಮಲಗಿದರೆ
ಉಂಡಾಡಿಯಂತಿರಲು ಬಂದ ಫಲವೇನು?
ಭಂಡತನದಿಂ ಬಾಳ ನೂಕಿದರೆ ಬಂತೇನು?
ದಂಡಿಸೆಲೋ ಕಾಯವನು - ಪ್ರತ್ಯಗಾತ್ಮ

ಕಳಕೊಂಡಿದ್ದ ಫೋರ್ಡ್, ಒಂದು ಪೆನ್ನಿಯ ಹಣವ
ಕಳವಳಿಸಿ ಕೊನೆಗದನು ಹುಡುಕಿ ಹೊರತೆಗೆದ
ಇಳೆಯೊಳಗೆ ನವಕೋಟಿ ಸಿರಿವಂತನಾದರೇನ್
ಬೆಳೆಯಗೊಡದಿರುಪೇಕ್ಷೆ - ಪ್ರತ್ಯಗಾತ್ಮ

ಜನುಮ ನೀಡಿದ ಜನನಿಜನಕರೇ ಪರದೈವ
ಅನುನಯದೊಳವರನ್ನು ಮುಪ್ಪಿನಲಿ ಸಲಹು
ನಿನಗಾಗಿ ಅವರೆನಿತು ಕಷ್ಟಗಳ ಸಹಿಸಿದರು
ನೆನೆಯ ಬೇಡವೇ ನೀನು? - ಪ್ರತ್ಯಗಾತ್ಮ

ವೈಮನಸ್ಯವ ಬಿಡದೆ ರಾಷ್ಟ್ರರಾಷ್ಟ್ರಗಳಲ್ಲಿ
ಒಮ್ಮತದ ಭಾವನೆಯು ಮೂಡುವುದು ಎಂತು?
ತಮ್ಮತನವನು ಬಿಡದೆ ಸೌಹಾರ್ದವೆಲ್ಲಿಯದು
ಹಮ್ಮು ಕೇಡಿನ ಬೀಜ - ಪ್ರತ್ಯಗಾತ್ಮ

ಇನ್ನಾವ ಗ್ರಹದೊಳಗೆ ಜೀವರಾಶಿಗಳಿವೆಯೋ
ಇನ್ನುವರೆಗೆಮಗಂತು ತಿಳಿದುಬಂದಿಲ್ಲ
ಔನ್ನತ್ಯಕೇರಿರುವ ನಾಗರಿಕ ಭೂಮಿಯಿದು
ಸೊನ್ನೆಯಾಗುವುದೇನೋ? - ಪ್ರತ್ಯಗಾತ್ಮ

# ಬಯಲಾದ ರಹಸ್ಯ



*ಮೇಣದ ಬತ್ತಿ ಬೆಳಕಿನಿಂದ ಚಿಕ್ಕದಾದ ಕಿಟಕಿಯನ್ನು ಸರಿಸಿದಾಗ ಬಂದ ಬೆಳಕಿನಲ್ಲಿ ಅಟ್ಟಕ್ಕೆ ಸೇರಿದಂತೆ ಮೂಲೆಯಲ್ಲಿ ಮಬ್ಬು ಮಬ್ಬಾಗಿ ಕಾಣಿಸಿದ ಚಿಕ್ಕ ಗುಹೆಯ ಹಾಗೆ ಇದ್ದ ಜಾಗ ನೋಡಿ ಆಶ್ಚರ್ಯ! ಗುಹೆಯಲ್ಲೊಂದು ಗುಹೆಯೇ?*

**ಸತ್ಯವತಿ ರಾವ್**
ಸರಟೋಗ, ಕ್ಯಾಲಿಫೋರ್ನಿಯ

ಆಕಾಶದಲ್ಲಿ ಯಾವ ನೂಕು ನುಗ್ಗಲೂ ಇಲ್ಲದೆ ಸೌಮ್ಯವಾದ ವಾತಾವರಣ. ಬೆಳ್ಳಿಯ ಚಂದ್ರ ಮೌನವಾಗಿ ಬಿಂಬಿಸುತ್ತಿದ್ದ. ಉದಯವಾಗಿದ್ದ ಸೂರ್ಯನ ಬಂಗಾರದ ಕಿರಣಗಳು, ಹಾಗೇ ಮರಕ್ಕೆ ಒರಗಿದ್ದ ಗಿರಿಜೆಯ ಮೇಲೆ ಬಿದ್ದು ಮೈಗೆ ಹಿತವಾಗಿತ್ತು.

ನೆನಪಿನ ತೆರೆಗಳು ಅಲೆ ಅಲೆಯಾಗಿ ಬಂದು ಕಂತೆಗೆ ತಕ್ಕ ಬೊಂತೆಗಳನ್ನು ಬಿಡಿಬಿಡಿಯಾಗಿ ಹರಡಿತ್ತು.

ಊರು ಮೈಸೂರು. ಅಜ್ಜಿ-ತಾತ, ಚಿಕ್ಕಪ್ಪ, ಚಿಕ್ಕಮ್ಮ ಎಲ್ಲರೂ ಇರುವ ಅವಿಭಕ್ತ ಕುಟುಂಬದಲ್ಲಿ ಗಿರಿಜೆ ತಂದೆ ತಾಯಿಯ ಪ್ರೀತಿಯ ಒಬ್ಬಳೇ ಮಗಳು. ಹಿರಿಯರಿಂದ ಬಂದ ಆಸ್ತಿ-ಪಾಸ್ತಿ, ಹೊಲ-ಗದ್ದೆ, ತೋಟ-ತುಡಿಕೆ ಎಲ್ಲ ಸೇರಿ ಅನುಕೂಲಸ್ಥರಾಗಿದ್ದರು.

ತುಂಬಾ ಸಂಪ್ರದಾಯಸ್ಥ ಮನೆ. ಸುಂದರಿಯಾದ ಗಿರಿಜೆಯ ಮದುವೆ ಸಕಾಲದಲ್ಲಿ, ಸಂಬಂಧದಲ್ಲೇ ಲಗ್ನವೊಂದಕ್ಕೆ ವಿಘ್ನವೊಂಭತ್ತು ಆಗದೆ ನಡೀತು. ಮದುವೆ ಮಾಡಿ ನೋಡು, ಕಾಸಿದ್ರೆ ಕೈಲಾಸಾನೂ ತೋರಿಸಿ ನೋಡು ಅನ್ನುವ ಹಾಗೆ ಎಲ್ಲರೂ ಅಚ್ಚರಿಪಡುವಂತೆ ಅದ್ಧೂರಿ ಮದುವೆ ಮಾಡಿದರು.

ಗಿರಿಜೆ ಅಲ್ಲಿ ಇಲ್ಲಿ ಎಲ್ಲೇ ಇರಲಿ 'ಬಿಡದ ವಿಧಿ'ಯ ಆಟದ ಗೊಂಬೆಯಾದಳು. ಅವಳ ಕೆಲವೇ ದಿವಸದ ಸುಂದರ ಬದುಕನ್ನು ನುಂಗಿ ನೀರು ಕುಡಿದ ವಿಧಿ ಹೂಡಿದ ಸಂಚಿನಲ್ಲಿ ಸಿಲುಕಿದಳು. ದುಃಖದ ಒಂದೊಂದು ನಿಮಿಷವೂ ಈಸಬೇಕು, ಇದ್ದು ಜೈಸಬೇಕು ಎಂದು ತಿಳಿದು ತೌರುಮನೆ ಸೇರುವುದರಲ್ಲಿ ಹೆಚ್ಚು ಸಮಯ ಹಿಡಿಯಲಿಲ್ಲ.

ಪುಟ್ಟ ಕಂದನೊಡನೆ ಹುಟ್ಟಿದ ಗೂಡು ಸೇರಿದ ಮಗಳ ಈ ದುಸ್ಥಿತಿಯನ್ನು ನೋಡಿ ತಂದೆ-ತಾಯಿ ದಿಗ್ಭ್ರಾಂತರಾಗಿ ದುಃಖದಿಂದ ಕೊರಗಿ ಸೊರಗಿದರು. "ಮುದ್ದುಮಗಳ ಸಿಹಿಯಾದ ಬದುಕು ಇಷ್ಟು ಬೇಗ ಕಹಿಯಾಯಿತೆ? ಏನು ತಪ್ಪು ಮಾಡಿದಿವಿ ಎಂದು ಈ ಶಿಕ್ಷೆ ದೇವರೇ? ತಾವೊಂದು ಬಗೆದರೆ ದೈವವೊಂದು ಬಗೆಯಿತೆ?" ಎಂದು ಗೋಳಿಟ್ಟರು. ಗಿರಿಜೆಗೆ ನಾಲ್ಕು ಸಮಾಧಾನದ ಮಾತೂ ಆಡಲು ಧೈರ್ಯ ಬಾರದೆ ಮೌನವಾಗಿದ್ದರು. ಅವರು ಹಳೆಯ ಸಂಪ್ರದಾಯದವರಾದರೂ, ಆಚಾರ-ವಿಚಾರದಲ್ಲಿ ನ್ಯೂನತೆಯ ಅಭಿಪ್ರಾಯವಿತ್ತು. ಸಾಯದ ಮನೆಯಿಲ್ಲ, ಬೇಯದ ಕದವಿಲ್ಲವೆಂಬಂತೆ ಸಹನೆಯಿಂದ ಇದ್ದರು.

ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವೇನು? ಹಿಂದಿನದ್ದು ಮರೆತು ಮುಂದಿನದ್ದು ಅರಿಯಬೇಕಾದ ಸಮಯ ಬಂದು ಒದಗಿತ್ತು. ಅಕ್ಕ ಸತ್ತರೆ ಅಮಾವಾಸ್ಯೆ ನಿಲ್ಲದು, ಅಣ್ಣ ಸತ್ತರೆ ಹುಣ್ಣಿಮೆ ನಿಲ್ಲದು, ಹಾಗೇ ಗಿರಿಜೆಯ ಬಾಳೂ ಯಾವ ಕಾಲಕ್ಕೂ ಕಾಯದೇ ತನ್ನ ಚಲನೆಯನ್ನು ನಿರಂತರವಾಗಿಸಿತ್ತು.

ಪಾಲಿಗೆ ಬಂದಿದ್ದೇ ಪಂಚಾಮೃತ ಎಂದು ಹೊರಗಿನ ಪ್ರಪಂಚವನ್ನೇ ಮರೆತು, "ಲಾಲಿಸಿದರೆ ಮಕ್ಕಳು ಪೂಜಿಸಿದರೆ ದೇವರು," ಎಂದು ತನ್ನ ಬದುಕನ್ನು ಮಗುವಿನ ಜೀವನದಲ್ಲೇ ಹೆಣೆದುಕೊಂಡಿದ್ದಳು.

ಪುಟ್ಟ ಕಂದ ರವಿ ಕತ್ತಲೆ ಮನೆಯ ಬೆಳಕಾದ. ಮನೆಯಲ್ಲೆಲ್ಲ ಪುಟ್ಟಕಂದನ ಕೇಕೆ. ಪುಟ್ಟ ಹೆಜ್ಜೆಗಳು ಗಿರಿಜೆಯನ್ನು ಕತ್ತಲೆಯಿಂದ ಬೆಳಕಿಗೆ ಪರಿಚಯಿಸಿತು. ಹಿಂದಿನ ಮುಂದಿನ, ಅಕ್ಕಪಕ್ಕದವರ ಸಹಾನುಭೂತಿಯ ಮಾತು ಕುಗ್ಗಿಹೋದ ಜೀವನಕ್ಕೆ ಚೈತನ್ಯವಾಗಿತ್ತು.

ರವಿ, ಅಜ್ಜಿ, ತಾತ, ಅಮ್ಮನ ಪ್ರೀತಿಯಲ್ಲೇ ಮಿಂದು ಬೆಳೆದು ದೊಡ್ಡವನಾದ. ತಾಯಿಯ ಹಾಗೆ ಸುಂದರ, ತಂದೆಯ ಹಾಗೆ ವಿದ್ಯಾವಂತ. ಜೊತೆಯಲ್ಲಿ ವಿನಯವೂ ಇತ್ತು. ಮನೆಯವರ ಪ್ರೀತಿಯೆಂಬ ಸುಳಿಯಲ್ಲಿ ಸಿಕ್ಕ ರವಿಯನ್ನು ಬಿಡಿಸಿ ಹೊರತರಲು ವಿದ್ಯೆಯೇ ಗಾಳವಾಗಿ ಅವನನ್ನು ಮೇಲಕ್ಕೆ ಎತ್ತಿ ತರಲು ಉಪಯೋಗವಾಗಲು ರವಿಗೆ ಅದೃಷ್ಟದ ಬಾಗಿಲು ತಾನೇ ತಾನಾಗಿ ತೆರೆಯಿತು. ಮನೆಯಿಂದ, ಊರಿನಿಂದ ದೂರದ ಪ್ರಯಾಣದ ಸುದ್ದಿ ತಿಳಿದ ಅಂಟಿದ್ದ ಜೀವಗಳು ಬೇರೆ ಬೇರೆ ಆಗುವ ಕಾಲವನ್ನು ಎದುರಿಸುವ ಶಕ್ತಿ ಇಲ್ಲವಾಗಿ ಆಕಾಶ ಭೂಮಿ ಒಂದಾಗುವ ಹಾಗೆ ಗೋಳಾಡಿದರು.

ಸಂಸ್ಕಾರವೆಂಬ ಅಚ್ಚು ಬಲವಾಗಿ ಎಲ್ಲರ ಮೇಲೂ ಒತ್ತಿತ್ತು. ಆಗೋದೆಲ್ಲ ಒಳ್ಳೆಯದಕ್ಕೆ ಎಂದು ಬಕಪಕ್ಷಿಯ ಹಾಗೆ ಮುಂದಿನ ಉಜ್ವಲ ಭವಿಷ್ಯ ಎದುರು ನೋಡುತ್ತಾ ತಾಳಿದವ ಬಾಳಿಯಾನು ಎಂದು ಸುಮ್ಮನೆ ಕುಳಿತರು.

ಮುಂದಿನ ವಾರ ಬರುವ ಸಾಧು ಸಂತರಿಗೆ ಇವರ ಮನೆಯಲ್ಲಿ ತಂಗುವ ಏರ್ಪಾಡು ಮಾಡಬೇಕಿತ್ತು. ಮನೆಯನ್ನು ಶುದ್ಧ ಮಾಡುವ ಕೆಲಸ ಶುರುವಾಯ್ತು. ಗಿರಿಜೆ ಅಟ್ಟದಿಂದ ಶುರು ಮಾಡಲು ಹೊರಟಳು. ಹಲವು ವರ್ಷಗಳಿಂದ ಕೂಡಿದ್ದ ಕಸ. "ಈಗ ಏನು ಹುಲಿ-ಕರಡಿ ಇದ್ರೂ ಗೊತ್ತಾಗಲ್ಲ," ಅಂದುಕೊಳ್ಳುತ್ತ ಅಟ್ಟ ಹತ್ತಿ ನೋಡಿದರೆ, ಜೇಡದ ಬಲೆ, ಬೂಜುಗಳಿಂದ ಕೂಡಿ ಅದರ ಮನೇನೆ ವಂದಿತ್ತು.

ಮೇಣದ ಬತ್ತಿ ಬೆಳಕಿನಿಂದ ಚಿಕ್ಕದಾದ ಕಿಟಕಿಯನ್ನು ಸರಿಸಿದಾಗ ಬಂದ ಬೆಳಕಿನಲ್ಲಿ ಅಟ್ಟಕ್ಕೆ ಸೇರಿದಂತೆ ಮೂಲೆಯಲ್ಲಿ ಮಬ್ಬು ಮಬ್ಬಾಗಿ ಕಾಣಿಸಿದ ಚಿಕ್ಕ ಗುಹೆಯ ಹಾಗೆ ಇದ್ದ ಜಾಗ ನೋಡಿ ಆಶ್ಚರ್ಯ! ಗುಹೆಯಲ್ಲೊಂದು ಗುಹೆಯೇ? ಸ್ವಲ್ಪ ಗಲೀಜನ್ನು ಸರಿಸಿದಾಗ ಒಳಗೆ ಒಂದು ಬಣ್ಣ ಹೋದ ಹಳೇ ಪೆಟ್ಟಿಗೆ ಕಣ್ಣಿಗೆ ಬಿತ್ತು. ಅರೆತೆರೆದ ಪೆಟ್ಟಿಗೆಯಿಂದ ಅಸ್ತವ್ಯಸ್ತವಾಗಿ ಬಿದ್ದ ಸಾಮಾನು ನೋಡಿ ಮನಸ್ಸು ಭಯದಿಂದ ಅಲ್ಲೋಲಕಲ್ಲೋಲವಾಯಿತು. ಮಾಸಿದ ಬಟ್ಟೆಯಲ್ಲಿ ರಕ್ತದ ಕಲೆಗಳು. ಸುತ್ತಲೂ ಗೆದ್ದಲು ಹಿಡಿದು ಪುಡಿಪುಡಿಯಾಗಿ ರಾಸಿ ಬಿದ್ದಿತ್ತು! ಎಷ್ಟು ಹುಡುಕಿದರೂ ಮನೇಲಿ ಸಿಗದ ಗಂಡನ ಉಂಗುರ ಏನಿದು ಇಲ್ಲಿ!! ಗಂಡ ಸತ್ತ ಹಿಂದಿನ ದಿನ ನಡೆದ ಬಿರುಸಿನ ಆಸ್ತಿ ವಿಷಯದ ಮಾತು ಜ್ಞಾಪಕಕ್ಕೆ ಬಂದು ಒಂದು ನಿಮಿಷ ಸ್ಥಂಭಿತಳಾದಳು, ನಾಳೆ ಬದುಕಿದ್ರೆ ತಾನೆ!! ಎಂದು ಸರ್ರನೇ ಹೇಳಿ ಹೋದ ಗುಟ್ಟು ಈಗ ರಟ್ಟಾಯಿತು.

ಅಯ್ಯೋ ಪಾಪಿ, ಗೋಮುಖ ವ್ಯಾಘ್ರನೇ, ಮಾಡಿದ ತಪ್ಪಿಗೆ, ಪಾಪಕ್ಕೆ ಪ್ರಾಯಶ್ಚಿತ್ತವೇ ಇಲ್ಲ, ಎಂದು ಬಡಬಡಾಯಿಸುತ್ತಿದ್ದಾಗ ಯಾರೋ ಅಟ್ಟ ಹತ್ತುವ ಶಬ್ದ, ಯಾರದು? ಹತ್ತಿದ ಮೇಲೆ ಧಡಾರ್ ಎಂದು ಏಣಿ ದೂಡಿ ತನ್ನ ಕಡೆಗೇ ನಡೆದು ಬರುವ ಕಾಲಿನ ಸಪ್ಪಳ ಆಲಿಸುತ್ತ ಆಲಿಸುತ್ತ ಭಯದಿಂದ ಮೈನಡುಗಿ ಬೆವರಿತು. ಇತ್ತಕಡೆ ಬರುತ್ತಿದೆ, ಇನ್ನೇನು ತನ್ನ ಹಿಂದೆ ನಿಂತು ಹಾಗೇ ಕುತ್ತಿಗೆಗೆ ಕೈ ಹಾಕಲು ಉದ್ವೇಗ ಹೆಚ್ಚಾಗಿ ಥರಥರ ನಡುಗಿ ಅಲ್ಲೇ ಬಿದ್ದಿದ್ದ ಕನ್ನಡಿ ಚೂರಿನಲ್ಲಿ ಚಿಕ್ಕಪ್ಪನ ಪ್ರತಿಬಿಂಬ. ಪ್ರತ್ಯಕ್ಷ ನೋಡಿ ಕಿಟಾರ್ ಎಂದು ಚೀತ್ಕರಿಸಲು, ರಕ್ತದ ಚಲನೆ ಸಿಡಿಲು ಗುಡುಗು ಮಿಂಚಿಗಿಂತ ವೇಗವಾಗಿ ಬಂದು ಗಿರಿಜೆಯ ಹೃದಯವನ್ನೇ ಇಬ್ಭಾಗಿಸಿದಂತಾಗಿ, ಕನಸಿನ ಲೋಕದಿಂದ ಹೊರಬರಲಾರದೆ ಪರಲೋಕದತ್ತ ಪ್ರಯಾಣ ಬೆಳೆಸಿದ್ದಳು.

ಬಾ ಅಜ್ಜಿ ಬಾ, ಕಣ್ಣಾ ಮುಚ್ಚೆ ಆಟವಾಡೋಣ, ಎಷ್ಟು ಹೊತ್ತಿನಿಂದ ಕೂತಿದ್ದೀಯ ಎಂದು ಕೈಹಿಡಿದು ಎಳೆಯಲು ದೊಪ್ಪನೆ ಉರುಳಿದ ದೇಹದಲ್ಲಿ ಜೀವ ಹಾರಿ ಹೋದದ್ದು ಪಾಪ ಮೊಮ್ಮಗಳಿಗೆ ಹೇಗೆ ತಿಳಿಯುತ್ತೆ?

◈



*ಸೂರ್ಯನ ಶಾಖವು 15 ದಶಲಕ್ಷ ಡಿಗ್ರೀ (ಫ್ಯಾರನ್‌ಹೈಟ್) ತಲುಪಬಲ್ಲದು!*

**೯ನೇ ಪುಟದಲ್ಲಿದ್ದ ಚಿತ್ರ-ಪದಚೌಕದ ಉತ್ತರಗಳು :**

[illegible]





# ಕ್ರಿಕೆಟ್ಟಿನಿಂದ ನಾ ಕಲಿತ ಪಾಠ


**ಕಿರಣ್ ಸೂರ್ಯನಾರಾಯಣ**

ಸ್ಯಾನ್ ಹೊಸೆ, *kirands_AT_yahoo.com* [ಕನ್ನಡಕ್ಕೆ: ಮಧುಕಾಂತ್ ಕೃಷ್ಣಮೂರ್ತಿ]


*ಕ್ರಿಕೆಟ್ಟಿನಲ್ಲಿ ಯಶಸ್ವಿಯಾಗುವುದುಕ್ಕೆ ಬೇಕಾಗಿರುವುದು ಉತ್ತಮ ಆಟಗಾರರಲ್ಲ. ಉತ್ತಮ ಕ್ರಿಕೆಟ್ ತಂಡವೂ ಅಲ್ಲ. ಬರೀ ಹನ್ನೊಂದು ಆಟಗಾರರು ಸೇರಿದರೆ ಒಂದು ತಂಡವಾಗುವುದಿಲ್ಲ.*

ಸಚ್ಚಿನ್ ತೆಂಡೂಲ್ಕರ್ ಹುಟ್ಟಿದ್ದೇ ಕ್ರಿಕೆಟ್ ಆಡಲು ಎನ್ನುವುದು ಭಾರತದಲ್ಲಿ ಮನೆಮಾತು. ನಾನಾದರೋ ಹುಟ್ಟಿದ್ದೇ ಕ್ರಿಕೆಟ್ ಅನುಸರಿಸುವುದಕ್ಕಾಗಿ. ನಾನೊಬ್ಬ ಮಹಾನ್ ಕ್ರಿಕೆಟ್ ಪ್ರೇಮಿ ಎಂದು ಎಷ್ಟು ಸಾರಿ ಹೇಳಿದರೂ ಸಾಲದು. ನಾನು ವರುಷವಿಡೀ ಕ್ರಿಕೆಟ್ ಬಗ್ಗೆಯೇ ಯೋಚಿಸುತ್ತಿರುತ್ತೇನೆ - ಕಳೆದ ಮೂವತ್ತೈದು ವರುಷದಿಂದ! ಇಡೀ ಪ್ರಪಂಚದಲ್ಲೇ ನನ್ನಂತಹ ಕ್ರಿಕೆಟ್‌ಪ್ರೇಮಿ ಇಲ್ಲವೆಂದರೆ ಸುಳ್ಳಾಗಲಾರದು.

ಕ್ರಿಕೆಟ್ ಎಂಬುದು ಭವ್ಯ ಅನಿಶ್ಚಿತತೆಗಳ ಹಾಗೂ ಪ್ರಚಂಡ ಕಷ್ಟ ಸಹಿಷ್ಣುತೆಯ ಕ್ರೀಡೆ. ಐದು ದಿನದ ಟೆಸ್ಟ್ ಪಂದ್ಯದಲ್ಲಂತೂ ಇದು ಹೆಚ್ಚು ಸತ್ಯ. ಯಾವ ತಂಡ ಐದೂ ದಿನಗಳಲ್ಲಿ ಹೆಚ್ಚಿನ ಬಲಾಬಲ ಪ್ರದರ್ಶಿಸುವುದೋ ಗೆಲುವು ಆ ತಂಡಕ್ಕೆ. ಕ್ರಿಕೆಟ್ಟನ್ನು ಅನುಸರಿಸುವುದರಿಂದ ನನ್ನ ಜೀವನಕ್ಕೆ ಉಪಯೋಗವಾಗುವ ಅನೇಕ ಪಾಠಗಳನ್ನು ನಾನು ಕಲಿತಿದ್ದೇನೆ. ನನ್ನ ಸ್ವಭಾವ, ಧೋರಣೆಗಳು ಮತ್ತು ಜೀವನಶೈಲಿ ಕ್ರಿಕೆಟ್ಟಿನಿಂದ ಪ್ರಭಾವಿತವಾಗಿವೆ ಎಂದರೆ ಅತಿಶಯೋಕ್ತಿಯಾಗಲಾರದು.

ಕ್ರಿಕೆಟ್ಟಿನಲ್ಲಿ ಯಶಸ್ವಿಯಾಗುವುದುಕ್ಕೆ ಬೇಕಾಗಿರುವುದು ಉತ್ತಮ ಆಟಗಾರರಲ್ಲ. ಉತ್ತಮ ಕ್ರಿಕೆಟ್ ತಂಡವೂ ಅಲ್ಲ. ಬರೀ ಹನ್ನೊಂದು ಆಟಗಾರರು ಸೇರಿದರೆ ಒಂದು ತಂಡವಾಗುವುದಿಲ್ಲ. ತಂಡದ ಯಶಸ್ಸಿಗೆಂದೇ ಆಡುವ ಹನ್ನೊಂದು ಕ್ರೀಡಾಪಟುಗಳು ಜೊತೆಗೂಡಿ ಆಡಿ ಒಂದೊಂದೇ ಭಾಗದಲ್ಲಿ ಮೇಲುಗೈ ಸಾಧಿಸುತ್ತ ಹೋಗಬೇಕು. ಆ ಕ್ಷಣಕ್ಕೆ ಮಾಡಬೇಕಾದ ಕೆಲಸದ ಬಗ್ಗೆ ಏಕಾಗ್ರತೆ ವಹಿಸುವುದರ ಜೊತೆಗೆ ಪಂದ್ಯದಲ್ಲಿ ಮುಂದೆ ಬರಲಿರುವ ಸವಾಲುಗಳನ್ನು ಎದುರಿಸಲು ಉಪಾಯಗಳನ್ನು ಹಾಗೂ ತಂತ್ರಗಳನ್ನು ರೂಪಿಸುತ್ತಿರಬೇಕು. ಬ್ಯಾಟಿಂಗ್ ಕ್ರಮ ಬದಲಿಸಬೇಕೋ ಬೇಡವೋ? ನೈಟ್‌ವಾಚ್‌ಮನ್ನನ ಅಗತ್ಯವಿದೆಯೆ? ಬೌಲರುಗಳನ್ನು ಹೇಗೆ ಬದಲಾಯಿಸಬೇಕು? ಫಾಲೊ ಆನ್ ಹೇರುವುದು ಸಾಧುವೆ? ಆದರೆ ಅದರಿಂದ ತಿರುಗೇಟು ತಿನ್ನದಿರಬೇಕಾದರೆ ಏನು ಮಾಡಬೇಕು? ಇನ್ನಿಂಗ್ಸನ್ನು ಯಾವಾಗ ಡಿಕ್ಲೇರ್ ಮಾಡಬೇಕು?

ನಿಜಜೀವನದಲ್ಲೂ ಸಹ ಇದೇ ರೀತಿ ಪ್ರಶ್ನೆಗಳನ್ನು ನಾವು ಎದುರಿಸುತ್ತಿರುತ್ತೇವೆ. ಕ್ರಿಕೆಟ್ಟಿನಲ್ಲಿ ಮಾಡುವಂತೆ ಇಲ್ಲಿಯೂ ಸಹ ಆ ದಿನದ ಬದುಕೇ ಕೇಂದ್ರಬಿಂದುವಾಗಿದ್ದೂ, ಮುಂಬರುವ ದಿನಗಳ, ವರುಷಗಳ ಬದುಕಿನ ಬಗ್ಗೆ ಗಮನವಿಟ್ಟಿರಬೇಕಾಗುತ್ತದೆ. ಮುಖ್ಯವಾಗಿ ಪ್ರಸ್ತುತದ ಬಗ್ಗೆ ಏಕಾಗ್ರತೆ ವಹಿಸಬೇಕು ಮತ್ತು ಭವಿಷ್ಯದ ಬಗ್ಗೆ ಆತಂಕವಿರಬಾರದು. ಇಲ್ಲದಿದ್ದರೆ ಉತ್ತಮ ಅವಕಾಶಗಳು ತಪ್ಪುವ ಸಾಧ್ಯತೆ ಇದೆ - ನಿಮ್ಮ ಕೈಗೆ ಬಂದ ಕ್ಯಾಚ್ ಎತ್ತಿಹಾಕುವಂತೆ ಆಡಬಾರದು.

ಈ ಉದಾಹರಣೆ ನೋಡಿ. ಭಾರತ ಹಾಗು ಆಸ್ಟ್ರೇಲಿಯ ತಂಡಗಳ ನಡುವೆ ಒಂದು ಪಂದ್ಯ. ನೀವು ಭಾರತದ ತಂಡದ ಒಬ್ಬ ಆಟಗಾರ. ಕಳೆದ ಇಪ್ಪತ್ತು ವರುಷಗಳ ಕ್ರಿಕೆಟ್ ಚರಿತ್ರೆ ಅನುಸರಿಸಿದವರು ಆಸ್ಟ್ರೇಲಿಯ ಅತಿ ಬಲಿಷ್ಠವಾದ ತಂಡ ಎಂದು ಒಪ್ಪುತ್ತಾರೆ. ಭಾರತ ಅನುಸರಿಸಿದ ತರ್ಕ ಸರಳವಾದುದು. “ಮೊದಲಿನಿಂದಲೇ ಆಕ್ರಮಣಕಾರಿ ಶೈಲಿಯ ಆಟವಾಡಿ! ಗಟ್ಟಿಗರಂತೆ ಮುನ್ನುಗ್ಗಿ! ಪಟ್ಟು ಬದಲಿಸಬೇಡಿ! ವಿಶ್ರಮಿಸದಿರಿ!” ಈ ರೀತಿಯ ಒತ್ತಡ ಎದುರಿಸಲಾರದೆ ಆಸ್ಟ್ರೇಲಿಯ ತತ್ತರಿಸಿತು. ಏಕೆಂದರೆ ಅವರಿಗೆ ಧಾಳಿ ಎದುರಿಸಿ ಗೊತ್ತೇ ಇರಲಿಲ್ಲ! ಬೇರೆಲ್ಲಾ ತಂಡಗಳೂ ಮಾಡಿದ್ದ ತಪ್ಪೆಂದರೆ ಅವರು ದಿಟ್ಟತನದಿಂದ ತಮ್ಮ ಹೆಜ್ಜೆ ಮುಂದಿಡದೆ ಆಟವಾಡಿದರು. ಧಾಳಿ ಮಾಡದೆ ರಕ್ಷಣಾತ್ಮಕ ಆಟ ಆಡಿದರು. ಅದರ ಫಲಿತಾಂಶವಾಗಿ ಆಸ್ಟ್ರೇಲಿಯಕ್ಕೆ ತಮ್ಮ ಕುತ್ತಿಗೆ ಹಿಸುಕಲು ಅವಕಾಶ ನೀಡಿದರು. ನಿಜ ಜೀವನದಲ್ಲಿಯೂ ಸಹ ರಕ್ಷಣಾತ್ಮಕ ಮಾರ್ಗ ನಿಮ್ಮನ್ನು ಎಲ್ಲಿಗೂ ಕೊಂಡೊಯ್ಯುವುದಿಲ್ಲ. ಸುಮ್ಮನೆ ಗೊಣಗುವುದು ಅಥವಾ ನಿಮ್ಮ ನಡೆಗಳನ್ನು ಸಮರ್ಥಿಸಿಕೊಳ್ಳುವುದರಿಂದ ಏನೂ ಸಾಧಿಸಲಾಗುವುದಿಲ್ಲ. ನಿಮ್ಮ ಸ್ಪರ್ಧಿಗಳನ್ನು ಬಗ್ಗುಬಡಿಯುವುದಕ್ಕೆ ಬೇಕಾಗಿರುವುದು ತಡೆರಹಿತ ಧಾಳಿ, “ಯುದ್ಧದಲ್ಲಿ ವೈರಿಗಳಿಗೆ ಕರುಣೆ ತೋರದಂತಹ ಮನೋಭಾವ” ಮತ್ತು ಕುತ್ತಿಗೆಪಟ್ಟಿ ಹಿಡಿದು ವೈರಿಯನ್ನು ನೆಲಸಮಗೊಳಿಸುವ ದೃಢ ಸಂಕಲ್ಪ.

ಕ್ರಿಕೆಟ್ಟಿನಲ್ಲಿ ಒಬ್ಬ ಬ್ಯಾಟ್ಸ್‌ಮನ್ ತನ್ನೆಡೆಗೆ ಬಂದ ಚೆಂಡನ್ನು ಅದರ ಗುಣಕ್ಕನುಸಾರವಾಗಿ ಆಡಬೇಕು. ಬೌಂಡರಿಗೆ ಕಳಿಸಬೇಕಾಗಿದ್ದ ಚೆಂಡಿಗೆ ಡಿಫೆನ್ಸಿವ್ ಆಟ ಆಡಿದರೆ, ನೀವು ಒಂದು ಅವಕಾಶ ಕಳೆದುಕೊಂಡಂತೆ. ಅದೇ ರೀತಿ ನಿಮ್ಮ ಪಾದಕ್ಕೆ ನೇರವಾಗಿ ನುಗ್ಗಿ ಬಂದ ಯಾರ್ಕರ್‌ಗೆ ಸಂದರ್ಭೋಚಿತ ರೀತಿಯಲ್ಲಿ ಆಡದಿದ್ದರೆ ನಿಮ್ಮ ತಂಡದ ಆಟ ಮತ್ತು ಫಲಿತಾಂಶಗಳನ್ನು ನಾಶಗೊಳಿಸಿ ಎದುರಾಳಿ ತಂಡಕ್ಕೆ ಅನುಕೂಲ ಮಾಡಿಕೊಡುತ್ತೀರಿ. ನಿಮ್ಮ ಜೀವನದಲ್ಲೂ ಸಹ ಕ್ಷಣಾರ್ಧದಲ್ಲಿ ನಿರ್ಧಾರ ತೆಗೆದುಕೊಳ್ಳಬೇಕಾದ ಲಕ್ಷಾಂತರ ಸನ್ನಿವೇಶಗಳು ಎದುರಾಗುತ್ತವೆ. “ನಾನು ಹೀಗೆ ಮಾಡಬಾರದಿತ್ತು ಅಥವಾ ಹಾಗೆ ಮಾಡಿದ್ದರೆ ಚೆನ್ನಾಗಿತ್ತು” ಎಂದೆಲ್ಲ ಯೋಚಿಸಿಲ್ಲವೆ? ಆದರೆ ಸರಿಯಾದ ಸಮಯಕ್ಕೆ ಸರಿಯಾದ ನಿರ್ಧಾರ ತೆಗೆದುಕೊಳ್ಳುವುದು ನಿಯಮವೇ ಹೊರತು ಅಪವಾದವಲ್ಲ. ದಿನನಿತ್ಯ ಒದಗುವ ಈ ಸನ್ನಿವೇಶಗಳಲ್ಲಿ ತಪ್ಪು ಹೆಜ್ಜೆ ಇಡದೆ ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾದ ಹುರುಡಿಗೆ ನಾವು ಸಿದ್ಧರಾಗಿರಬೇಕು.

ಈ ಪರಿಸ್ಥಿತಿಯನ್ನು ಗಮನಿಸಿ. ಮೈದಾನದಲ್ಲಿರುವ ಇಬ್ಬರು ಬ್ಯಾಟ್ಸ್‌ಮನ್ನುಗಳಿಗೆ ಪೆವಿಲಿಯನ್ನಿನಲ್ಲಿ ಕೂತಿರುವ ತಮ್ಮ ನಾಯಕನು ಆ ಸಮಯದಲ್ಲಿ ಏನು ಯೋಜನೆ ಹಾಕುತ್ತಿರುವನೋ ತಿಳಿದಿರುವುದಿಲ್ಲ. ವಿಕೆಟ್ ಕಳೆದುಕೊಳ್ಳುವ ಅಪಾಯವಿದ್ದರೂ ರನ್ ಗಳಿಕೆಯ ವೇಗವನ್ನು ಹೆಚ್ಚಿಸುವುದೆ? ಅಥವಾ ವಿಕೆಟ್ ಕಾಪಾಡಿಕೊಳ್ಳುವುದೆ? ಸರಿ ಯಾವುದು ತಪ್ಪು ಯಾವುದು, ಆಗಿನ ಪರಿಸ್ಥಿತಿಯನ್ನು ಅವಲಂಬಿಸಿರುತ್ತದೆ. ಬ್ಯಾಟ್ಸ್‌ಮನ್ನುಗಳು ತಮ್ಮ ತಂಡದ ಹಿತಕ್ಕೆ ಬೇಕಾದ ನಿರ್ಧಾರವನ್ನು ತೆಗೆದುಕೊಂಡು ಅದನ್ನು ಜಾರಿಗೊಳಿಸಬೇಕು. ಅವರ ಆ ನಿರ್ಧಾರ ತಿರುಗೇಟು ನೀಡಿದರೆ ಪರವಾಗಿಲ್ಲ. ನಿಮಗೆ ಸರಿತೋಚಿದ್ದನ್ನೇ ನೀವು ಮಾಡಬೇಕು. ನಿಮ್ಮ ತಂಡ, ಸಹೋದ್ಯೋಗಿಗಳು, ನಿಮ್ಮ ಸಂಸ್ಥೆ ಹಾಗು ನಿಮ್ಮ ಸಂಸಾರದ ಹಿತವನ್ನು ಗಮನದಲ್ಲಿಟ್ಟುಕೊಂಡು ಈ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು. ಪರಿಣಾಮಗಳ ಬಗ್ಗೆ ಯೋಚಿಸಬೇಡಿ. ಹೆಚ್ಚಿನ ಬಾರಿ ಪರಿಣಾಮಗಳು ಒಳ್ಳೆಯವೇ ಅಗಿರುತ್ತವೆ. ದುಷ್ಪರಿಣಾಮಗಳು ಆಗಾಗ ಇದ್ದೇ ಇರುತ್ತವೆ. ಆದರೆ ಹಾಗೆ ಆಗುವ ಸಾಧ್ಯತೆಗಳನ್ನು ಕಮ್ಮಿ ಮಾಡಬಹುದು.

ಫುಟ್‌ಬಾಲ್ ಮತ್ತು ಟೆನ್ನಿಸ್ ಆಟಗಳಂತಿರದೆ, ಕ್ರಿಕೆಟ್ ಪಂದ್ಯ ನಿಧಾನಗತಿಯಲ್ಲಿ ಪ್ರಾರಂಭವಾಗಿ ಒಂದೊಂದೇ ಓವರಿನೊಂದಿಗೆ ಉದ್ವೇಗ ಮತ್ತು ಬಿಗಿತ ಹೆಚ್ಚಿಸಿಕೊಳ್ಳುತ್ತ ಹೋಗುತ್ತದೆ. ಎರಡೂ ತಂಡಗಳ ಸಾಮರ್ಥ್ಯ ಸರಿತೂಗುವಂತಿದ್ದರಂತೂ ಉದ್ರೇಕ ತಾರಕ ಮಟ್ಟಕ್ಕೆ ಹೋಗುತ್ತದೆ. ಟೆಸ್ಟ್ ಪಂದ್ಯದ ಐದೂ ದಿನಗಳಲ್ಲಿ ತನ್ನ ಶಾಂತಚಿತ್ತವನ್ನು ಕಾಪಾಡಿಕೊಂಡು ಬರುವ ತಂಡ ಗೆಲುವು ಸಾಧಿಸುತ್ತದೆ. ಸಾಮಾನ್ಯ ಬದುಕಿನಲ್ಲೂ ಸಹ ಇದೇ ರೀತಿ ಕೈಗೆ ಬಂದ ಕೆಲಸವನ್ನು ಶ್ರದ್ಧೆಯಿಂದ ಮುಗಿಸಬೇಕು. ತಕ್ಷಣಕ್ಕೆ ಯಾವುದೇ ಪ್ರಯೋಜನ ಕಾಣದಿದ್ದರೂ ಹನಿಹನಿಗೂಡಿದರೆ ಹಳ್ಳ ಎಂಬಂತೆ ನಿರಂತರ ಬೆಳವಣಿಗೆ ಸಾಧಿಸಬೇಕು.

ಕ್ರಿಕೆಟ್ಟಿನ ಮೈದಾನದಲ್ಲಿ ಬಚ್ಚಿಟ್ಟುಕೊಳ್ಳಲು ಜಾಗವಿರುವುದಿಲ್ಲ. ನಿಮಗೆ ನಿಮ್ಮ ರಾಜ್ಯದ ಶಿಫಾರಸ್ ಇರಬಹುದು ಅಥವಾ ನೀವು ಆಯ್ಕೆದಾರರ ನೆಚ್ಚಿನ ಪಟುವಿರಬಹುದು. ಅದೆಲ್ಲ ಗೌಣ. ಘಂಟೆಗೆ ತೊಂಬತ್ತು ಮೈಲಿ ವೇಗದಲ್ಲಿ ಚೆಂಡು ನಿಮ್ಮೆಡೆಗೆ ಬರುತ್ತಿದ್ದರೆ ನಿಮಗೆ ಬೇಕಾಗಿರುವುದು ಎದೆಗಾರಿಕೆ. ಜೀವನದಲ್ಲಿಯೂ ಇದೇ ರೀತಿ ತಾನೆ? ನಿಮ್ಮ ಕಷ್ಟಗಳಿಗೆ ಯಾರೂ ಆಗುವುದಿಲ್ಲ. ತಾಂತ್ರಿಕ, ಆರ್ಥಿಕ ಹಾಗು ವ್ಯಾವಹಾರಿಕ ನಿರ್ವಹಣೆಯಲ್ಲಿ ನೀವು ಹಿಂದೆ ಬಿದ್ದಿದ್ದರೆ ನಿಮ್ಮನ್ನು ನೀವೇ ಕಾಪಾಡಿಕೊಳ್ಳಬೇಕು. ಕಛೇರಿಯ ಗೊಂದಲಗಳನ್ನು ನಿರ್ವಹಿಸುವುದರ ಜೊತೆಗೆ ಮನೆಯ ವಹಿವಾಟುಗಳನ್ನು ಸರಿತೂಗಿಸುವುದರಲ್ಲಿಯೂ ಚಾಕಚಕ್ಯತೆ ಇರಬೇಕು.

ಈ ಲೇಖನವನ್ನು ಸೈದ್ಧಾಂತಿಕ ಚರ್ಚೆಗೆ ತಿರುಗಿಸುವುದಕ್ಕೆ ಮುನ್ನ ಒಂದು ಮಾತು. ಕೇವಲ ಒಬ್ಬ ಆಟಗಾರನ ಶ್ರೇಷ್ಠ ಆಟಗಾರಿಕೆಯಿಂದ ಕ್ರಿಕೆಟ್ ಪಂದ್ಯ ಗೆಲ್ಲಲು ಸಾಧ್ಯವಿಲ್ಲ. ಅದಕ್ಕೆ ಅಪವಾದಗಳು ಸಹ ಇವೆ. ಉದಾಹರಣೆಗೆ: ವೆಸ್ಟ್‌ಇಂಡೀಸ್ ವಿರುದ್ಧ ಮದರಾಸಿನಲ್ಲಿ ವಿಶ್ವನಾಥರ ತೊಂಬತ್ತೇಳು, ಲಕ್ಷ್ಮಣ್ ಬಾರಿಸಿದ ಇನ್ನೂರ ಎಂಬತ್ತೊಂದು ರನ್ನುಗಳು, ಆಸ್ಟ್ರೇಲಿಯಾದ ವಿರುದ್ಧ ಎಂಬತ್ತು-ಎಂಬತ್ತೊಂದರಲ್ಲಿ ಬಾತಮ್ ಅವರ ಆಟ, ಅಡಿಲೇಡಿನಲ್ಲಿ ರಾಹುಲ್ ದ್ರಾವಿಡರ ಆಟ - ಈ ಎಲ್ಲ ಸನ್ನಿವೇಶಗಳಲ್ಲೂ ಮೇಲೆ ಹೇಳಿದ ಆಟಗಾರರು ವೈಯಕ್ತಿಕ ಸಾಧನೆಯಿಂದ ತಮ್ಮ ತಂಡಕ್ಕೆ ಕೀರ್ತಿ ತಂದಿದ್ದಾರೆ. ಆದರೂ ಹೆಚ್ಚಿನ ಬಾರಿ, ಜಯಕ್ಕೆ ಕಾರಣ ಇಷ್ಟೆ - ಎಲ್ಲ ಆಟಗಾರರೂ ತಮ್ಮ ತಮ್ಮ ಜವಾಬ್ದಾರಿಯನ್ನು ಸಣ್ಣ ಸಣ್ಣ ರೀತಿಯಲ್ಲಿದ್ದರೂ ಸರಿಯಾದ ರೀತಿಯಲ್ಲಿ ನಿರ್ವಹಿಸುವುದು! ಒಬ್ಬೊಬ್ಬ ಆಟಗಾರನೂ ತನ್ನ ತಂಡವನ್ನು ಜಯದ ಹಾದಿಯಲ್ಲಿ ಕರೆದೊಯ್ಯುವುದಕ್ಕೆ ತಮ್ಮ ಕಾರ್ಯ ನಿರ್ವಹಿಸಬೇಕು. ಈ ಮಾತು ಬ್ಯಾಟಿಂಗ್, ಬೌಲಿಂಗ್ ಮತ್ತು ಫೀಲ್ಡಿಂಗ್ - ಎಲ್ಲಕ್ಕೂ ಅನ್ವಯಿಸುತ್ತದೆ. ಕ್ರಿಕೆಟ್ ಪಂದ್ಯ ಗೆಲ್ಲಲು ಎಲ್ಲ ಹನ್ನೊಂದು ಆಟಗಾರರೂ ಬೇಕು. ವೈಯಕ್ತಿಕ ಸಾಧನೆ ಸಹಾಯಕಾರಿಯಾದರೂ ಕೊನೆಗೆ ಜಯ ತರುವುದು ಪ್ರತಿ ಆಟಗಾರನ ಸಹಕಾರ.

ನಿಮ್ಮ ಆಫೀಸಿನಲ್ಲೂ ಮೇಲೆ ಹೇಳಿದಂತಹ ಸನ್ನಿವೇಶಗಳು ಬರಬಹುದು. ನೀವು ನಿಮ್ಮ

ಕಂಪನಿಗೆ ಮಾರಾಟದ ಮೂಲಕ ನೇರವಾಗಿ ಹಣಗಳಿಸುತ್ತಿಲ್ಲದಿರಬಹುದು. ಆದರೆ ತಾಂತ್ರಿಕ ಬೆಂಬಲ ನೀಡುವುದರ ಮೂಲಕ ಕಂಪನಿಯ ಆದಾಯಕ್ಕೆ ನಿಮ್ಮ ಕೈಲಾದಂತೆ ಸಹಾಯ ಮಾಡಿರುತ್ತೀರಿ. ನಿಮ್ಮ ಕಂಪನಿಯ ಬಗ್ಗೆ ಗಿರಾಕಿಗಳಲ್ಲಿ ತೃಪ್ತಿಯ ಭಾವನೆ ಮೂಡುವುದರಲ್ಲಿ ನಿಮ್ಮ ಕೈವಾಡ ಇದ್ದೇ ಇರುತ್ತದೆ.

ಕ್ರಿಕೆಟ್ಟಿನಲ್ಲಿ ವಿಜಯಿಗಳಾಗಲು ಬೇಕಾದ ಅವಶ್ಯಕತೆಗಳು ಈ ರೀತಿ ಇವೆ: ಯಶಸ್ವಿಯಾಗುವ ಸಾಧ್ಯತೆ ಇರುವಂತಹ ಆಟಗಾರರ ಆಯ್ಕೆ ಮಾಡಿ ತಂಡವನ್ನು ರಚಿಸಬೇಕು. ಪಿಚ್ಚಿನ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಮೊದಲು ಬ್ಯಾಟಿಂಗ್ ಮಾಡಬೇಕೋ ಅಥವಾ ಬೌಲಿಂಗ್ ಮಾಡಬೇಕೋ ಎಂಬ ಆಯ್ಕೆ ಆಗಬೇಕು. ಚೆಂಡು ಪುಟಿದೇಳುವಂತಹ ವೇಗದ ಪಿಚ್ ಇರಲು, ಮೂರು ವೇಗದ ಬೌಲರುಗಳನ್ನು ಆಯ್ಕೆ ಮಾಡುವ ಬದಲು ಮೂರು ಸ್ಪಿನ್ನರುಗಳನ್ನು ಆಯ್ಕೆ ಮಾಡುವುದು ಅನಾಹುತಕ್ಕೆ ಆಹ್ವಾನವಿತ್ತಂತೆ. ಎದುರಾಳಿ ತಂಡದಲ್ಲಿ ಅತ್ಯುತ್ತಮ ಬೌಲರುಗಳು ಇದ್ದಾಗ ನಿಮ್ಮ ತಂಡದಲ್ಲಿ ಕಡಿಮೆ ಬ್ಯಾಟ್ಸ್‌ಮನ್ನುಗಳು ಇದ್ದರೆ ಸೋಲು ಕಟ್ಟಿಟ್ಟ ಬುತ್ತಿ. ಆಟಗಾರರು ತಮ್ಮ ದೇಶಕ್ಕಾಗಿ ಆಡುವ ಅವಕಾಶ ತಮಗೆ ಬಂದ ಪುಣ್ಯ ಎಂಬುದನ್ನು ಅರಿತುಕೊಳ್ಳಬೇಕು. ಅದಕ್ಕಿಂತ ಹೆಚ್ಚಿನ ಲಾಭ ಇಲ್ಲದಿದ್ದರೂ ಅವರು ತಮ್ಮ ಶಕ್ತಿಮೀರಿ ಉತ್ತಮವಾಗಿ ಆಡಲು ತಯಾರಿರಬೇಕು.

ನಮ್ಮ ಕಛೇರಿಗಳಲ್ಲಿ ಮತ್ತು ದೈನಂದಿನ ಬದುಕಿನಲ್ಲಿ ಇದು ಚಿರಪರಿಚಿತವಾದ ಅಂಶ. ನಾವುಗಳು ಸದಾ ಸ್ಪರ್ಧಿಸುತ್ತಿರುವುದು ಸಮಯದೊಂದಿಗೆ, ಸಹೋದ್ಯೋಗಿಗಳೊಂದಿಗೆ, ಇತರೆ ಕಂಪನಿಗಳೊಂದಿಗೆ. ನಮ್ಮ ಕೆಲಸಗಳು ಹೆಜ್ಜೆಹೆಜ್ಜೆಗೂ ನಮ್ಮನ್ನು ಯಶಸ್ಸಿನತ್ತ ಒಯ್ಯಬೇಕು. ಭದ್ರ ಬುನಾದಿ ಇಲ್ಲದೆ ಮಾಳಿಗೆಗಳನ್ನು ಕಟ್ಟಲು ಹೊರಡಬಾರದು. ಕಾರ್ಯ ಸಫಲವಾಗುವವರೆಗೂ ಛಲ ಬಿಡದೆ ಕೆಲಸ ಮಾಡುತ್ತ ಮುನ್ನಡೆಯಬೇಕು ಎಂಬುದನ್ನು ಇಲ್ಲಿ ಮತ್ತೊಮ್ಮೆ ಉಲ್ಲೇಖಿಸುವುದು ಅಪ್ರಸ್ತುತವಲ್ಲ. ಇದಕ್ಕೆ ಸಾಧನೆ, ಸಹನೆ ಮತ್ತು ಶಿಸ್ತು ಅಗತ್ಯ. ಕೊನೆಯ ಬಾಲ್, ಕೊನೆಯ ರನ್ ಹಾಗೂ ಕೊನೆಯ ವಿಕೆಟ್ ಇರುವ ತನಕ ಒಂದು ಪಂದ್ಯದ ಸೋಲು ಗೆಲವು ನಿರ್ಧರಿಸಲಾಗದು.

ಈ ರೀತಿ ನಾನು ಬರೆಯುತ್ತಲೇ ಇರಬಹುದು. ಆದರೆ ಇಷ್ಟಕ್ಕೆ ನಿಲ್ಲಿಸುತ್ತೇನೆ. ಒಂದು ಕೊನೆಯ ಮಾತು. “ಕ್ರಿಕೆಟ್ ಕೇವಲ ಒಂದು ಪಂದ್ಯ ಅಲ್ಲ. ಅದಕ್ಕಿಂತಲೂ ಮಿಗಿಲಾಗಿ ಅದು ಒಂದು ಜೀವನ ಶೈಲಿ. ಮೂವತ್ತೈದು ವರುಷಗಳ ಕಾಲ ಕ್ರಿಕೆಟ್ಟನ್ನೇ ಉಸಿರಾಡುತ್ತ ಬದುಕುತ್ತಿರುವ ನನ್ನ ಮಾತು ಖಂಡಿತ ತಪ್ಪಿರಲಾರದು.”

# ಮದರ್ಸ್ ಡೇ



ಕೇಸರಿ ರತ್ನರಾಜಯ್ಯ
ಹಾಸನ, ಕರ್ನಾಟಕ


*ಮಕ್ಕಳೆಲ್ಲಾ ಇರುವುದು ದೂರದಾದೇಶದಲಿ. ಮೊಮ್ಮಕ್ಕಳು ಸಿಗುವುದು ಫೋನು, ಫೋಟೊಗಳಲಿ. ಖಾಲಿಯಾದ ಗೂಡಲ್ಲಿ ತಮ್ಮ ಮಕ್ಕಳ ಹಾರೈಸಿ, ನನ್ನ ಅತ್ತೆಯವರು ಬರೆದ ಕವನ. - ಜಿತೇಂದ್ರ ಬೇತೂರು.*

ಇಂದು ಮದರ್ಸ್ ಡೇ ನಮಗೆಲ್ಲ
ಕಾದೆನು ಮಕ್ಕಳ ಫೋನಿಗಾಗಿ ದಿನವೆಲ್ಲ
‘ಹ್ಯಾಪ್ಪಿ ಮದರ್ಸ್ ಡೇ ಅಮ್ಮಾ’ ಧ್ವನಿ ಪ್ರತಿಧ್ವನಿಸಿ
ಮನ ತುಂಬಿತು ಹರುಷದಿಂದ
‘ಥ್ಯಾಂಕ್ಯು ಮಗಾ ಥ್ಯಾಂಕ್ಯು’
ಸಾವಿರಾರು ಮೈಲಿ ಸಾಗರದಾಚೆಯಿಂದ ಬಂದ ಹಾರೈಕೆ,
ಕ್ಷಣಕಾಲ ನಿಂತದ್ದು ಮನದಲ್ಲಿ ಆ ಚೇತರಿಕೆ.
ಮತ್ತೆ ಅದೇ ಖಿನ್ನತೆ ಅದೇ ನಿರೀಕ್ಷೆ,
ಹೊತ್ತಿದ್ದು, ಹೆತ್ತಿದ್ದು, ಬೆಳೆಸಿದ್ದು, ಓದು ಬರಹ ಕಲಿಸಿದ್ದು
ರೆಕ್ಕೆ ಬಲಿತು ಹಾರಿದ್ದು ದೂರದಾ ಊರಿಗೆ,
ಮತ್ತೆ ಮನವು ಖಾಲಿ, ಮನೆಯೂ ಖಾಲಿ.
ಎಲ್ಲಾದರೂ ಇರಿ, ನೀವು ಆನಂದವಾಗಿರಿ,
ನಿಮ್ಮ ಉನ್ನತಿಯೇ ನಮಗೆ ಚೇತನ,
ನಿಮ್ಮ ಸುಂದರ ಬದುಕೇ ನಮಗೆ ಹೂಗುಚ್ಛ ಬಹುಮಾನ,
ನೀವು ರೂಢಿಸಿಕೊಂಡ ಉನ್ನತ ಮೌಲ್ಯಗಳೇ ಮನಕೆ ಸಾಂತ್ವನ.

## ಪದಚಕ್ರ

ಪ್ರಭು ಮೂರ್ತಿ




ಖಾಲಿ ಇರುವ ಒಳಚಕ್ರದಲ್ಲಿ ಒಂದು ಅಕ್ಷರ ಹಾಕಿ ಅದರ ಸುತ್ತಲೂ ಪೈಗಳಲ್ಲಿರುವ ಪದ(ಪುಂಜ)ಗಳನ್ನು ಪೂರ್ತಿಗೊಳಿಸಿ. (ಉತ್ತರಗಳು ೭೬ನೇ ಪುಟದಲ್ಲಿ)



# ಮುಗಿಸದ ಕೆಲಸ


ಜ್ಯೋತಿ ಶೇಖರ್
ಮಿಲ್ಪಿಟಸ್, ಕ್ಯಾಲಿಫೋರ್ನಿಯ, *jyothi_shekar_AT_yahoo.com*


ಆಟ ಆಡಲು ಬಾ ಎಂದು ಕರೆದಾಗ,
ತಾಳು ಮರಿ, ಕಾಯಲು ಕಲಿ,
ಕಸವ ಬಳಿದು, ಮುಸುರೆ ತೊಳೆದು,
ಜೂಟಾಟವಾಡುವೆನೆಂದೆ ನಾನಾಗ.

ಕಥೆ ಹೇಳು ಬಾ ಎಂದು ಕಾಡಿಸಿದಾಗ,
ಇರು ಕಂದ, ತಾಳ್ಮೆ ಚಂದ,
ಅಡುಗೆ ಮುಗಿಸಿ, ಬಟ್ಟೆ ಮಡಿಸಿ,
ರಾಜನ ಕಥೆ ಹೇಳುವೆನೆಂದೆ ನಾನಾಗ.

ನಿದ್ದೆಯಂಟಿದ ಕಂಗಳಲ್ಲೇ ಕಾದು ಕುಳಿತೆ ನೀನು,
ಕರುಣೆ ತೋರಿ ಕಾಯಲಿಲ್ಲ ಕಾಲರಾಯ ತಾನು,
ಈಗ ಆಟಕ್ಕೆ ಕರೆಯಲು ಕೂಸಲ್ಲ ನೀನು,
ನನ್ನ ಕಥೆ ಕೇಳಲು ಇನ್ನೂ ಪುಟ್ಟ ಮಗುವೇನು?

ಕೈಬೀಸಿ ಕರೆದಿರಲಿ ನೂರು ಕೆಲಸ ಹತ್ತಿರ,
ಬದಿಗೊತ್ತಿ ನೋಡಬೇಕಿತ್ತು ಒಮ್ಮೆ ನಿನ್ನ ಚಿತ್ತಾರ,
ಬಾಗಿಲ ಬಳಿ ನಿಂತು ಮಾಡಿದಾಗ ರಚ್ಚೆ, ರಂಪ,
ಅಪ್ಪಿ ಕೊಡಬೇಕಿತ್ತು ಆ ಹಾಲುಗೆನ್ನೆಗೆ ಮುತ್ತಿನ ಸುಂಕ.

ಮಗನ ಬಾಲ್ಯ ನೆಲೆಸಿತ್ತು ಕ್ಷಣಕಾಲ ಮಾತ್ರ,
ಮರೆತೆ ಆಗ ಸವಿಯಲು ನನ್ನ ತಾಯ್ತನದ ಪಾತ್ರ,
ಈಗ ಗುಡ್ಡೆ ಕಟ್ಟಿ ಬಿದ್ದಿದೆ ಸಮಯ ನನ್ನ ಹತ್ತಿರ,
ನೆನಪಾಗಿ ಬಾಧಿಸಿದೆ ಮುಗಿಸದ ಕೆಲಸಗಳ ಆಗರ.

(ಸ್ಫೂರ್ತಿ - ಆಲಿಸ್ ಇ. ಚೇಸ್‌ರ ಕವಿತೆ ‘ಟು ಮೈ ಗ್ರೋನಪ್ ಸನ್’)

# ಗೆಳೆಯರ ಬಳಗವೂ ಅಚ್ಚರಿ ಕೂಟಗಳೂ

**ಆಶಾ ಬಾಲಕೃಷ್ಣ ಭಟ್**

**ಫ್ರೀಮಾಂಟ್, ಕ್ಯಾಲಿಫೋರ್ನಿಯ,** *asha_b_bhat_AT_yahoo.com*

*ಇದೇನಿದು ಈ ಅಮೇರಿಕೆಯಲ್ಲಿಪಾದರಕ್ಷೆಗಳನ್ನು ಎದುರಿಗಿಡುವುದು ಅನಿಷ್ಟವೆಂದು ತಿಳಿಯುತ್ತಾರೋ? ಅಲ್ಲದೆ ಬೇರೆ ಯಾರದ್ದೂ ಹೊರಗಡೆ ಕಾಣಿಸುತ್ತಿಲ್ಲ? ಎಂದು ಯೋಚಿಸುತ್ತ ಒಳಗೆ ಬರುತ್ತಿದ್ದಂತೆ ನೆರೆದಿದ್ದ ಜನರ ಸದ್ದುಗದ್ದಲವೆಲ್ಲ ನಿಂತು ಮೌನ ಆವರಿಸಿತು.*

ದಶಕದ ಕೆಳಗೆ ಈಶು ಅರ್ಥಾತ್ ಪರ್ವತೇಶ ತನ್ನ ಸಂಸಾರದೊಂದಿಗೆ ಬೇ ಏರಿಯಾಕ್ಕೆ ಬಂದಿಳಿದಾಗ ಭಾರತದಲ್ಲಿ ಅವನ ಗೆಳೆಯರ ಬಳಗದಲ್ಲಿ ಅಚ್ಚರಿ ತರಿಸುವ ಸಮಾರಂಭಗಳ ಹಾವಳಿ ಇನ್ನೂ ಆರಂಭವಾಗಿರಲಿಲ್ಲ. ಇಲ್ಲಿ ಬಂದ ಹೊಸದರಲ್ಲಿ ಹಳೆಯ ಸ್ನೇಹಿತನೊಬ್ಬ ತನ್ನ ಸ್ನೇಹಿತನ ಹೆಂಡತಿ 'ಮಗುವಿಗೆ ತುಂತುರು ಸ್ನಾನ (ಬೇಬಿ ಶಾವರ್)' ಎಂಬ ಒಂದು ಅಚ್ಚರಿ ತರಿಸುವ (ಸರ್ಪ್ರೈಸ್) ಕಾರ್ಯಕ್ರಮವೊಂದನ್ನು ನಡೆಸುತ್ತಿರುವುದಾಗಿ ಹೇಳಿದ. ನಿಜವಾಗಿಯೂ ಆಶ್ಚರ್ಯಗೊಂಡ ಈಶು  ವಿವರ ಕೇಳಿದಾಗ ಅವರ ಗೆಳೆಯ ಕಪ್ಪಣ್ಣನ ಅರ್ಧಾಂಗಿ ಬಸುರಿಯೆಂದೂ, ಅದಕ್ಕಾಗಿ ಅವರಿಗೆ ಪೂರ್ವಭಾವಿಕವಾಗಿ ತಿಳಿಸದೆ ಈ ಕಾರ್ಯಕ್ರಮ ಮಾಡುವುದೆಂದೂ ತಿಳಿಯಿತು. ಆದರೂ ಈಶುವ ಕುತೂಹಲ ತಣಿಯಲಿಲ್ಲ. ಮಗು ಇನ್ನೂ ಹುಟ್ಟಿರುವುದಿಲ್ಲ, ಅದು ಹೇಗೆ ಸ್ನಾನ ಮಾಡಿಸುತ್ತಾರೋ? ಅಲ್ಲಾ ಗೆಳತಿಯರೆಲ್ಲಾ ಸೇರಿ ಅವಳಿಗೇ ನೀರೆರೆಚುತ್ತಾರೋ? ಕೇಳಲು ಸಂಕೋಚಗೊಂಡು, ಹೋದಾಗ ತಿಳಿಯುವುದಲ್ಲ ಎಂದು ಸುಮ್ಮನಾದ. ನಮ್ಮಲ್ಲಿ ಅರೋಗ್ಯ ಕೆಟ್ಟಾಗ ಹೋಮ ಹವನ ಮಾಡಿಸಿ ಅದು ಒಳಗಿರುವ ರೋಗಕ್ಕೆ ತಟ್ಟಿ ಅದು ವಾಸಿಯಾಗುತ್ತದೆಂಬ ನಂಬಿಕೆಯಿಲ್ಲವೇ? ಹಾಗೆ ಒಳಗಿರುವ ಮಗುವಿಗೂ ಆಗಬಹುದೆಂಬ ನಂಬಿಕೆಯಿಂದ ಮಾಡುತ್ತಾರೇನೋ ಎಂದು ಅಂದುಕೊಂಡ. ಆವಾಗ ಈಶುವ ಹೆಂಡತಿ ಪಾರಿಜಾತ ಮಗನೊಂದಿಗೆ ಮನೆಯ ಅಂಗಳದಲ್ಲಿದ್ದುದರಿಂದ ಅವಳಿಗೆ ಈ ವಿಷಯ ಗೊತ್ತಾಗಲಿಲ್ಲ. ಹೆಂಡತಿಯೊಡನೆ ತನ್ನ ಸ್ನೇಹಿತ ಊಟಕ್ಕೆ ಕರೆದಿದ್ದಾನೆಂದಷ್ಟೇ ಹೇಳಿದ.

ಎರಡು ದಿನ ಕಳೆಯಲಾಗಿ ಈಶುವಿಗೆ ಆಹ್ವಾನ ಕೊಟ್ಟ ಹೇಮಂತನ ಹೆಂಡತಿ ಧೀಮಂತಿ ಫೋನಲ್ಲಿ ಕರೆದು ಮುಂದಿನ ಭಾನುವಾರದ ಪಾರ್ಟಿಗೆ ಏಳು ಗಂಟೆಯ ಮುಂಚೆ ತನ್ನ ಮನೆಗೆ ಬರಬೇಕೆಂದೂ ಬರುವಾಗ ಒಂದೈವತ್ತು ಕಾಗದದ ಊಟದ ತಟ್ಟೆಗಳನ್ನೂ  ತರಬಹುದೇ ಎಂದೂ ಕೇಳಿದಳು. ಅವಳೊಡನೆ ಆಯಿತು ಎಂದು ಹೇಳಿದರೂ "ಯಲಾ ಈ ಅಮೇರಿಕದಲ್ಲಿ ಮನೆಗೆ ಅತಿಥಿಗಳು ಬರುವುದಕ್ಕೆ ಸಮಯ ನಿಗದಿಸಿರುತ್ತಾರೇನೋ!" ಎಂದು ಅಂದುಕೊಡಳು. ಊಟದ ತಟ್ಟೆ ಯಾಕೆ  ಹೇಳಿದ್ದರೆಂದು ಮತ್ತೂ ಅರ್ಥವಾಗಲೇ ಇಲ್ಲ.  ಬಹುಶಃ ಅತಿಥಿಗಳು ಬರುವಾಗ ತರುವ  ಉಡುಗೊರೆಯಾಗಿ ಅದು ಇದು ಏನೋ ತಂದು ಮನೆಯಲ್ಲಿ ಇಡಲು ಜಾಗವಿಲ್ಲ ಎಂದಾಗಿಯೋ ಅಥವಾ ಇಷ್ಟವಾಗದೆಯೋ ಪೇಚಾಟವಾಗುವುದರ ಬದಲು ತಮಗೆ ಬೇಕಾದ ವಸ್ತುಗಳನ್ನು ಮನೆಯವರೇ ಹೇಳಿ ತರಿಸಿಕೊಳ್ಳುತ್ತಾರೇನೋ ಎಂದು ಯೋಚಿಸಿದಳು ಪಾರಿಜಾತ.


ಅಂತೂ ಭಾನುವಾರ ಬಂದಿತು! ಈಶುವಿಗೆ ಡ್ರೈವಿಂಗ್ ಬಂದರೂ ನಿಶ್ಚಿತ ಜಾಗವನ್ನು ಸೇರಲು ಸುಮಾರು 'U' ತಿರುವುಗಳನ್ನು ತೆಗೆದುಕೊಳ್ಳಬೇಕಾಗುತ್ತಿತ್ತು.  ರಸ್ತೆಗಳಲ್ಲಿ ತಪ್ಪಿಸಿಕೊಳ್ಳುವುದು ಸಾಮಾನ್ಯವಾಗಿತ್ತು.  ಆಗೆಲ್ಲಾ ಅವನ ಹೆಂಡತಿ "ಏನ್  ಮಾಡ್ತಿದ್ದೀಯಾ, ಅಲ್ಲೇ ಹೋಯಿತು ಬೋರ್ಡು" ಎಂದು  ಉದ್ಗಾರ ತೆಗೆಯುತ್ತಿದ್ದಳು. ಈಶುಗೋ ಕೈಕಾಲು ನಡುಗಿದಂತೆ ಆಗುತ್ತಿತ್ತು. ಹೀಗಾಗಿ ಈ 'ಸಮಯ ನಿಗದಿತ' ಪಾರ್ಟಿಗೆ ಹೇಗಪ್ಪಾ ಸಮಯಪಾಲನೆ ಮಾಡುವುದೆಂದು ಚಿಂತಾಕ್ರಾಂತನಾದ. ಏನೇ ಆಗಲಿ ಸ್ವಲ್ಪ ಮೊದಲೇ ಹೊರಟರಾಯಿತೆಂದುಕೊಂಡ. ದಿನವಿಡೀ ಕುಳಿತು ನಕಾಶೆ ನೋಡಿ (ನೋಡುವುದೇನು ಬಾಯಿಪಾಠವೇ ಆಗಿತ್ತು) ರಸ್ತೆಗಳ ಹೆಸರುಗಳೆಲ್ಲ ತಿಳಿದುಕೊಂಡ. ಈ ಸಲ ಖಂಡಿತ ತಪ್ಪುವ ಪ್ರಮೇಯವೇ ಬರಲಾರದೆಂದು ಅಂದುಕೊಂಡ. ಆದರೆ ಮಗನನ್ನು ಈಶುವೇ ಹೊರಡಿಸಿದ್ದರೂ ಸಹ ಅವನ ಅಲಂಕಾರಪ್ರಿಯೆ ಹೆಂಡತಿಗೆ ಸರಿಯಾದ ವಸ್ತ್ರ ಹಾಗೂ ಒಡವೆಗಳ ಹೊಂದಾಣಿಕೆ (ಮ್ಯಾಚಿಂಗ್) ಸರಿಬರದೆ ಎಲ್ಲವನ್ನೂ ತೆಗೆದು ನೋಡುವಷ್ಟರಲ್ಲಿ ತಡವಾಗಿಬಿಟ್ಟಿತು. ಅಲ್ಲದೆ ಅಮೇರಿಕಾದ ಫಾಸ್ಟ್ ಫೂಡ್‌ಗಳ ರುಚಿ ನೋಡಿ ಅಲ್ಪ ಸಮಯದಲ್ಲೇ ಆಕೆಯ ತೂಕ ಬಹುವಾಗಿ ಹೆಚ್ಚಾದದ್ದರಿಂದ ಕೆಲವು ಬಟ್ಟೆಗಳು ಚಿಕ್ಕದಾಗಿ (ಬಟ್ಟೆ ಇದ್ದ ಹಾಗೆಯೇ ಇದ್ದರೂ ಹೇಳುವುದು ಚಿಕ್ಕದಾಯಿತೆಂದು) ಹಾಕಲು ಬರುತ್ತಿರಲಿಲ್ಲ. ಎಲ್ಲ ತಡಕಾಡಿ ಹುಡುಕಾಡಿ ಕೊಠಡಿಯೊಳಗೆ ಬಟ್ಟೆಯ ದೊಡ್ಡ ಗುಡ್ಡೆಯೇ ನಿರ್ಮಾಣವಾಗಿತ್ತು. ಈಶು ಆಗಾಗ ಸಮಯ ಜ್ಞಾಪಿಸುತ್ತಿದ್ದರೂ ಫಲ ಕೊಡದೆ ಕೊನೆಯಲ್ಲಿ ಆಕೆ ಕೋಪಗೊಂಡು "ಈಶೂ! ಒಂದು ಸ್ವಲ್ಪ ಸುಮ್ಮನಿರ್ತಿಯಾ? ಗಂಡಸರಿಗೆ ಯಾವಾಗಲೂ ಹೆಂಗಸರ ಕಷ್ಟ ಅರ್ಥವಾಗುವುದೇ ಇಲ್ಲ" ಎಂದು ಉಲಿದಳು. ಆದದ್ದಾಯಿತೆಂದು ತೆಪ್ಪಗಾದ ಈಶು. ಹಾಗಾಗಿ ಮುಂಚೆ ಹೊರಡುವ ಅವನ ಕನಸು ನನಸಾಗಲೇ ಇಲ್ಲ. ಅಂತು ಹೊರಟು ವಿಳಾಸ ಸರಿಯಿದೆಯೆಂದು ಒಂದು ಮನೆಯ ಬಳಿ  ಕಾರು ನಿಲ್ಲಿಸಿ ಇಳಿದರು. ಅಷ್ಟರಲ್ಲಿ ಇಬ್ಬರು(ಗಂಡ ಹೆಂಡಿರು) ದುಡುದುಡು ಓಡಿ ಬಂದು ಆ ಮನೆಯ ಒಳಗೆ ಹೊಕ್ಕರು. ಸಮಯ ಹತ್ತಿರ ಹತ್ತಿರ ಏಳು ಗಂಟೆಯಾಗುತ್ತ ಬಂದಿತ್ತು. ಇವರೂ ಆ ಮನೆಯೊಳಗೆ ಹೋಗಲಾಗಿ ಯಾರೋ ಬಂದು ಇವರ ಪಾದರಕ್ಷೆಗಳನ್ನು ತೆಗೆದುಕೊಂಡು ಒಳಗೆ ಹೋದರು. ಪಾರಿಜಾತಳಿಗೆ ಭಾರೀ ಚಿಂತೆಯಾಯಿತು. ಇದೇನಿದು ಈ ಅಮೇರಿಕೆಯಲ್ಲಿ ಪಾದರಕ್ಷೆಗಳನ್ನು ಎದುರಿಗಿಡುವುದು ಅನಿಷ್ಟವೆಂದು ತಿಳಿಯುತ್ತಾರೋ? ಅಲ್ಲದೆ ಬೇರೆ ಯಾರದ್ದೂ ಹೊರಗಡೆ ಕಾಣಿಸುತ್ತಿಲ್ಲ? ಎಂದು ಯೋಚಿಸುತ್ತ ಒಳಗೆ ಬರುತ್ತಿದ್ದಂತೆ ನೆರೆದಿದ್ದ ಜನರ ಸದ್ದುಗದ್ದಲವೆಲ್ಲ ನಿಂತು ಮೌನ ಆವರಿಸಿತು. ಪಾರಿಜಾತಳಿಗೆ ಇನ್ನೂ ದಿಗಿಲಾಯಿತು. "ಇದೇನು ತಮ್ಮನ್ನು ನೋಡಿದ ಕೂಡಲೇ ದೆವ್ವ ನೋಡಿದಂತೆ ಸುಮ್ಮನಾಗಿಬಿಟ್ಟರು ಜನ. ನಾವು ಹೊಸಬರಾಗಿರಬಹುದು. ಅದರೆ ತಾವೂ ಮನುಷ್ಯರಲ್ಲವೇ? ಈ ಜನರ ಪರಿಯೇ ಅರ್ಥವಾಗುವುದಿಲ್ಲ" ಎಂದು ಅಂದುಕೊಳ್ಳುತ್ತಿದ್ದಂತೆ ಧೀಮಂತಿ ಬಂದು ಪಿಸುದನಿಯಲ್ಲಿ ಮಾತನಾಡಿಸಿ ಊಟದ ತಟ್ಟೆಗಳು ಎಲ್ಲೆಂದು ಕೇಳಿದಳು. ಪಾರಿಜಾತ ತಾನು ಉಡುಗೊರೆಯ ಚೀಲದಲ್ಲಿ ಹಾಕಿ ತಂದ ಊಟದ ತಟ್ಟೆಗಳನ್ನು ಕೊಟ್ಟಾಗ ಅಚ್ಚರಿಪಡುವ ಸರದಿ ಧೀಮಂತಿಯದಾಯ್ತು. ನಗು ಬಂದರೂ ಕಟ್ಟಿಕೊಂಡು ಪಾರಿಜಾತಳ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡಳು. ಎಲ್ಲರೂ ಮೌನವಾಗಿ ಕೂತಿರಲಾಗಿ  ಈಶುವಿನ ಮಗ "ಅಪ್ಪಾ, ಯಾಕೆ ಇಲ್ಲಿ ಯಾರೂ ಮಾತಾಡುವುದಿಲ್ಲ? ಎಲ್ಲರೂ ಸಿಟ್ಟು ಮಾಡಿಕೊಂಡಿದ್ದಾರಾ?" ಎಂದು ದೊಡ್ಡದಾಗಿ ಕೇಳಿದಾಗ ಎಲ್ಲರೂ ಗೊಳ್ಳೆಂದು ನಕ್ಕರು. ಒಬ್ಬರು "ಶ್ " ಎಂದು ಸನ್ನೆ ಮಾಡಿ ಕಪ್ಪಣ್ಣ ಬರುತ್ತಿದ್ದಾನೆಂದು ಹೇಳಿದರು. ಅಷ್ಟರಲ್ಲಿ ದೀಪ ಆರಿಸಲಾಯಿತು. ಕರೆಗಂಟೆ ಸದ್ದಾಗುತ್ತಿದ್ದಂತೆ ಬಾಗಿಲು ತೆಗೆದು ಎಲ್ಲರೂ "ಸರ್ಪ್ರೈಸ್" ಎಂದು ಕೂಗಿದಾಗ ಈಶುವ ಮಗ ಹೆದರಿ ದೊಡ್ಡ ದನಿ ತೆಗೆದು ಅಳಲಾರಂಭಿಸಿದ. ಭಯಭೀತನಾದ ಅವನನ್ನು ಸಮಾಧಾನಪಡಿಸುವುದೇ ದೊಡ್ಡ ಸಾಹಸವಾಯಿತು. ಈಗ ಪಾರಿಜಾತಳಿಗೆ ಸ್ವಲ್ಪ ಸ್ವಲ್ಪವೇ ಕಾರ್ಯಕ್ರಮದ ಪರಿಚಯವಾಗತೊಡಗಿತು. ಅಲ್ಲದೆ ಹೇಮಂತ ಹೇಳಿದ ಸರ್ಪೈಸ್ ಪಾರ್ಟಿ ಈಶುವಿಗೆ ಅರ್ಥವಾಗಿ ಮಗನನ್ನು ಸುಮ್ಮನಿರಿಸುವಾಗ ಪಾರಿಯೊಡನೆ ಒಂದೆರಡು ಮಾತು ಹೇಳಿದ್ದ.

ಕಪ್ಪಣ್ಣನ ಹೆಂಡತಿ ಕಂಪನ ಸರ್ವಾಲಂಕಾರಭೂಷಿತೆಯಾಗಿ ಬಂದಿದ್ದಳು. ಅವಳು ಹಾಗೆ ಬಂದದ್ದರಿಂದ ಸರ್ಪ್ರೈಸಿನ ಗುಟ್ಟು ರಟ್ಟಾಗಿರಬಹುದೆಂದು ಕೆಲವರ ತರ್ಕವಾಯಿತು. ಆದರೆ ಅವಳು ಮಾತ್ರ ಬೆಪ್ಪು ಹಿಡಿದವಳಂತೆ ನಿಂತಿದ್ದಳು. ಗಂಡನನ್ನು ದುರುಗುಟ್ಟಿ ನೋಡುತ್ತ, "ಇದಕ್ಕೇನಾ ನಿಮ್ಮ ಗೆಳೆಯ ಕಿಣಿ ಕರೆದಿದ್ದು?"ಎಂದು ಕೇಳಲಾಗಿ ಕಪ್ಪಣ್ಣ ತನ್ನ ಹೆಂಡತಿಯನ್ನು ಅಲಂಕಾರಭೂಷಿತೆಯಾಗಿ ಕರೆದುಕೊಂಡು ಬಂದ ಸಾಹಸವನ್ನು ಹೇಳತೊಡಗಿದ. ಕಂಪನ ಬಹು ತೀಕ್ಷ್ಣಮತಿ. ಅಷ್ಟು ಸುಲಭದಲ್ಲಿ ಏನನ್ನೂ ನಂಬುತ್ತಿರಲಿಲ್ಲ. ಸಾಲದಿದ್ದುದಕ್ಕೆ ತನಗೆ ಸರ್ಪ್ರೈಸ್ ಬೇಬಿ ಶಾವರ್ ಮಾಡಲು ಯಾರಿಂದಲೂ ಸಾಧ್ಯವಿಲ್ಲ, ಏಕೆಂದರೆ ತಾನು ಎಲ್ಲಿಗೂ ಬರುವುದಿಲ್ಲವೆಂದು ಖಡಾಖಂಡಿತವಾಗಿ ಹೇಳಿಬಿಟ್ಟಿದ್ದಳು. ಅಂತಹದರಲ್ಲಿ ಇಷ್ಟು ತಯಾರಾಗಿಸಿ ಇವಳನ್ನು ಕರೆತರಬೇಕಾದರೆ ಕಪ್ಪಣ್ಣ ಇನ್ನೆಂತಹ ಚುರುಕುಮತಿಯಿರಬೇಕೆಂದು ನೀವೇ ಊಹಿಸಿಕೊಳ್ಳಿ!

ಒಂದು ದಿನ ಆಫೀಸಿನಿಂದ ಬಂದ ಕಪ್ಪಣ್ಣ ಕಂಪನಳೊಡನೆ "ಕಂಪಿ, ನನ್ನ ಚಡ್ಡಿ ದೋಸ್ತಿ ಕಿಣಿ ಬಂದಿದ್ದಾನೆ ಕಣೆ ಬೇ ಏರಿಯಾಕ್ಕೆ. ನಂಬರ್ ಹೇಗೋ ಪತ್ತೆ ಹಚ್ಚಿ ಕಾಲ್ ಮಾಡಿದ್ದಾನೆ." ಎಂದ. ಎರಡು ದಿನ ಕಳೆಯಲಾಗಿ "ಕಿಣಿಯದೊಂದು ಈ-ಮೈಲ್ ಬಂದಿದೆ. ಮುಂದಿನ ಭಾನುವಾರ ಅವನ ಮನೆಗೆ ಕರೆದಿದ್ದಾನೆ" ಎಂದ. ಎಲ್ಲಿಗೂ ಹೋಗದೆ ಬೇಜಾರು ಬಂದದ್ದರಿಂದ ಅವರ ಮನೆಯಲ್ಲಂತೂ ಬೇಬಿ ಶವರ್ ಇಟ್ಟುಕೊಳ್ಳಲಾರರು ಎಂದುಕೊಂಡು ಕಂಪಿ ಹೋದರಾಯಿತೆಂದುಕೊಂಡಳು. ಮತ್ತೆರಡು ದಿನ ಕಳೆಯಲಾಗಿ ಕಂಪನಳಿಗೆ ಕಿಣಿಯ ಹೆಂಡತಿಯದೊಂದು ಮೈಲ್ ಬಂದಿತು. ಇವರನ್ನು ಕರೆದ ದಿವಸ ಅವಳ ಹವ್ಯಾಸಿ ಛಾಯಾಗ್ರಾಹಕಿ ಗೆಳತಿಯೊಬ್ಬಳು ಬರುವಳೆಂದೂ ಅಲಂಕರಿಸಿಕೊಂಡು ನಾವೆಲ್ಲಾ ಒಟ್ಟಾಗಿ ಪಿಕ್ಚರ್ ತೆಗೆಸಿಕೊಳ್ಳಬಹುದೆಂದೂ ಬರೆದಿದ್ದಳು. ಕಂಪನಳಿಗೂ ಸಂತೋಷವಾಯಿತು. ಆ ವಾರವೇ ಕಿಣಿಯ ಮನೆಯ ಹತ್ತಿರವೇ ವಾಸಿಸುತ್ತಿದ್ದ ಕಂಪನಳ ಊರಿನ ಗೆಳತಿ ಧೀಮಂತಿ ಭಾರತಕ್ಕೆ ಹೋಗುವವಳಿದ್ದಳು. ಅವಳೊಡನೆ  ಕಂಪನಳ ಅಮ್ಮನ ಮನೆಗೆ ಏನೋ ಕಳುಹಿಸಲೂ ಅವತ್ತೇ ಹೋಗಬಹುದೆಂದು ತೀರ್ಮಾನವಾಯಿತು. ಇದೇ ಕಂಪನಳ ಈ ಪಯಣಕ್ಕೆ ಕಾರಣವಾಯಿತು. ಧೀಮಂತಿಯ ಮನೆಗೆ ಹೊಕ್ಕ ತಕ್ಷಣವೇ ಕಂಪನಳಿಗೆ ತಾನು ಮೋಸಹೋದುದು ಅರಿವಾಗಿ ಒಮ್ಮೆ ಎದೆ ಡವಡವಗುಟ್ಟಿದರೂ ತನಗೆ ಯಶಸ್ವಿಯಾಗಿ ಸರ್ಪ್ರೈಸ್ ಬೇಬಿ ಶಾವರ್ ಮಾಡಿದ ಗಂಡನ ಹಾಗೂ ಸ್ನೇಹಿತೆಯರ ಚಾಕಚಕ್ಯತೆಗೆ ಅಭಿಮಾನ ಉಂಟಾಯಿತು. ಪಾರಿ ಮತ್ತು ಈಶು ಇಬ್ಬರಿಗೂ ಕತೆ ಕೇಳಿ ನಗು ತಡೆಯಲಾಗಲಿಲ್ಲ. ಎಲ್ಲರೂ ಕೂಡಿ ಮಾಡುವ ಈ ಕಾರ್ಯಕ್ರಮಕ್ಕೆ ಊಟದ ತಟ್ಟೆಗಳನ್ನು ಉಡುಗೊರೆ ಕೊಡುವಂತೆ ತಂದಿದ್ದನ್ನು ನೆನೆದು ಮತ್ತಿಷ್ಟು ನಗುಬಂತು.

ಮನೆಗೆ ಬಂದು ಮಲಗಿಕೊಂಡಾಗ ರಾತ್ರಿಯೆಲ್ಲ ಅಳದೆ ಮಲಗುತ್ತಿದ್ದ ಈಶುವಿನ ಮಗ ಕಿಟಾರನೆ

ಕಿರುಚಿ ಅಳಲಾರಂಭಿಸಿದ. ಸ್ವಲ್ಪ ದಿವಸದಲ್ಲಿ ಇನ್ನೊಂದು 'ಮಗುವಿನ ತುಂತುರು ಸ್ನಾನ'ದ ಆಹ್ವಾನ ಬಂದಿತು. ಅಲ್ಲಿಗೆ ಹೋದಾಗಲೂ ಈಶುವ ಮಗ ತುಂಬಾ ಅತ್ತುಬಿಟ್ಟ. ಹೀಗಾದರೆ ನಮಗೆ ಬೇ ಏರಿಯಾದಲ್ಲಿ ನಡೆಯುವ ಯಾವ ಅಚ್ಚರಿಯ ಕಾರ್ಯಕ್ರಮಗಳಿಗೂ ಹೋಗಲಾಗುವುದಿಲ್ಲ ಎಂದು ಚಿಂತೆಗೀಡಾದ ಈಶು ಮತ್ತು ಪಾರಿಯರು ಮಗನಿಗೆ ತರಬೇತಿ ಕೊಡುವ ಸಲುವಾಗಿ "ಸರ್ಪ್ರೈಸ್....ಸರ್ಪ್ರೈಸ್" ಎಂದು ದಿನಕ್ಕೆ ಹತ್ತಾರು ಬಾರಿ ಸಂಜೆಯ ಹೊತ್ತಾದರೆ ದೀಪವಾರಿಸಿ ಕೂಗಲಾರಂಭಿಸಿದರು. ಅಂತೂ ಈಶುವ ಮಗನಿಗೆ ಅಭ್ಯಾಸವಾಯಿತು. ಮಗನಿಗೆ ತರಬೇತಿ ನೀಡಿದ್ದು ಅವರಿಗೆ ದಂಡವಾಗಿ ಕಾಣಲಿಲ್ಲ. ಯಾಕೆಂದರೆ ಗೆಳೆಯರ ಬಳಗ ದೊಡ್ಡದಾಗುತ್ತಿದ್ದಂತೆ ಪ್ರತೀ ವಾರಾಂತ್ಯಗಳಲ್ಲೂ ಇಂತಹ ಕಾರ್ಯಕ್ರಮಗಳು ಸಿಕ್ಕಲಾರಂಭಿಸಿದವು. ಯಾರದೋ ಹುಟ್ಟುಹಬ್ಬದ್ದೋ (ದೊಡ್ಡವರದ್ದು ಅಂದರೆ ಅವರು ಮೂವತ್ತಕ್ಕೋ, ನಲವತ್ತಕ್ಕೋ ತಿರುಗಿದಾಗ) ಇಲ್ಲಾ ಯಾರದೋ ಮದುವೆಯ ಹತ್ತನೆಯದೋ ಹದಿನೈದನೆಯದೋ ವಾರ್ಷಿಕೋತ್ಸವಗಳೋ ಅಥವಾ ವಿದಾಯಕೂಟಗಳೋ ಏನಾದರೂ ಒಂದು ಇದ್ದೇ ಇರುತ್ತಿದ್ದವು. ಈಶುವಿನ ಮಗನಿಗೂ, ಪಾರಿಜಾತಳಿಗೂ ಇವುಗಳಲ್ಲಿ ಎಲ್ಲಿಲ್ಲದ ಉತ್ಸಾಹ ಮೂಡಿತ್ತು. ಅವಳು ಇದರಲ್ಲಿ ತಜ್ಞತೆ ಹೊಂದಿ ಕೆಲವು ಅಚ್ಚರಿ ತರಿಸುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನೆರವೇರಿಸಿದ್ದಳು.



ಕೆಲವೊಂದು ಇಂತಹ ಕೂಟಗಳಲ್ಲಿ ಗೊತ್ತಾದರೂ ಅಚ್ಚರಿಯಾದಂತೆ ನಟಿಸುವವರೂ ಇದ್ದಾರೆ. ಕಷ್ಟಪಟ್ಟು ಮಾಡಿದವರಿಗೆ ಬೇಸರ ಪಡಿಸುವುದು ಯಾಕೆ ಎಂದು. ಒಂದು ಸಲ ಗೆಳತಿಯರೆಲ್ಲಾ ಸೇರಿ ಸುಲಗ್ನಳಿಗೆ 'ಬೇಬಿ ಶಾವರ್' ಮಾಡುವುದೆಂದು ತೀರ್ಮಾನಿಸಿದರು. ಅವಳ ಗಂಡನೊಡನೆ ಹೇಳಿ ಅವಳಿಗೆ ಗೊತ್ತಾಗದಂತೆ ಆ ದಿನ ಉಡಲು ಒಳ್ಳೆಯ ಸೀರೆ ಮತ್ತು ರವಕೆ ತರಲು ಹೇಳಿದರು. ಅವನೋ ಎಂದೂ ಹೆಂಡತಿಯ ಉಡುಗೆಯ ಬಗ್ಗೆ ಚಿಂತಿಸಿದವನೇ ಅಲ್ಲ. ಅಲ್ಲದೆ ಅವಳು ಎಲ್ಲಿ ಇಡುತ್ತಿದ್ದಳೆಂದೂ ಗೊತ್ತಿರಲಿಲ್ಲ. ಹಾಗಾಗಿ ಅವನಿಗೆ ಭಾರೀ ಪೇಚಾಟಕ್ಕಿಟ್ಟುಕೊಂಡಿತು. ಉಪಾಯ ಮಾಡಿ ಅವಳನ್ನೇ ಕೇಳಿಬಿಡುವ ಎಂದು ಯೋಚಿಸಿದ. ಒಂದು ವಾರಾಂತ್ಯದ ಮಧ್ಯಾಹ್ನ "ಸುಲೀ, ನಾನು ಇದುವರೆಗೂ ನಿನ್ನೊಡನೆ ಎಷ್ಟು ಸೀರೆ ಇದೆ ಎಂದೇ ನೋಡಿಲ್ಲ. ಒಮ್ಮೆ ತೋರಿಸ್ತೀಯಾ" ಎಂದು ಕೇಳಿದ. ಸುಲಗ್ನಳಿಗೆ ಮೊದಲು ಅತೀ ಆನಂದವಾಯಿತು. ತಾನು ಬಸುರಿಯೆಂದು ಗಂಡ ಒಳ್ಳೆಯ ಮಾತಾಡುತ್ತಾನೆಂದುಕೊಂಡಳು. ಆದರೂ ಏಳನೇ ತಿಂಗಳವರೆಗೂ ಏನೂ ಸುದ್ದಿಯೇ ಇಲ್ಲದೆ ಈಗ ಒಮ್ಮೆಲೇ ತನ್ನನ್ನು ವಿಚಾರಿಸಿಕೊಳ್ಳಲು ಏನೋ ಕಾರಣವಿರಬೇಕೆಂದುಕೊಂಡಳು. ಆವಾಗ ಬಡಿಯಿತು 'ಬೇಬಿ ಶಾವರಿನ' ವಾಸನೆ. ಕೂಡಲೇ ನಾಡಿದ್ದು ಸುಮಧುರ ಎಂಬ ಗೆಳತಿ ಈಜುಕೊಳದ ಕೂಟ (ಪೂಲ್ ಪಾರ್ಟಿ) ಎಂದು ತಮ್ಮನ್ನು ಕರೆದಿದ್ದು ಇದಕ್ಕೇ ಎಂದು ಊಹಿಸಿದಳು. ತಾನು ಬರುವುದಿಲ್ಲವೆಂದರೂ, "ನೀನೇನು ಈಜುವುದು ಬೇಡ ಬಿಡು. ಸುಮ್ಮನೆ ಮಾತಾಡುವುದಕ್ಕಾದರೂ ಆಗುತ್ತದೆ" ಎಂದು ಹೇಳಿದ್ದಳು ಸುಮಧುರ. ಸುಲಗ್ನ ನೇರವಾಗಿ ಗಂಡನನ್ನು ಕೇಳಿದಳು. ಹೆಂಡತಿಯಿಂದ ಮುಚ್ಚಿಡಲಾರದ ಆತ ಹೌದು ಎಂದುಬಿಟ್ಟ, ಅಲ್ಲದೆ ತಾನು ಹೇಳಿದ್ದೀನಿ ಎಂದು ಹೇಳಬೇಡವೆಂದ. ಮತ್ತೆ ಇಬ್ಬರೂ ಅಚ್ಚರಿಯಾದಂತೆ ನಾಟಕ ಮಾಡಿ ಕೊನೆಯಲ್ಲಿ ನಿಜ ಹೇಳಿದಾಗ ಅಚ್ಚರಿ ಪಡುವ ಸರದಿ ಗೆಳೆಯರ ಬಳಗದ್ದಾಗಿತ್ತು.

ಹೀಗೆಯೇ ನಾಲ್ಕೈದು ವರ್ಷಗಳು ಕಳೆಯಲು ಈಶುವಿನ ಕಂಪನಿಯನ್ನು ಭಾರತಕ್ಕೆ ಸ್ಥಳಾಂತರಿಸಲು ನಿರ್ಧರಿಸಿದರು. ಆದ್ದರಿಂದ ಈಶು-ಪಾರಿಯರು ಊರಿಗೆ ಹಿಂದಿರುಗುವುದೆಂದು ತೀರ್ಮಾನಿಸಿದರು. ಇನ್ನೇನು ಹೊರಡಲು ಇನ್ನೊಂದು ತಿಂಗಳಿದೆ ಎನ್ನುವಾಗ ಅವರ ಗೆಳೆಯರ ಬಳಗ ಅವರಿಗೊಂದು ಅಚ್ಚರಿ ವಿದಾಯಕೂಟ ಮಾಡಲು ಯೋಚಿಸಿದರು. ಗೆಳೆಯರ ಬಳಗದಲ್ಲಿ ಒಬ್ಬ ತನ್ನ ಹೆಂಡತಿಯ ಮೂವತ್ತನೆಯ ಹುಟ್ಟುಹಬ್ಬವೆಂದೂ, ತಾನೇ ಅವಳಿಗೆ ಅಚ್ಚರಿ ಪಾರ್ಟಿ ಮಾಡುತ್ತೇನೆಂದೂ, ಬರಬೇಕೆಂದೂ ಈಶು ದಂಪತಿಗಳಿಗೆ ಆಹ್ವಾನ ಕೊಟ್ಟ. ಸ್ವಲ್ಪವೂ ಸಂಶಯ ಬರಲಿಲ್ಲ ಅವರಿಗೆ. ತನ್ನ ಹೆಂಡತಿ ಪ್ರತೀ ಆಭರಣಗಳ ಪ್ರದರ್ಶನಕ್ಕೆ ಹೋಗುತ್ತಾಳೆಂದೂ ಅವಳು ಬರುವುದರೊಳಗೆ ಅಂದರೆ ಏಳು ಗಂಟೆಯ ಸುಮಾರಿಗೆ ಬರಬೇಕೆಂದೂ ಹೇಳಿದ್ದ. ಅಂತೆಯೇ ಅವರ ಮನೆಗೆ ಈಶು-ಪಾರಿಯರು ಹೋದಾಗ ಬಾಗಿಲು ತೆರೆಯುತ್ತಿದ್ದಂತೆ 'ಸರ್ಪ್ರೈಸ್' ಎಂಬ ಕೂಗು ಕೇಳಿಸಿತು. ಆವಾಗ ಓ ಇದು ತಮಗೇ ಮಾಡುತ್ತಿರುವ ಅಚ್ಚರಿ ತರಿಸುವ ಪಾರ್ಟಿ ಎಂಬುದಾಗಿ ತಿಳಿಯಿತು. ಈಶುವಿಗೆ ನಗಬೇಕೋ ಅಳಬೇಕೋ ಗೊತ್ತಾಗಲಿಲ್ಲ. ಯಾಕೆಂದರೆ ಅವನಿಗೆ ಹಿಂದಿನ ದಿನವಷ್ಟೆ ಒಂದು ಕಂಪನಿಯಲ್ಲಿ ಉದ್ಯೋಗ ಸಿಕ್ಕಿತ್ತು. ಭಾರತಕ್ಕೆ ಮರಳಲು ಪಾರಿಗೆ ಕೊಂಚವೂ ಇಷ್ಟವಿಲ್ಲದ ಕಾರಣ ಅವನು ಇಲ್ಲೇ ಕೆಲಸಕ್ಕೆ ಪ್ರಯತ್ನಿಸಿದ್ದ. ಸಿಗುತ್ತದೋ ಇಲ್ಲವೋ (ಆರ್ಥಿಕ ವ್ಯವಸ್ಥೆ ಕುಸಿದಿದ್ದರಿಂದ) ಎಂಬ ಆತಂಕವಿದ್ದುದರಿಂದ ಯಾರಿಗೂ ಹೇಳಿರಲಿಲ್ಲ. ವಿಷಯ ಕೇಳಿ ಬೇಸ್ತು ಬೀಳುವ ಸರದಿ ಗೆಳೆಯರ ಬಳಗದ್ದಾಗಿತ್ತು. ಈಶು-ಪಾರಿಯರ ಮುಖದಲ್ಲಿ ಇಲ್ಲಿಯೇ ಇದ್ದು ಇನ್ನೂ ಅಚ್ಚರಿ ಪಾರ್ಟಿಗಳನ್ನು ಸವಿಯುವ ಆನಂದದ ಮಂದಹಾಸ ಲಾಸ್ಯವಾಡುತ್ತಿತ್ತು.

◈



# ಮದರ್ ತೆರೆಸಾ


**ಸಂಕೇತ್ ಗುರುದತ್ತ**

*ಹೈದರಾಬಾದ್, gurudattans_AT_yahoo.com*




ಹೊರಲಿಲ್ಲ ಹೆರಲಿಲ್ಲ
ಮಾತೆಯಾದೆಯಲ್ಲ
ಮಾತೇ ಆಡದೇ
ಶುಶ್ರೂಷೆಯಲಿ ಜೀವ ತೇಯ್ದೆಯಲ್ಲ

'ಮಾತೆ' ಇದ್ದು ಮಾತೃಪ್ರೇಮವರಿಯದ
ಹಸುಳೆಗಳಿಗೆ, ದೀನದಲಿತರಿಗೆ
'ಮಹಾ ಮಾತೆ'ಯಾದೆಯಲ್ಲ.

ಧರಿಸಿದ್ದು ಶ್ವೇತಮಯ ದಿರಿಸು
ಹೃದಯದಿ ನಿರ್ಮಲ ಭಾವ
ಒಳಗೆ ಶಾಂತಿ ಸಂದೇಶದ ಹಕ್ಕಿ

ತಾಯೇ ನಿನಗೆ ಸಾವಿಲ್ಲ
ಸಾವು ಅಸ್ಥಿರ ದೇಹಕೆ
ನಿನ್ನೊಳಗಿನ ಶಾಂತಿಯ ಹಕ್ಕಿ
ಜಗದ ತುಂಬಾ ಹಾರುತಿದೆ
ಶಾಂತಿ ಸಂದೇಶವ ಬೀರುತಿದೆ.



# ಸಂದೀಪ

**ಗಣೇಶ ಕಡಬ**

ಕುಪರ್ಟಿನೊ, ಕ್ಯಾಲಿಫೋರ್ನಿಯ, *GaneshKadaba_AT_hotmail.com*

*ಲ್ಯಾಬಿನಲ್ಲಿ ನನ್ನ ಪ್ರಾಜೆಕ್ಟ್ ಕೆಲಸ ಮುಗಿಸಿ ರಾತ್ರಿ ಮೂರು ಘಂಟೆಗೆ ಮನೆಗೆ ಬಂದೆ. ಸಂದೀಪನ ಕೋಣೆಯಿಂದ ಅದೇ ಗೊರಕೆಯ ಶಬ್ದ ಬಂತು. ಮೆಲ್ಲಗೆ ಬಾಗಿಲು ತೆಗೆದು ನೋಡಿ ಗರಬಡಿದಂತೆ ನಿಂತೆ!*

ಇದು ನನ್ನ ಗೆಳೆಯ ಸಂದೀಪನ ಕಥೆ. ಆಗ ವರ್ಷ ೧೯೯೩. ನಾನು ಅಮೇರಿಕೆಯ ಜಾರ್ಜಿಯಾ ವಿಶ್ವವಿದ್ಯಾಲಯಕ್ಕೆ ಎಂ. ಎಸ್. ಪದವಿ ಗಳಿಸಲು ಬಂದಿದ್ದೆ. ಇನ್ನಿಬ್ಬರು ಬೆಂಗಳೂರಿನವರೇ ಆದ ಸಂದೀಪ ಮತ್ತು ರಾಜೇಶರೊಂದಿಗೆ ಕ್ಯಾಂಪಸ್ಸಿನ ಹೊರಗಡೆ ಇದ್ದ ಒಂದು ಮನೆಯನ್ನು ಬಾಡಿಗೆಗೆ ಹಿಡಿದು ವಾಸಿಸುತ್ತಿದ್ದೆವು. ರಾಜೇಶ್ ಕುಡುಮಿ. ಯಾವಾಗಲೂ ತಾನಾಯಿತು, ತನ್ನ ಕಾಲೇಜಿನ ಅಧ್ಯಯನವಾಯಿತು ಎಂದು ಯಾರ ತಂಟೆಗೂ ಹೋಗದಂತಿದ್ದ. ಸಂದೀಪ್ ಗಂಭೀರನಾಗಿ ಸ್ವಲ್ಪ ಭಾವಜೀವಿಯಾಗಿದ್ದ. ಆರಡಿಗೂ ಮೀರಿ ಉದ್ದವಾಗಿದ್ದ, ಬಲಾಢ್ಯನಾಗಿ ಸ್ಪುರದ್ರೂಪಿಯಾಗಿದ್ದ.

ನೋಡಲು ಆರೋಗ್ಯವಂತನಾಗಿದ್ದರೂ, ಸಂದೀಪ ಪ್ರತಿದಿನ ಕೆಲವು ಮಾತ್ರೆಗಳನ್ನು ನುಂಗುತ್ತಿದ್ದ. ಒಂದು ದಿನ ಕುತೂಹಲ ತಡೆಯಲಾರದೆ ಅವನನ್ನು ಕೇಳಿದೆ, "ಏನಕ್ಕೆ ಈ ಗುಳಿಗೆಗಳು?" ಎಂದು. ಆಗ ಅವನು ತನ್ನ ದುರಂತಮಯ ಜೀವನ ಕಥೆಯನ್ನು ಹೇಳಿದ. "ನಾನು ಆಗ ಚಿಕ್ಕವನಾಗಿದ್ದೆ. ನಮ್ಮ ಮನೆ ಜಯನಗರದಲ್ಲಿತ್ತು. ನಾನೊಬ್ಬನೇ ಗಂಡು ಮಗ ಮತ್ತು ನನಗಿಬ್ಬರು ತಂಗಿಯರು. ನನ್ನ ತಂದೆ ಬೆಂಗಳೂರಿನ ಸರ್ಕಾರೀ ಸಂಶೋಧನಾ ಕೇಂದ್ರವೊಂದರಲ್ಲಿ ವಿಜ್ಞಾನಿಯಾಗಿದ್ದರು. ಎಲ್ಲಾ ವಿಷಯದಲ್ಲೂ ಒಳ್ಳೆಯವರು ಆದರೆ ಒಂದು ಕೆಟ್ಟ ಅಭ್ಯಾಸ. ಮಿತಿಮೀರಿ ಕುಡಿಯುವುದು. ಪ್ರತಿದಿನ ಕೆಲಸದಿಂದ ಬರುವಾಗ ಹುಚ್ಚಾಪಟ್ಟೆ ಕುಡಿಯುವುದು, ಅನೇಕ ಸಲ ಮನೆಯ ಹತ್ತಿರ ಎಲ್ಲಾದರೂ ಚರಂಡಿಯಲ್ಲಿ ಬೀಳುವುದು. ಒಬ್ಬನೇ ಮಗನಾಗಿದ್ದರಿಂದ ಅವರನ್ನು ಹುಡುಕಿ ಚರಂಡಿಯಿಂದ ಎತ್ತಿ ಮನೆಗೆ ತರುವ ಹೊಣೆ ನನ್ನದಾಗಿತ್ತು. ಇದನ್ನು ನನ್ನ ಗೆಳೆಯರೆಲ್ಲ ನೋಡಿ, ಶಾಲೆಯಲ್ಲಿ, "ಇವನಪ್ಪ ಕುಡುಕ!" ಎಂದು ನನ್ನನ್ನು ಸದಾ ಗೇಲಿ ಮಾಡುತ್ತಿದ್ದರು. ಮನೆಯಲ್ಲಿ ತಂದೆ ತಾಯಿಯರ ನಡುವೆ ಈ ಕುಡುಕತನದ ಬಗ್ಗೆ ಸದಾ ಘರ್ಷಣೆ. ಇದರಿಂದ ನಾನು ಕ್ರಮೇಣ ಮನೋರೋಗಿಯಾದೆ. ನಾನು ಹೈಸ್ಕೂಲು ಮುಗಿಸಿ ಕಾಲೇಜಿಗೆ ಬರುವಷ್ಟರಲ್ಲಿ ನನ್ನ ಡಿಪ್ರೆಶನ್ನು ತುಂಬಾ ಗಾಢವಾಗಿತ್ತು. ನನಗೆ ಬೆಂಗಳೂರಿನ ಹೆಸರಾಂತ ನಿಮ್‌ಹ್ಯಾನ್ಸಿನಲ್ಲಿ ವೈದ್ಯರು ಚಿಕಿತ್ಸೆ ಮಾಡಿದರು. ಇಷ್ಟೆಲ್ಲ ಇದ್ದರೂ ನಾನು ಛಲ ಬಿಡದೆ ಓದಿ ಬೆಂಗಳೂರಿನ ಬಿ. ಎಂ. ಎಸ್. ಕಾಲೇಜಿನಲ್ಲಿ ಇಂಜಿನಿಯರಿಂಗ್ ಮುಗಿಸಿದೆ. ಆ ವೈದ್ಯರು ಕೊಟ್ಟ ಮಾತ್ರೆಗಳನ್ನೇ ನಾನು ಪ್ರತಿ ದಿನ ನುಂಗುವುದು."

ಅವನ ಕಥೆಯನ್ನು ಕೇಳಿದ ನಾನು, "ಸಂದೀಪ್, ನಿನ್ನ ಬಗ್ಗೆ ನನ್ನ ಗೌರವ ತುಂಬಾ ಹೆಚ್ಚಿದೆ. ಇಷ್ಟೆಲ್ಲ ಮಾನಸಿಕ ಹಿಂಸೆಗೆ ಒಳಗಾಗಿದ್ದರೂ ನೀನು ಛಲ ಬಿಡದೆ ಓದನ್ನು ಮುಗಿಸಿದೆ. ಆದರೆ ಒಂದು ನನಗೆ ಅರ್ಥವಾಗಲಿಲ್ಲ. ನೀನು ಮಾನಸಿಕವಾಗಿ ಸಂಪೂರ್ಣ ಗುಣ ಹೊಂದಿಲ್ಲದಿದ್ದರೂ ನಿನ್ನನ್ನು ಒಬ್ಬನೇ ಇಷ್ಟು ದೂರ ಅಮೇರಿಕೆಗೆ ಕಳಿಸಲು ನಿನ್ನ ಮನೆಯವರು ಹೇಗೆ ಒಪ್ಪಿದರು?" ಎಂದು ಕೇಳಿದೆ.

ಮಾರ್ಮಿಕವಾಗಿ ನಕ್ಕು ಸಂದೀಪ ಹೇಳಿದ, "ನೋಡು ದೇವರ ಆಟವನ್ನು. ಇತ್ತ ನನ್ನ ಡಿಪ್ರೆಶನ್ನು ಹೆಚ್ಚುತ್ತಿದ್ದಂತೆಯೇ, ಅತ್ತ ನನ್ನ ತಂದೆಯ ಕುಡುಕುತನ ಕಮ್ಮಿಯಾಗುತ್ತಿತು. ಒಂದೆರಡು ವರ್ಷಗಳಿಂದಿತ್ತೀಚೆಗೆ ಅವರು ಕುಡಿಯುವುದನ್ನು ಪೂರ್ಣವಾಗಿ ಬಿಟ್ಟು ತಮ್ಮ ಹಿಂದಿನ ನಡವಳಿಕೆಯ ಬಗ್ಗೆ ಪಶ್ಚಾತ್ತಾಪಪಟ್ಟು ಎಲ್ಲರಲ್ಲೂ ಕ್ಷಮೆ ಬೇಡಿದರು. ಈಗ ಕೆಲಸದಿಂದ ನಿವೃತ್ತರಾಗಿ ನನ್ನ ತಾಯಿಯವರೊಂದಿಗೂ ಹೊಂದಿಕೊಂಡು  ಒಳ್ಳೆಯ ಜೀವನವನ್ನು ನಡೆಸುತ್ತಿದ್ದಾರೆ. ಆದರೆ ನನ್ನ ಡಿಪ್ರೆಶನ್ನು ಹಿಡಿತದಲ್ಲಿತ್ತೇ ಹೊರತು ಗುಣವಾಗುವ ಚಿಹ್ನೆ ಕಾಣಲಿಲ್ಲ. ನನ್ನ ಡಿಗ್ರಿ ಮುಗಿದ ಮೇಲೆ ಅಮೇರಿಕೆಗೆ ಉನ್ನತ ವಿದ್ಯಾಭ್ಯಾಸಕ್ಕೆ ಹೋಗುವೆ ಎಂದಾಗ, ನನ್ನ ತಂದೆ ತಾಯಿಯರು ಚಿಂತಿತರಾಗಿ ನನ್ನ ವೈದ್ಯರ ಸಲಹೆ ಕೇಳಿದರು. ವೈದ್ಯರು, 'ಸಂದೀಪ ಈಗ ಪರವಾಗಿಲ್ಲ. ಅವನಿಗೆ ಹೊಸದೇಶದ ಹೊಸ ವಾತವರಣ ಮತ್ತು ತನ್ನದೇ ಸ್ವಾತಂತ್ರ್ಯ ಸಿಕ್ಕಿದರೆ ಅವನ ಖಾಯಿಲೆ ಪೂರ್ಣವಾಗಿ ಗುಣವಾಗಬಹುದು. ಸಮಯಕ್ಕೆ ಸರಿಯಾಗಿ ಮಾತ್ರೆಗಳನ್ನು ತೆಗೆದುಕೊಂಡರೆ ಸಾಕು,' ಎಂದರು. ಅಮೇರಿಕೆಯಲ್ಲಿ ಈ ಮಾತ್ರೆಗಳು ಸಿಕ್ಕಾಪಟ್ಟೆ ದುಬಾರಿಯಾದುದರಿಂದ ನನಗೆ ಒಂದು ವರ್ಷಕ್ಕಾಗುವಷ್ಟು ಮಾತ್ರೆಗಳನ್ನು ಕೊಟ್ಟಿದ್ದಾರೆ. ನನಗೆ ಇಲ್ಲಿಯ ವಿದ್ಯಾರ್ಥಿಜೀವನ ಇಷ್ಟವಾಗಿದೆ. ಇಲ್ಲಿಗೆ ಬಂದ ಒಂದು ತಿಂಗಳಲ್ಲೇ ನನ್ನ ಡಿಪ್ರೆಶನ್ನು ಕಡಿಮೆಯಾದಂತಿದೆ," ಎಂದ.

ಹೀಗೆಯೇ ನಮ್ಮ ವಿದ್ಯಾರ್ಥಿ ಜೀವನ ಮುಂದುವರೆಯಿತು. ಸಮಯ ಕಳೆದಂತೆಲ್ಲ ಸಂದೀಪನ ವ್ಯಕ್ತಿತ್ವ ಚೆನ್ನಾಗಿ ವಿಕಸಿತವಾಗುತ್ತಿದೆ ಎಂದನಿಸುತ್ತಿತ್ತು. ಒಂದು ದಿನ ಚಳಿಗಾಲದ ರಾತ್ರಿ ಸುಮಾರು ೯ ಘಂಟೆಗೆ ಊಟಕ್ಕೆ ಮನೆಗೆ ಬಂದಾಗ ಸಂದೀಪನ ಕೋಣೆಯಿಂದ ಗೊರಕೆ ಹೊಡೆಯುವ ಶಬ್ದ ಕೇಳಿಬಂತು. ಇದೇನಿದು ಇವತ್ತು ಇಷ್ಟು ಬೇಗ ಮಲಗಿದ್ದಾನೆ ಎಂದು ಮೆಲ್ಲಗೆ ಇಣಿಕಿ ನೋಡಿದೆ.  ಕಿಟಕಿಯನ್ನು ತೆರೆದು ಗಾಢ ನಿದ್ರೆಯಲ್ಲಿದ್ದ. ಮೈ ಕೊರೆಯುವ ಗಾಳಿ ಇದ್ದುದರಿಂದ, ಮೆಲ್ಲಗೆ ಕಿಟಕಿಯನ್ನು ಮುಚ್ಚಿ ಹೊರಗೆ ಬಂದು, ಊಟ ಮಾಡಿ, ವಾಪಸ್ಸು ಲ್ಯಾಬಿಗೆ ಹೋದೆ. ಲ್ಯಾಬಿನಲ್ಲಿ ನನ್ನ ಪ್ರಾಜೆಕ್ಟ್ ಕೆಲಸ ಮುಗಿಸಿ ರಾತ್ರಿ ಮೂರು ಘಂಟೆಗೆ ಮನೆಗೆ ಬಂದೆ. ಸಂದೀಪನ ಕೋಣೆಯಿಂದ ಅದೇ ಗೊರಕೆಯ ಶಬ್ದ ಬಂತು. ಮೆಲ್ಲಗೆ ಬಾಗಿಲು ತೆಗೆದು ನೋಡಿ ಗರಬಡಿದಂತೆ ನಿಂತೆ! ಮಲಗಿದ್ದ ರೀತಿಯಲ್ಲಿ ಒಂದು ಚೂರೂ ಬದಲಾಗದಂತೆ ಅದೇ ಬದಿಯಲ್ಲಿ ಮಲಗಿದ್ದ. ಆ ಚಳಿಗಾಲದ ರಾತ್ರಿಯಲ್ಲೂ ಅವನ ಮುಖದ ಮೇಲೆಲ್ಲಾ ಬೆವರಿತ್ತು. ಅವನನ್ನು ಎಬ್ಬಿಸಲು, "ಸಂದೀಪಾ, ಸಂದೀಪಾ," ಎಂದೆ. ಉತ್ತರವಿಲ್ಲ. ಅವನನ್ನು ಅಲ್ಲಾಡಿಸಿದೆ. ಅದೇ ಗೊರಕೆ ಮೊರಗುತ್ತಿತ್ತು. ಆದರೆ ಎಚ್ಚರವಾಗಲಿಲ್ಲ. ಮುಖದ ಮೇಲೆ ಸ್ವಲ್ಪ ನೀರು ಎರಚಿ ಎದ್ದೇಳಿಸಲು ಬಾತ್‌ರೂಮಿಗೆ ಹೋದೆ. ಅಲ್ಲಿ ಇನ್ನೊಂದು ಆಘಾತ ನನಗೆ. ವಾಶ್ ಬೇಸನ್ನಿನ ಪಕ್ಕದಲ್ಲೆಲ್ಲ ಅಸಂಖ್ಯಾತ ನೀಲಿ ನೀಲಿ ಬಣ್ಣದ ಖಾಲಿಯಾದ ಮಾತ್ರೆಗಳ ಮಿನುಗುವ ಕವರುಗಳು. ಏನಾಗಿದೆ ಎಂದು ತಕ್ಷಣ ಹೊಳೆಯಿತು. ರಾಜೇಶನೂ ಮನೆಯಲ್ಲಿರಲಿಲ್ಲ. ಇನ್ನೇನು ಲ್ಯಾಬಲ್ಲೋ ಲೈಬ್ರರಿಯಲ್ಲೋ ಇದ್ದ. ತಕ್ಷಣ ೯೧೧ ಎಮರ್ಜೆನ್ಸಿ ನಂಬರಿಗೆ ಫೋನು ಮಾಡಿ ನನ್ನ ಗೆಳೆಯ ತುಂಬಾ ಮಾತ್ರೆಗಳನ್ನು ನುಂಗಿರುವ ಬಗ್ಗೆ ತಿಳಿಸಿದೆ. ಒಂದೆರಡು ನಿಮಿಷದಲ್ಲೇ ಮನೆಯ ಹೊರಗೆ ಒಂದು ಫೈರ್ ಎಂಜಿನ್ನು, ಆಂಬ್ಯುಲೆನ್ಸು, ಎರಡು ಪೋಲೀಸು ಕಾರುಗಳು ತಮ್ಮ ಸೈರನ್ನು, ಲೈಟುಗಳನ್ನೆಲ್ಲ ಹಾಕಿಕೊಂಡು ಬಂದವು. ಪೋಲೀಸರು ಒಳಗೆ ಬಂದು, "ನಿನ್ನ ಗೆಳೆಯನಿಗೆ ಡ್ರಗ್ಗಿನ ಓವರ್‌ಡೋಸು ಆಗಿದೆಯಾ?" ಎಂದರು. ನಾನು, "ಡ್ರಗ್ಸ್ ಅಲ್ಲಾ, ಅವನ ಮೆಡಿಕೇಶನ್ನು," ಎಂದೆ. ಬಾತ್‌ರೂಮಿಗೆ ಹೋಗಿ ಪೋಲೀಸರು ಅಲ್ಲಿದ್ದ ಮಾತ್ರೆಯ ಕವರುಗಳನ್ನೆಲ್ಲ ವಶಪಡಿಸಿಕೊಂಡರು, ಮನೆಯನ್ನೆಲ್ಲಾ ತಲಾಶಿ ಮಾಡಿದರು. ಪ್ಯಾರಮೆಡಿಕಲ್ ಸಿಬ್ಬಂದಿಯವರು ಸಂದೀಪನಿಗೆ ಆಕ್ಸಿಜನ್ ಮುಖವಾಡವನ್ನು ಹಾಕಿ ಅವನ ಕೈಗೆ ಡ್ರಿಪ್ಪಿನ ಬಾಟಲ್ಲಲ್ಲೊಂದು ಅದೇನೋ ಔಷಧಿಯನ್ನು ಹಾಕಿ ಆಂಬ್ಯುಲೆನ್ಸಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಾನೂ ಅವರ ಜೊತೆಯಲ್ಲೇ ಹೋದೆ.

ಬೆಳಗಿನ ಜಾವದವರೆಗೂ ಆಸ್ಪತ್ರೆಯಲ್ಲೇ ಇದ್ದೆ. ರಾಜೇಶನೂ ಬಂದ. ಇದೆಲ್ಲವನ್ನೂ ನೋಡಿ ಅವನಿಗೂ ಆಘಾತವಾಗಿತ್ತು. ಎಮರ್ಜೆನ್ಸಿ ವಾರ್ಡಿನ ವೈದ್ಯರು ಬಂದು, "ನೋಡಿ, ಸಂದೀಪ ತನ್ನ ಡಿಪ್ರೆಶನ್ನಿನ ಮಾತ್ರೆಗಳನ್ನು ಅತಿಯಾಗಿ ನುಂಗಿದ್ದಾನೆ. ನಮ್ಮ ಲೆಕ್ಕದ ಪ್ರಕಾರ ಸುಮಾರು ಆರು ತಿಂಗಳಿಗಾಗುವಷ್ಟು ಡೋಸನ್ನು ಒಂದು ರಾತ್ರಿಯಲ್ಲೇ ನುಂಗಿದ್ದಾನೆ. ಅವನು ಬದುಕಿರುವುದೇ ಒಂದು ದೊಡ್ಡ ಆಶ್ಚರ್ಯ. ಇಷ್ಟು ಓವರ್‌ಡೋಸಾಗಿರುವವರು ಬದುಕಿರುವುದು ತುಂಬ ಅಪರೂಪ. ನಿಮ್ಮ ಗೆಳೆಯ ದೈಹಿಕವಾಗಿ ತುಂಬಾ ಶಕ್ತಿಶಾಲಿಯಗಿದ್ದುದರಿಂದ ಅವನ ದೇಹ ಇದನ್ನು ತಡೆದುಕೊಂಡಿದೆ. ಅವನು ಇಲ್ಲೇ ಎಮರ್ಜೆನ್ಸಿ ವಾರ್ಡಿನಲ್ಲೇ ಇನ್ನೂ ಸುಮಾರು ದಿವಸ ಇರಬೇಕು," ಎಂದರು.

ನಾನು ಸಂದೀಪನ ತಂದೆತಾಯಿಗೆ ವಿಚಾರ ತಿಳಿಸಲು ಬೆಂಗಳೂರಿಗೆ ಫೋನು ಮಾಡಿದೆ. ಅವರು ಸಿಗಲಿಲ್ಲ. ವಿಧಿಯಾಟವೆಂಬಂತೆ, ಮಗನ ಜೀವನ ಉತ್ತಮವಾಗಿದೆ ಎಂಬ ನೆಮ್ಮದಿಯಿಂದ ಅವರಿಬ್ಬರೂ ಉತ್ತರ ಭಾರತ ಮತ್ತು ನೇಪಾಳವನ್ನು ನೋಡಲು ಪ್ರವಾಸ ಮಾಡಿದ್ದರು. ಅವರಿಗೆ ಸುದ್ದಿ ತಲುಪುವುದಕ್ಕೇ ಒಂದು ವಾರ ಹಿಡಿಯಿತು. ಅಷ್ಟರಲ್ಲಿ ಸಂದೀಪನ ಸ್ಥಿತಿಯೂ ಸುಧಾರಿಸಿತ್ತು. ಅವನಿಗೆ ಜ್ಞಾನ ಬಂದಿತ್ತು. ನೋಡಿದವರನ್ನು ಗುರುತು ಹಿಡಿದು ಸ್ವಲ್ಪ ಮಾತಾಡುವಷ್ಟರ ಮಟ್ಟಿಗೆ ಚೇತರಿಸಿಕೊಂಡಿದ್ದ. ಅವನೇ ಆ ರಾತ್ರಿ ಏನಾಯಿತೆಂದು ಹೇಳಿದ. "ನಾನು ಎಂದಿನಂತೆಯೇ ಒಂದು ಮಾತ್ರೆ ನುಂಗಿದೆ. ಆದರೆ ಅವತ್ತು ಅದೇಕೋ ಹಿಂದಿನ ನೆನಪುಗಳೆಲ್ಲ ಮರುಕಳಿಸಿತ್ತು. ಮನಸ್ಸು ತುಂಬಾ ದುಃಖಿತವಾಗಿತ್ತು. ಅದ್ದರಿಂದ ಇನ್ನೊಂದೇ ಒಂದು ಮಾತ್ರೆ ನುಂಗಿದರೆ ಸರಿಯಾಗುತ್ತದೆ ಎಂದು ನುಂಗಿ ಬಂದು ಮಲಗಿದೆ. ಆದರೆ ನನಗೆ ನನ್ನ ಮೇಲೆಯೇ ನಿಯಂತ್ರಣ ಹೋಗಿ ಬಾತ್‌ರೂಮಿಗೆ ಹೋಗಿ ಇನ್ನೊಂದಿಷ್ಟು ಮಾತ್ರೆ ನುಂಗಿ ಬಂದು ನಾನೇನು ಮಾಡುತ್ತಿದ್ದೇನೆ ಎಂಬುದೇ ಅರಿವಾಗದೆ ಅದೇನೋ ಭಯಾನಕ ಆವೇಶದಿಂದ ನನ್ನ ಬಳಿಯಲ್ಲಿದ್ದ ಎಲ್ಲ ಗುಳಿಗೆಗಳನ್ನೂ ನುಂಗಿ ಬಂದು ಮಲಗಿದೆ. ಅಷ್ಟೆ ನನಗೆ ಜ್ಞಾಪಕವಿರುವುದು," ಎಂದ. ನಾವು ನೀನೇನೂ ಯೋಚನೆ ಮಾಡಬೇಡ ಎಂದು ಸಮಾಧಾನ ಮಾಡಿದೆವು.

ಅವನ ತಂದೆ ತಾಯಿ ನಮ್ಮ ಮನೆಗೆ ಫೋನು ಮಾಡಿದರು. ಅವರ ದುಃಖವನ್ನು ವರ್ಣಿಸಲು ಸಾಧ್ಯವಿಲ್ಲ. ಅವನ ತಂದೆಯಂತು ಅಪರಾಧಿಭಾವದಿಂದ ಮಗುವಿನಂತೆ ಅತ್ತರು. ಸಂದೀಪ ಈಗ ಹುಷಾರಾಗುತ್ತಿದ್ದಾನೆ, ಜೀವಕ್ಕೆ ಏನೂ ಅಪಾಯವಿಲ್ಲ ಎಂದು ನಾನೇ ಅವರನ್ನು ಸಮಾಧಾನಗೊಳಿಸಿದೆ. ಸಂದೀಪನ ತಾಯಿಯ ತಮ್ಮ ರಮೇಶ್ ರಾವ್ ನ್ಯೂಯಾರ್ಕಿನಲ್ಲಿ ಇಂಜಿನಿಯರ್ ಆಗಿದ್ದರು. ರಮೇಶ್ ರಾವ್ ಅವರ ಫೋನ್ ನಂಬರನ್ನು ನಮಗೆ ಕೊಟ್ಟು

ಏನಾದರೂ ಅವಶ್ಯಕತೆ ಬಿದ್ದರೆ ಅವರಿಗೆ ತಿಳಿಸಲು ಹೇಳಿದರು.

ಹೀಗೆಯೇ ಸುಮಾರು ಒಂದೆರಡು ವಾರಗಳು ಉರುಳಿದವು. ನಾವು ಪ್ರತಿ ದಿನವೂ ಸಂಜೆ ಸಂದೀಪನನ್ನು ನೋಡಲು ಆಸ್ಪತ್ರೆಗೆ ಹೋಗುತ್ತಿದ್ದೆವು. ಅವನು ಚೆನ್ನಾಗಿ ಚೇತರಿಸಿಕೊಳ್ಳುತ್ತಿದ್ದ. ಜಟ್ಟಿಯಂತೆ ಧೃಡಕಾಯನಾಗಿದ್ದವನು ಮೊದಲಿಗಿಂತ ಅರ್ಧದಷ್ಟಾಗಿದ್ದ. ಇನ್ನೂ ನಡೆಯುವಷ್ಟು ಶಕ್ತಿ ಬಂದಿಲ್ಲದಿದ್ದರೂ, ತಾನೇ ಊಟ ಮಾಡುವಷ್ಟು ಚೇತರಿಸಿಕೊಂಡಿದ್ದ.

ಒಂದು ದಿನ ಬೆಳಗಿನ ಜಾವ ಆರು ಘಂಟೆಗೆ ಆಸ್ಪತ್ರೆಯಿಂದ ಫೋನು ಬಂತು. "ಸಂದೀಪನಿಗೆ ರಾತ್ರಿ ನ್ಯುಮೋನಿಯಾ ಆಗಿ ಅವನ ಶ್ವಾಸಕೋಶಗಳಿಗೆಲ್ಲ ಇನ್ಫೆಕ್ಷನ್ ಆಗಿ, ನಾವೆಷ್ಟು ಪ್ರಯತ್ನ ಪಟ್ಟರೂ ಅವನನ್ನು ಉಳಿಸಿಕೊಳ್ಳಲಿಕ್ಕೆ ಆಗಲಿಲ್ಲ. ಇಂದು ಬೆಳಿಗ್ಗೆ ಸುಮಾರು ಐದೂವರೆಗೆ ಅವನು ನಿಧನನಾದ ಎಂದು ಹೇಳಲು ನಾವು ವಿಷಾದ ಪಡುತ್ತೇವೆ," ಎಂದರು. ರಾಜೇಶ ಮತ್ತು ನಾನು ಅನಿರೀಕ್ಷಿತವಾದ ಈ ಸುದ್ದಿಯಿಂದ ದಿಗ್‍ಭ್ರಾಂತರಾಗಿ ನಿಂತೆವು. ಆದರೆ ಮುಂದಿನ ವ್ಯವಸ್ಥೆಗಳನ್ನು ಮಾಡಲೇಬೇಕಾಗಿತ್ತು. ರಮೇಶ್ ಅವರಿಗೆ ಫೋನು ಮಾಡಿ ತಿಳಿಸಿದೆವು. ಸಂದೀಪನ ತಂದೆ ತಾಯರಿಗೆ ರಮೇಶ್ ಅವರೇ ತಿಳಿಸಿದರು. ರಮೇಶ್ ಒಂದು ವಾರ ರಜೆ ಹಾಕಿ ಜಾರ್ಜಿಯಾಗೆ ಬಂದು ನಮ್ಮ ಮನೆಯಲ್ಲಿ ಉಳಿದರು.

ಸಂದೀಪನ ದೇಹ ಇನ್ನೂ ಆಸ್ಪತ್ರೆಯ ಶವಾಗಾರದಲ್ಲೇ ಇತ್ತು. ಈಗ ಇನ್ನೊಂದು ತೊಂದರೆ ಉದ್ಭವವಾಯಿತು. ಅವನ ಸಾವು ಆತ್ಮಹತ್ಯೆಯೋ ಇಲ್ಲ ನ್ಯೂಮೋನಿಯಾದಿಂದ ಉಂಟಾದ ಸಾವೊ? ಮಗನ ಸಾವಿನಿಂದಾದ ಶೋಕವನ್ನು ಮಡಿಲಲ್ಲಿರಿಸಿಕೊಂಡು ಅವನ ತಂದೆ ತಾಯಿ ಅವನ ತಂಗಿಯರ ಭವಿಷ್ಯದ ಬಗ್ಗೆ ಯೋಚಿಸುತ್ತಿದ್ದರು. ಆತ್ಮಹತ್ಯೆ ಮಾಡಿಕೊಂಡವನ ತಂಗಿಯರೆಂಬ ಅಪವಾದ ಬರುವುದಿಲ್ಲವೇ? ಮುಂದೆ ಅವರನ್ನು ಮದುವೆಯಾಗಲು ಒಳ್ಳೆಯ ವರಗಳು ಬರುವರೇ? ಇದರ ಜೊತೆಗೆ ಸಂದೀಪನ ಸಾಕಷ್ಟು ದೊಡ್ಡ ಎಲ್. ಐ. ಸಿ. ಪಾಲಿಸಿಯ ವಿಚಾರವೂ ಇತ್ತು. ಅದರಿಂದ ಬರುವ ಹಣದಿಂದ ಅವನ ತಂಗಿಯರ ಭವಿಷ್ಯ ಹಸನಾಗುವ ಆಶೆಯೂ ಅವರಿಗಿತ್ತು. ಆದರೆ ಎಲ್. ಐ. ಸಿ. ಕಾಯಿದೆಗಳ ಪ್ರಕಾರ, ಆತ್ಮಹತ್ಯೆ ಮಾಡಿಕೊಂಡರೆ, ಪಾಲಿಸಿಯು ದುಡ್ಡು ಕೊಡುವುದಿಲ್ಲ. ಆದ್ದರಿಂದ ಸಂದೀಪನ ತಂದೆ ತಾಯಂದಿರು, ಡೆತ್ ಸರ್ಟೀಫಿಕೇಟಿನಲ್ಲಿ ಮಾತ್ರೆಗಳ ಓವರ್‍ಡೋಸಿನ ವಿಚಾರವನ್ನು ಬಿಟ್ಟು ಕೇವಲ ನ್ಯೂಮೋನಿಯಾದ ವಿಚಾರವನ್ನಷ್ಟೇ ಬರೆಸುವಂತೆ ವೈದ್ಯರಿಗೆ ಹೇಳಲು ರಮೇಶ್ ಅವರಿಗೆ ತಿಳಿಸಿದರು. ರಮೇಶ್ ಆಸ್ಪತ್ರೆಗೆ ಹೋಗಿ ವೈದ್ಯರ ಜೊತೆಗೆ ಮಾತಾಡಿಯೂ ಬಂದರು. ವೈದ್ಯರು ಸುತಾರಾಂ ಒಪ್ಪಲಿಲ್ಲ.

ಕೊನೆಗೆ ಸಂದೀಪನ ತಂದೆ ತಾಯಂದಿರು ಹೃದಯವನ್ನು ಕಲ್ಲು ಮಾಡಿಕೊಂಡು, "ಸಂದೀಪನ ದೇಹವನ್ನು ಬೆಂಗಳೂರಿಗೆ ಕಳಿಸಬೇಡಿ. ಜಾರ್ಜಿಯಾದಲ್ಲೇ ಶವಸಂಸ್ಕಾರವನ್ನು ಮಾಡಿಬಿಡಿ. ನಮ್ಮ ಸ್ವಾಮೀಜಿಗಳು ಇಲ್ಲೇ ಪೂಜೆ ಮಾಡಿ ಸಂದೀಪನಿಗೆ ವಿಭೂತಿಯನ್ನು ಕೊಡುತ್ತಾರೆ. ದಯವಿಟ್ಟು ಆ ವಿಭೂತಿಯನ್ನು ಅವನ ಬಾಯಲ್ಲಿ ಹಾಕಿಬಿಡಿ. ದೇಹವನ್ನು ಬೆಂಗಳೂರಿಗೆ ತಂದರೆ ಜನರಿಗೆ ಮಾತಾಡಲು ಅವಕಾಶವಾದ ಹಾಗೆ ಆಗುತ್ತದೆ ಮತ್ತು ಸಂದೀಪನ ತಂಗಿಯರ ಭವಿಷ್ಯಕ್ಕೆ ಕುತ್ತಾಗುತ್ತದೆ," ಎಂದು ಕಂಬನಿ ಮಿಡಿದರು. ಅವರ ಇಚ್ಛೆಯಂತೆಯೇ ನಾವೇ ಒಂದು ವಿದ್ಯುತ್ ಚಿತಾಗಾರವನ್ನು ಹುಡುಕಿದೆವು. ನಾನು ವಿಭೂತಿಯನ್ನು ಸ್ವಲ್ಪ ನೀರಿಗೆ ಹಾಕಿ, ಆ ನೀರನ್ನು ಸಂದೀಪನ ಬಾಯಿಗೆ ಸುರಿದೆನು. ಸಂದೀಪನನ್ನು ಅಗ್ನಿದೇವತೆಯ ವಶಪಡಿಸಿದೆವು. ಮಾರನೇ ದಿವಸ ಚಿತಾಗಾರಕ್ಕೆ ಹೋಗಿ ಅವನ ಅಸ್ಥಿಯನ್ನು ಒಂದು ಚಿಕ್ಕ ಪ್ಯಾಕೆಟ್ಟಿನಲ್ಲಿ ಪಡೆದು, ಅದನ್ನು ಅವನ ತಂದೆತಾಯಂದಿರಿಗೆ ಕಳಿಸಿದೆವು. ಸಂದೀಪ ಕೊನೆಗೂ ತನ್ನ ಮನೆಗೆ ವಾಪಸ್ಸಾದ. ಹೀಗೆ ನನ್ನ ಗೆಳೆಯ ಸಂದೀಪನ ಕಥೆ ಕೊನೆಗೊಂಡಿತು.

◈



## 98 ಕಿಟಕಿಗಳು

ಹಲೋ ..? ಡಿಲೆವರಿ ಕಂಪನೀನಾ ? !
ನೀವು ಕಳಿಸಿದ ಎಲ್ಲಾ ೯೮ ಕಿಟಕಿಗಳು ಬಂದ್ವು,
ಆದರೆ ಇದು ಯಾವುದೂ ಸರಿಯಾಗ್ತಾ ಇಲ್ಲ!
ನನ್ನ ಕಂಪ್ಯೂಟರ್‍ರ್ರ ವಿಂಡೋಸ್-98 ಸಿ.ಡಿ.ನೇ
ಬೇಕು ಅನ್ನುತ್ತೆ !

-- ಜೆ.ಎಸ್.

## ಕಲಿತ ಪಾಠ

ಓಲಗ ಕಲಿಯಲೆಂದು
ಶಕ್ತಿ ಬಿಟ್ಟು ಊದಿದೆ.

ನೆರೆಮನೆಯವರು
ಕೇಳುವರೇ?

ಈಗ ದವಡೆಯೆರಡೂ
ಊದಿವೆ.

- ಶ್ರೀವತ್ಸ ದುಗ್ಲಾಪುರ






# ಫಲಾಮೃತ



**ಮಂಗಳ ಕುಮಾರ್**

ಸ್ಯಾನ್ ಹೋಸೆ, ಕ್ಯಾಲಿಫೋರ್ನಿಯ, *mangalakumar_AT_gmail.com*


ಹಣ್ಣುಗಳನ್ನು ಹಾಗೆಯೇ ತಿನ್ನುವುದು ಸಾಮಾನ್ಯ ರೂಢಿಯಾದರೂ ಭಾರತೀಯ ಅಡುಗೆಗಳಲ್ಲಿ ಹಣ್ಣುಗಳನ್ನು ಉಪಯೋಗಿಸುವುದು ಹೊಸದೇನಲ್ಲ. ಬಾಳೆಹಣ್ಣಿನ ರಸಾಯನ, ಮಾವಿನಹಣ್ಣಿನ ಸೀಕರಣೆ ನಿಮಗೆ ಇಷ್ಟವಾದರೆ, ಈ ಫಲಾಮೃತವನ್ನು ಸವಿದು ನೋಡಿ. ಕೆಲವೇ ನಿಮಿಷಗಳಲ್ಲಿ ತಯಾರಿಸಬಹುದಾದ ಈ ಫಲಾಮೃತವನ್ನು ದೊಡ್ಡ ಪ್ರಮಾಣದಲ್ಲಿ ಮಾಡುವುದೂ ಸುಲಭ.

**ಬೇಕಾಗುವ ಪದಾರ್ಥಗಳು (೬ ಜನರಿಗೆ ಸಾಲುವಷ್ಟು) :**

೨ ಬಾಳೆಹಣ್ಣುಗಳು
೨ ಸೇಬು
ಒಂದು ದೊಡ್ಡ ಗೊಂಚಲು ಹಸಿರು ಅಥವಾ ಕೆಂಪು ದ್ರಾಕ್ಷಿ (ಬೀಜಗಳಿಲ್ಲದ್ದು)
ಒಂದು ದೊಡ್ಡ ಕಪ್ ಮಾವಿನ ಹಣ್ಣಿನ ಗಟ್ಟಿ ರಸ (ಆಲ್ಫಾನ್ಸೋ ತಳಿಯ ಪಲ್ಪ್ ಬಳಸಿ, ಮಾವಿನಹಣ್ಣಿನ ಜ್ಯೂಸ್ ಅಲ್ಲ)
೧/೮ ಚಮಚ ಏಲಕ್ಕಿ ಪುಡಿ
ಒಂದು ಪೈಂಟ್ ವೆನಿಲ್ಲ ಐಸ್‍ಕ್ರೀಮ್
ನಾಲ್ಕು ಚಮಚ ಪಿಸ್ತಾ ಚೂರುಗಳು
ಅಲಂಕರಿಸಲು ಚೆರ್ರಿ ಅಥವಾ ಕಲಾತ್ಮಕವಾಗಿ ಕತ್ತರಿಸಿದ ಸೇಬು ಅಥವಾ ಮಾವಿನ ಹಣ್ಣಿನ ಹೋಳುಗಳು
ಪುದೀನ ಸೊಪ್ಪಿನ ಎಸಳುಗಳು



**ವಿಧಾನ :**

ಸೇಬು ಮತ್ತು ಬಾಳೆಹಣ್ಣುಗಳನ್ನು ಸಣ್ಣಸಣ್ಣದಾಗಿ ಕತ್ತರಿಸಿ. ದ್ರಾಕ್ಷಿಗಳನ್ನೂ ಸಹ ಎರಡು ಅಥವಾ ನಾಲ್ಕು ಭಾಗವಾಗಿ ಕತ್ತರಿಸಿ. ಕತ್ತರಿಸಿದ ಹಣ್ಣುಗಳಿಗೆ ಮ್ಯಾಂಗೋ ಪಲ್ಪ್, ಏಲಕ್ಕಿ ಪುಡಿ, ವೆನಿಲ್ಲ ಐಸ್‍ಕ್ರೀಮ್ ಮತ್ತು ಪಿಸ್ತಾ ಚೂರುಗಳನ್ನು ಬೆರೆಸಿ ಎಲ್ಲವೂ ಹೊಂದಿಕೊಳ್ಳುವಂತೆ ಕಲೆಸಿ. ಕಲಾತ್ಮಕವಾಗಿ ಅಲಂಕರಿಸಿ ತಿನ್ನಲು ಕೊಡಿ.

ಸೂಚನೆ : ಸಿಹಿಯಾದ ಪರಂಗಿ, ಪೇರ್ ಮತ್ತು ಪೀಚ್ ಹಣ್ಣುಗಳನ್ನೂ ಬೆರೆಸಬಹುದು. ಪೈನಾಪಲ್, ಸ್ಟ್ರಾಬೆರ್ರಿ ಅಂತಹ ಸಿಹಿ-ಹುಳಿ ಮಿಶ್ರಿತ ಹಣ್ಣುಗಳನ್ನು ಉಪಯೋಗಿಸಬೇಕೆಂದರೆ ಕಡಿಮೆ ಪ್ರಮಾಣದಲ್ಲಿ ಬೆರೆಸಿ.

◈



# ಕರ್ನಾಟಕದ ಹಿರಿಮೆ


## ಡಾ. ಎಂ. ಮಹಾದೇವಪ್ಪ

ಬೆಂಗಳೂರು, ಕರ್ನಾಟಕ, *mahadevrice_AT_yahoo.com*


*ನೀನ್ಹರಿಸುವೆ ಕಾವೇರಿಯ ನೀರು, ನೆರೆ ರಾಜ್ಯಗಳಿಗೆ ಮೂರು*
*ನೀನುಣಿಸುವೆ ತುಂಗ ಭದ್ರೆಯ ನೀರು, ಆಂಧ್ರದ ಜಿಲ್ಲೆಗಳಿಗಾರು*
*ನಿನ್ನ ಕನ್ನಂಬಾಡಿ ತಣಿಸುವುದು ಮನವ, ವಿಶ್ವದಾದ್ಯಂತ ಮನುಕುಲವ*

ಕೇಳು ಕನ್ನಡ ಮಾತೆ, ಹಾಡುವೆ ನಿನ್ನ ಮೇಲೊಂದು ಗೀತೆ
ನೀನರಿಯೆ ನಿನ್ನ ಹಿರಿಮೆ, ಅದಕ್ಕಾಗಿಯೇ ನಮಗೆಲ್ಲ ಹೆಮ್ಮೆ
ನಾನು ಮತ್ತೆ ಹುಟ್ಟಿದರೆ ಹುಟ್ಟುವೆ ಇಲ್ಲೇ, ಬೆಳೆಯುವೆ ನಿನ್ನ ಮಡಿಲಲ್ಲೇ
ಇಲ್ಲದಿದ್ದರೆ ನಾನು ಮತ್ತೆ ಹುಟ್ಟುವುದನೇ ಒಲ್ಲೆ

ನಂಬಲೇ ಬೇಕು ಇದು ಸತ್ಯ, ಕರ್ನಾಟಕ ಕೃಷಿ ಸಾಮರ್ಥ್ಯ,
ಇಲ್ಲಿರುವ ವೈವಿಧ್ಯತೆ ಮತ್ತೆಲ್ಲಿಯೂ ಇಲ್ಲ, ಇಲ್ಲಿಯಂತಹ ರೈತರು ಇನ್ನೆಲ್ಲಿಯೂ ಇಲ್ಲ
ಇಲ್ಲಿಲ್ಲದ ಮಣ್ಣಿನ ಮಾದರಿ ಇಲ್ಲ, ಇಲ್ಲಿಲ್ಲದ ಬೆಳೆ ನಾ ನೋಡಿಯೇ ಇಲ್ಲ
ಇಲ್ಲಿಲ್ಲದ ಋತುಮಾನ ವಿಶ್ವದಲ್ಲೇ ಇಲ್ಲ, ಇಲ್ಲಿ ಸಿಗುವ ಬೀಜ ಮತ್ತೆಲ್ಲಿಯೂ ಇಲ್ಲ

ನೀನ್ಹರಿಸುವೆ ಕಾವೇರಿಯ ನೀರು, ನೆರೆ ರಾಜ್ಯಗಳಿಗೆ ಮೂರು
ನೀನುಣಿಸುವೆ ತುಂಗ ಭದ್ರೆಯ ನೀರು, ಆಂಧ್ರದ ಜಿಲ್ಲೆಗಳಿಗಾರು
ನಿನ್ನ ಕನ್ನಂಬಾಡಿ ತಣಿಸುವುದು ಮನವ, ವಿಶ್ವದಾದ್ಯಂತ ಮನುಕುಲವ
ನಿನ್ನ ಹಿರಿಮೆಯ ಪುತ್ರ ಬಸವ, ತೆಗೆದನು ಸಮಾಜದ ಜಡ-ಜಂಜಾಟವ
ನಿನ್ನ ನೆಲ ಕೊಡುವುದು ಬಲ, ನಿನ್ನ ಜಲ ಕೊಡುವುದು ಸಕಲ ಫಲ

ನಿನ್ನ ಮಣ್ಣಿಂದ ಚಿನ್ನ, ನಿನ್ನ ಕಾಡಿಂದ ಗಂಧ, ನಿನ್ನ ಕಡಲಿನ ಗಾನ
ನಿನ್ನ ಹಿರಿಮೆಯ ರಾಜರು, ಅಂತೆಯೇ ಕವಿಗಳು, ನಾಡುದ್ದ ಘಟ್ಟಗಳು
ನೀ ಬೆಳೆಸಿದ ನಾಯಕರು, ಇವರೆಲ್ಲಾ ಸಾಟಿ ಇಲ್ಲದವರು, ಮತ್ತೆಲ್ಲಿಯೂ ಸಿಗರು
ನಿ ಬೆಳೆಸಿದ ಶಿಲ್ಪಿಗಳು, ನೀ ಕೆತ್ತಿದ ನಿಸರ್ಗ, ನೀ ಕೊರೆದ ನದಿಗಳು
ಇದ ನೋಡಿ ಕರುಬುವರು ನೆರೆ ನಾಡ ಜನರು, ತಿಳಿಯಲಿ ಇದನ್ನು ಕನ್ನಡ ಕುವರರು

ನಿನ್ನ ವನಸಿರಿ, ವನ್ಯಮೃಗಸಿರಿ, ನಿಸರ್ಗಸಿರಿ, ಕಲೆಸಿರಿ,  ಗ್ರಾ್ಯನೈಟುಸಿರಿ,
ಜ್ಞಾನಪೀಠಸಿರಿ, ಸಂಸ್ಕೃತಿಸಿರಿ, ಹೇಳು ನಿನ್ನ ಮಕ್ಕಳಿಗೆ ಇದೆಲ್ಲಾ ಉಳಿಸಿರಿ
ಕನ್ನಡದ ಕಂಪು, ಕಿವಿಗೆಷ್ಟು ಇಂಪು, ಎಲ್ಲರ ತನುಮನಕೆ ತಂಪು
ಕನ್ನಡ ಪ್ರತಿಭೆ ಪಲಾಯನ ಈಗ ಅತಿರೇಕ, ಸರ್ಕಾರವೆ ಕಾರಣವಿದಕೆ ಬಹುತೇಕ
ಹೇಳು, ನೀನೀಗ ಸುಮ್ಮನೆ ಇರಬೇಕೆ? ಇಲ್ಲವೇ, ಇದಕೆ ಕಡಿವಾಣ ಹಾಕಬೇಕೆ?

ಬರುವವರು ಎಲ್ಲರು ಇಲ್ಲಿ ನೋಡಲಿಕ್ಕೆ, ತಿರುಗರು ಮತ್ತೆ ಹಿಂದಕ್ಕೆ,
ನೆಲೆಸುವರಿಲ್ಲೇ ವಾಸಕ್ಕೆ, ಹುಡುಕುವರು ಮಾರ್ಗವ ಜೀವನಕ್ಕೆ,
ಬೆಳೆಯುವರಿಲ್ಲೇ ಎತ್ತರಕ್ಕೆ, ತಯಾರಾಗುವರು ಎಲೆಕ್ಷನ್ಗೆ ನಿಲ್ಲಲಿಕ್ಕೆ
ಗೆದ್ದು ಬರುವರು ಸದನಕ್ಕೆ, ಕನ್ನಡಿಗರಿಗೀ ಕಷ್ಟ ಬೇಕೆ?
ಕಾಲ ಬೇಕು ಇದ ತಿಳಿಯಲಿಕ್ಕೆ, ಇದು ತಂದಿದೆ ಭಯ ಕನ್ನಡಕ್ಕೆ!

ಕನ್ಯೆಯ ಕೊಡುವರು ಅಲ್ಲಿಂದ, ಜೊತೆಯಲೇ ಬರುವರು ನೋಡಲೆಂದು
ನೆಲೆಸುವರಿಲ್ಲೇ ಖುಷಿಯಿಂದ, ತರುವರು ಇನ್ನಷ್ಟು ಜನರ ಅಲ್ಲಿಂದ
ಕೊಳ್ಳುವರು ಮನೆಯ ಸಾಲದಿಂದ, ನೆಲಸುವರಿಲ್ಲೇ ನೆಲೆಯಾಗಿ ನಿಂದು
ಕಲಿಯರು ಕನ್ನಡ ಭಾಷೆಯ, ಕಲಿಸುವರಿಲ್ಲಿ ಅವರದೇ ಭಾಷೆಯ
ಕನ್ನಡಿಗರಿಗದು ಬಲು ಆಸೆ, ಕೆಲವರಿಗಷ್ಟೇ ಅದು ನಿರಾಸೆ

ಕೃಷಿಗಿದೆ ಇಲ್ಲಿ ಎಲ್ಲಾ ಸವಲತ್ತು, ದುಡಿಯಲು ಕೊಂಚ ದಿಕ್ಕತ್ತು
ಪಕ್ಕದಿಂದ ಬರುವರು ಕೂಲಿಗೆಂದು/ಕೃಷಿಗೆಂದು/ಬೀಜ ನೆಡುವೆವು ಎಂದು
ಲಾಭ ಮಾಡಿ ಗಳಿಸುವರು ಜಾಗ ಒಂದು, ಜಾಣತನದಿ ಮಾಡುವರು ಎಸ್ಟೇಟೊಂದು
ಮಾರಿದವರ ಕರೆಯುವರು ಕೂಲಿಗೆಂದು, ಕೂಲಿ ಮಾಡುವರು ಇಲ್ಲಿ ಜನ ಇದು "ವಿಧಿ ಆಟ" ಎಂದು
ಕರ್ನಾಟಕ ಸಾರಲಿದೆ ಕನ್ನಡವ ಮೈನಾರಿಟಿ ಎಂದು, ಹೇಳಬೇಕೆ ಅದು ಓಟಿಗಾಗಿ ಎಂದು?

ಓ ಕನ್ನಡ ಮಾತೆ, ಕಣ್ತೆರೆದು ನೋಡು ಈ ಸ್ಥಿತಿಯ, ಬಿಡು ನಿನ್ನ ಮೌನವ,
ಬಿಡು ನಿನ್ನ ಮುನಿಸನ್ನು, ಬಡಿದೆಬ್ಬಿಸು ನಿನ್ನ ಮಕ್ಕಳ,
ಹುರಿದುಂಬಿಸು ನಿನ್ನ ವೀರರ, ಮೈಮರೆತಿರುವ ನಿನ್ನ ಮಕ್ಕಳ,
ಬದಲಾಗಬೇಕವರ ಲೆಕ್ಕಾಚಾರ, ಇಲ್ಲದಿದ್ದರೆ ಕಾದಿದೆ ಸಂಚಕಾರ
ಬೇಕಾಗಿದೆ ಈಗ ನಿನ್ನ ಸುತರಿಗೆ ಛಲ, ಬೇಡವೆಂದು ನಿಮಗಾವುದೂ ಸಾಲ

ನೀ ಜನ್ಮವಿತ್ತೆ ಬತ್ತಕೆ, ಅಂತಹ ಅನೇಕ ಸಸ್ಯಕೆ, ನೀಡಲು ಅನ್ನವ ವಿಶ್ವಕೆ
ನೀ ಪ್ರೇರೇಪಿಸಿದೆ ಸುತರ, ಹೈಬ್ರಿಡ್ ತಳಿಗಳ ಜನನಕೆ ಕನ್ನಡ ನೆಲದಲ್ಲಿ
ನೀ ಆಶ್ರಯವಾದೆ ನೂರಾರು ಬೆಳೆಗಳಿಗೆ, ಇಡೀ ರಾಷ್ಟ್ರದ ಸಂಪತ್ತಿಗೆ,
ರಾಜ್ಯದ ಬೊಕ್ಕಸಕೆ, ನೀ ಹಾಡಿದೆ ನಾಂದಿಯ ಭಾರತದ ಹಸಿರು ಕ್ರಾಂತಿಗೆ
ಕಂಡರಿಯೆವು ಪ್ರಕೃತಿ ವಿಕೋಪವ, ಅದೆಷ್ಟು ಪ್ರೀತಿ ನಿನ್ನಮೇಲೆ ಪ್ರಕೃತಿಗೆ

ಎದ್ದೇಳು ನೀನು ನಮ್ಮ ತೊರೆಯದೆ, ಏಳಿಸು ಸುತರ ತಡ ಮಾಡದೆ
ನೀಡವರಿಗೆ ಪುನಃಶ್ಚೇತನವ, ಮಾಡಲವರಿಗೆ ಆತ್ಮಾವಲೋಕನವ
"ಪುಟ್ಟ ಭಾರತ" ನೀನು, ಹುಟ್ಟಿತು ಕೃಷಿ ನಿನ್ನ ಮಡಿಲಲ್ಲಿ ಮಾತೆ
ಕಾಡಿಸುತಿದೆ ಈಗ ಜಾಗತೀಕರಣ, ಓಡಿಸು ನಮ್ಮ ಬೇಗ ಜಾಗೃತಿ ಗೊಳಿಸಿ,
ಸುಭಿಕ್ಷೆ ಆಗಲೆಂದು ಹರಸಿ

◈

# ಜಗತ್ತು-ವಿಸ್ಮಯ


## ವಿದ್ಯಾ ಕುಲಕರ್ಣಿ

ನವದೆಹಲಿ



ಬಾನಲಿ ಮೂಡಿದ
ಅಂದದ ಚುಕ್ಕೆಗ-
ಳೆಣಿಸುವರಾರೀ ಜಗದೊಳಗೆ

ಬೆಳಕನು ನೀಡುವ
ಅರ್ಕನ ಕಿರಣವ-
ನಳೆಯುವರಾರೀ ಜಗದೊಳಗೆ

ಹನಿಯುವ ಮಳೆಯಲಿ
ಹನಿಗಳ ಲೆಕ್ಕವ
ಗುಣಿಸುವರಾರೀ ಜಗದೊಳಗೆ

ಹಾಗೆಯೇ..

ಮನದಲಿ ಮೂಡಿದ
ಪ್ರೀತಿಯ ಆಳವ-
ನಳೆಯುವರಾರೀ ಜಗದೊಳಗೆ



# ವಿಕಾರ



*ರೋಹಿಣಿ ಹೇಳುವ ದೈತ್ಯ ಹೊಸಬನಲ್ಲ. ಎಲ್ಲರಲ್ಲೂ ಒಂದಲ್ಲ ಒಂದು ರೂಪದಲ್ಲಿ ಇರುವವನೇ. ನಮ್ಮನ್ನು ತೀವ್ರವಾದ ಮಾನಸಿಕ ನೋವೊಂದು ಬಾಧಿಸಿದಾಗ, ಆ ನೋವನ್ನು ಗೆಲ್ಲುವ ಅಂತಃಸತ್ವವು ನಮ್ಮಲ್ಲಿ ಇಲ್ಲದಾಗ, ನಮ್ಮನ್ನು ಸಂತೈಸಿ ಸಾಂಗತ್ಯ ನೀಡುವವನು ಅವನೇ.*

**ಮಂಗಳ ಕುಮಾರ್**
ಸ್ಯಾನ್ ಹೋಸೆ, ಕ್ಯಾಲಿಫೋರ್ನಿಯ, *mangalakumar_AT_gmail.com*

ಸುಮಾರು ಐದು ನಿಮಿಷ ರಿಮೋಟ್ ಕಂಟ್ರೋಲಿನ ಜೊತೆ ಹೆಣಗಾಡಿ, ವಿಡಿಯೋ ಟೇಪನ್ನು ಹಿಂದೆ ಮುಂದೆ ಓಡಾಡಿಸಿ ಕೊನೆಗೂ ಒಂದು ಕಡೆ ನಿಲ್ಲಿಸಿ, "ಅಲ್ಲಿ ನೋಡು, ಹಸಿರು ಸೀರೆ ಉಟ್ಕೊಂಡು ನಾಣಿ ಮಾಮನ ಪಕ್ಕ ನಿಂತಿದಾಳೆ. ನಮ್ಮ ಹಳೇ ರೋಹಿಣಿ ಇವಳೇ ಅಂತ ಪ್ರಮಾಣ ಮಾಡಿದ್ರೂ ನಂಬಕ್ಕಾಗಲ್ಲ. ಎಷ್ಟು ಬದಲಾಯಿಸಿದಾಳೆ ನೋಡು," ಎನ್ನುತ್ತ ಗೀತಾ ನನ್ನ ಪ್ರತಿಕ್ರಿಯೆಗೆ ಕಾಯುವವಳಂತೆ ನನ್ನ ಕಡೆ ತಿರುಗಿ ಕುಳಿತಳು. ವಿಡಿಯೋದಲ್ಲಿ ರೋಹಿಣಿಯನ್ನು ನೋಡಿ ನನಗೂ ತಕ್ಷಣ ಏನು ಹೇಳಬೇಕೆಂದು ತೋಚಲಿಲ್ಲ. ಗೀತಾ ಹೇಳಿದ್ದ ಸಂಗತಿಯಿಂದ ನನಗೆ ಅತ್ಯಂತ ಕುತೂಹಲ ಉಂಟಾಗಿದ್ದುದು ನಿಜ. ರೋಹಿಣಿ ಹೇಗೆ ಕಾಣಬಹುದು ಎನ್ನುವ ಬಗ್ಗೆ ಏನೆಲ್ಲ ಊಹಿಸಿಕೊಂಡಿದ್ದೂ ನಿಜ. ಈಗ ವಿಡಿಯೋದಲ್ಲಿ ಕಂಡುಬಂದ ರೋಹಿಣಿಗೂ, ನಾನು ಊಹಿಸಿಕೊಂಡಿದ್ದ ರೋಹಿಣಿಗೂ ಅಜಗಜಾಂತರ ವ್ಯತ್ಯಾಸವಿದೆ ಎಂದು ಎನಿಸಿತು. ನನ್ನ ಪ್ರತಿಕ್ರಿಯೆಯನ್ನು ನನ್ನ ಮುಖದಲ್ಲಿಯೇ ಓದಿದ ಗೀತಾ ನಗುತ್ತ, "ರೋಹಿಣಿಯ ಚಿತ್ರವನ್ನ ನಿಧಾನವಾಗಿ ಜೀರ್ಣಿಸಿಕೋ. ನಾನು ಕಾಫಿ ತರ್ತೀನಿ," ಎಂದು ಹೇಳಿ ಒಳಗೆ ಹೋದಳು. ನಂತರ ಒಂದು ಘಂಟೆಗೂ ಮೀರಿ ರೋಹಿಣಿಯ ಬಗ್ಗೆಯೇ ನಮ್ಮ ಚರ್ಚೆ ನಡೆದು, ಅವಳನ್ನು ಸಂಪರ್ಕಿಸಿ ಎಲ್ಲಾ ವಿವರಗಳನ್ನೂ ಪಡೆಯಬೇಕು ಎಂದು ಒಪ್ಪಿದ ನಂತರ ಗೀತಳ ಮನೆಯಿಂದ ಹೊರಬಿದ್ದೆ. ದಾರಿಯುದ್ದಕ್ಕೂ ರೋಹಿಣಿಯೇ ತಲೆಯಲ್ಲಿ ತುಂಬಿದ್ದಳು.

ಹೈಸ್ಕೂಲಿನಲ್ಲಿ ನನಗೂ ಗೀತಳಿಗೂ ಸಹಪಾಠಿಯಾಗಿದ್ದವಳು ರೋಹಿಣಿ. ಚಿಕ್ಕ ಹಣೆ, ದೊಡ್ಡ ದೊಣ್ಣೆಮೆಣಸಿನಕಾಯಿಯ ಹಾಗಿದ್ದ ಮೂಗು, ಗಲ್ಲ ಎನಿಸಿಕೊಂಡಿದ್ದು ಇದೆಯೋ ಇಲ್ಲವೋ ಎನ್ನುವ ಹಾಗೆ ದಪ್ಪ ಕುತ್ತಿಗೆಯೊಳಗೆ ಮುಳುಗಿಹೋಗಿದ್ದ ಮುಖ, ಒರಟಾಗಿ ತೆಂಗಿನಕಾಯಿಯ ಜುಂಗಿನಂತಿದ್ದ ಕೂದಲು, ಗಿಡ್ಡು ಎಂದು ಧಾರಾಳವಾಗಿ ಹೇಳಬಹುದಾಗಿದ್ದರ ಜೊತೆಗೆ ದಪ್ಪಗೂ ಇದ್ದ ದೇಹ. ತನ್ನ ಬಾಹ್ಯರೂಪದಿಂದಾಗಲೀ, ಅತೀ ಸಂಕೋಚದ ನಡತೆಯಿಂದಾಗಲೀ ಯಾರನ್ನೂ ಆಕರ್ಷಿಸದಿದ್ದ ರೋಹಿಣಿಯನ್ನು ಆಡಿಕೊಂಡು ನಗುವವರೇ ಎಲ್ಲ. ಹೊರನೋಟಕ್ಕೆ ಬಹಳ ಗಡುಸಾಗಿಯೂ ಕಾಣುತ್ತಿದ್ದರಿಂದಲೋ ಏನೋ, ರೋಹಿಣಿಯ ಸ್ನೇಹವನ್ನು ಯಾರೂ ಬಯಸುತ್ತಿರಲಿಲ್ಲ. "ಕಲ್ಲನ್ನೂ ಮಾತನಾಡಿಸುವ ಚಪಲ," ಎಂದು ಹೆಸರು ಪಡೆದಿದ್ದ ನಾನೂ ಮತ್ತು ಗೀತಾ ಇಬ್ಬರು ಮಾತ್ರ ಅವಳನ್ನು ನಮ್ಮ "ಪ್ರಾಣಸ್ನೇಹಿತೆ" ಎನ್ನುವ ಮಟ್ಟಕ್ಕೆ ಏರಿಸದಿದ್ದರೂ ಅವಳೊಂದಿಗೆ ಸ್ನೇಹದಿಂದ ಇದ್ದೆವು. ಅವಳು ಕುರೂಪಿ ಎಂದು ಅವಳ ಬೆನ್ನ ಹಿಂದೆ ಆಡಿಕೊಂಡು ನಗುವ ಮಂದಿ ಬಹಳ ಇದ್ದುದರಿಂದ ನಮಗೆ ಅವಳ ಮೇಲೆ ಸ್ನೇಹಕ್ಕಿಂತ ಅನುಕಂಪವೇ ಜಾಸ್ತಿ ಇತ್ತು ಎಂದರೂ ತಪ್ಪಿಲ್ಲ. ಓದಿನಲ್ಲಿ ಬಹಳ ಚುರುಕಾಗಿದ್ದಳು ಎನ್ನುವುದರ ಜೊತೆಗೆ ತನ್ನ ಪರಿಸರವನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದ ರೋಹಿಣಿಗೆ ಆಗಲೇ ವಯಸ್ಸಿಗೆ ಮೀರಿದ ವಿವೇಕವೂ, ಗಾಂಭೀರ್ಯವೂ ಇತ್ತು. ಬೇರೆ ಯಾರೂ ಸ್ನೇಹಿತರಿಲ್ಲದ ರೋಹಿಣಿ ನನ್ನ ಮತ್ತು ಗೀತಳ ಸಹವಾಸಕ್ಕೆ ಆಭಾರಿಯಾಗಿದ್ದಾಳೆ ಎನ್ನುವುದು ಅವಳ ಮಾತುಕಥೆಗಳಲ್ಲೇ ನಮಗೆ ವ್ಯಕ್ತವಾಗುತ್ತಿತ್ತು.



ಹೈಸ್ಕೂಲು ಮುಗಿದು ಕಾಲೇಜು ದಾಟಿ ನಮ್ಮ ಜೀವನಪಥಗಳು ಬೇರೆಯಾಗಿದ್ದರೂ ಸುಮಾರು ವರ್ಷಗಳವರೆಗೆ ಆಗಾಗ ಭೇಟಿಯಾಗುತ್ತಿದ್ದೆವು. ಆ ನಡುವಿನ ವರ್ಷಗಳಲ್ಲೇ ಅವಳ ಮೇಲಿನ ನಮ್ಮ ಅನುಕಂಪವು ಅತೀವ ಗೌರವಕ್ಕೆ ತಿರುಗುವಂತೆ ಆಗಿದ್ದು. ನಮ್ಮಂತೆ ಮದುವೆ, ಮಕ್ಕಳನ್ನು ಹೊಂದಿದ ಜೀವನವನ್ನು ಬಯಸದೇ ಅವಳು ಓದು ಮುಂದುವರೆಸಿ ಮೈಕ್ರೋಬಯಾಲಜಿಯಲ್ಲಿ ಡಾಕ್ಟೊರೇಟ್ ಪಡೆದು ಹಲವಾರು ವಿಶ್ವವಿಖ್ಯಾತ ಸಂಸ್ಥೆಗಳಲ್ಲಿ ಕೆಲಸ ಮಾಡಿ ಹೆಸರು ಪಡೆದಿದ್ದಳು. ಕಳೆದ ಐದು ವರ್ಷಗಳು ಯಾವುದೋ ರೀಸರ್ಚಿನಲ್ಲಿ ಗಾಢವಾಗಿ ಮುಳುಗಿಬಿಟ್ಟಿದ್ದ ಅವಳಿಗೆ ಯಾವ ಪ್ರಶಸ್ತಿ ಸಿಕ್ಕರೂ, ಅವಳ ಯಾವುದೇ ಯಶಸ್ಸಿನ ಬಗ್ಗೆ ಸುದ್ದಿ ತಿಳಿದರೂ ಸಾಕು, ಅವಳನ್ನು ತಕ್ಷಣ ಸಂಪರ್ಕಿಸಿ ಅಭಿನಂದಿಸಿ ಸಂತೋಷಿಸುತ್ತಿದ್ದೆವು. ಅವಳೊಂದಿಗೆ ನಮ್ಮ ಸಂಪರ್ಕ ಕ್ರಮೇಣ ಕಡಿಮೆಯಾಗಿ ನಾವು ಮುಖಾಮುಖಿ ಭೇಟಿಯಾಗಿರದಿದ್ದರೂ ಸಹ ನಮ್ಮ ಸ್ನೇಹ ಈ-ಮೈಲ್ ಮತ್ತು ಫೋನ್‌ಕಾಲುಗಳ ಸಹಾಯದಿಂದ ಮುಂದುವರೆದಿತ್ತು.

ತನ್ನ ಸೋದರಮಾವ ನಾಣಿಯ ಕೊನೆಯ ಮಗನ ಮದುವೆಗೆ ಗೀತಾ ಹೋಗಲಾಗಿರಲಿಲ್ಲ. ಗೀತಳಿಗೆ ಅವನ ಮದುವೆಯ ವಿಡಿಯೋ ಕಳಿಸಿದ್ದ ನಾಣಿ ಮಾಮ ತಮ್ಮ ಸೊಸೆ ರೋಹಿಣಿಗೆ ಸಂಬಂಧಿ ಎಂದೂ, ರೋಹಿಣಿ ಮದುವೆಗೆ ಬಂದಿದ್ದು, ಎಲ್ಲರೂ ಅವಳನ್ನು ಬಹಳ ಹೊಗಳಿ ಅವಳ ಸುತ್ತ ನೆರೆದಿದ್ದು, ಅವಳ ರೂಪವು ಎಷ್ಟು ಬದಲಾಗಿಬಿಟ್ಟಿದೆ ಎಂದೂ ತಿಳಿಸಿದ್ದರು. ಲಕ್ಷಾಂತರ ಖರ್ಚು ಮಾಡಿ ಪ್ಲಾಸ್ಟಿಕ್ ಸರ್ಜರಿ ಮಾಡಿಸಿಕೊಂಡು ಮೂಗು, ಕಣ್ಣು, ಹುಬ್ಬು ಮುಂತಾಗಿ ಎಲ್ಲವನ್ನೂ ಬದಲಾಯಿಸಿಕೊಂಡೆ ಎಂದು ಅವಳೇ ಹೇಳಿದಳಂತೆ. ಮದುವೆ ಮನೆಯಲ್ಲಿ ಎಲ್ಲರ ಬಾಯಲ್ಲೂ ಅವಳ ಪ್ಲಾಸ್ಟಿಕ್ ಸರ್ಜರಿ ಬಗ್ಗೆಯೇ ಚರ್ಚೆ ಎಂದು ನಾಣಿ ಮಾಮ ಹೇಳಿದ್ದು ಏಕೆ ಎಂದು ವಿಡಿಯೋ ನೋಡಿದ ನಂತರ ಗೀತಳಿಗೆ ಅರ್ಥವಾಗಿತ್ತು. ನಾನೂ ನೋಡುವವರೆಗೆ ಅವಳಿಗೆ ಸಮಾಧಾನವಿರಲಿಲ್ಲ. ವಿಡಿಯೋದಲ್ಲಿ ನಾವು ನೋಡಿದ ರೋಹಿಣಿ ಒಬ್ಬ ಸುಂದರ ಮಹಿಳೆಯಾಗಿದ್ದಳು. ಹಳೆಯ ರೋಹಿಣಿಯ ಮುಖ ಚಹರೆಯ ಅವಶೇಷವೂ ಇಲ್ಲದ ಹಾಗಿತ್ತು ಹೊಸ ರೋಹಿಣಿಯ ಮುಖ. ಹೊಸ ಮುಖಕ್ಕೆ ಸರಿಹೊಂದುವಂತೆ ಅವಳ ದೇಹದ ಆಕಾರವೂ ಬದಲಾಗಿತ್ತು. ರೋಹಿಣಿ ಇಷ್ಟೆಲ್ಲ ಪ್ಲಾಸ್ಟಿಕ್ ಸರ್ಜರಿ ಏಕೆ ಮಾಡಿಸಿಕೊಂಡಳು ಎನ್ನುವ ಜನಸಾಮಾನ್ಯ ಕಾರಣಗಳನ್ನು ನನಗೂ ಗೀತಳಿಗೂ ಯಾರೂ ಬಿಡಿಸಿ ಹೇಳುವ ಅಗತ್ಯವಿಲ್ಲ. ಆದರೆ ರೋಹಿಣಿ ಬೌದ್ಧಿಕವಾಗಿ, ವೈಚಾರಿಕವಾಗಿ ಜನಸಾಮಾನ್ಯರನ್ನು ಮೀರಿಸಿದ ಮಟ್ಟದಲ್ಲಿ ಇದ್ದವಳು. ಅಂತಹವಳನ್ನು ಪ್ಲಾಸ್ಟಿಕ್ ಸರ್ಜರಿ ಮಾಡಿಸಿಕೊಳ್ಳಲು ಪ್ರಚೋದಿಸಿದ ಕಾರಣಗಳು ಎಷ್ಟು ಬಲವತ್ತಾಗಿರಬಹುದು ಎನ್ನುವುದು ನಮ್ಮ ಊಹೆಗೆ ಮೀರಿದ್ದು.

ಒಂದೆರಡು ದಿವಸ ಯೋಚಿಸಿ ರೋಹಿಣಿಗೆ ಕರೆ ಕೊಟ್ಟೆ. ಅವಳ ವಯಸ್ಸಿಗೆ ಮೀರಿದ ವೈಚಾರಿಕತೆ ಮತ್ತು ಪ್ರಬುದ್ಧತೆಯಿಂದ ನಮ್ಮ ದೃಷ್ಟಿಯಲ್ಲಿ ಅತ್ಯಂತ ಉನ್ನತ ಸ್ಥಾನದಲ್ಲಿದ್ದ ಅವಳನ್ನು ಯಾವ ಪ್ರಶ್ನೆ ಕೇಳಲಿ? ರೋಹಿಣಿಯ ಫೋನು ರಿಂಗಣಿಸುತ್ತಿರುವಾಗ ನನ್ನ ಕೈ ಸಣ್ಣಗೆ ನಡುಗುತ್ತಿತ್ತು.

ರೋಹಿಣಿ ಉತ್ತರಿಸಿದಾಗ ತಡವರಿಸಿಕೊಂಡು ಉಭಯಕುಶಲೋಪರಿ ನಡೆಸಿದೆ. ಕೆಲವೇ ನಿಮಿಷಗಳಲ್ಲಿ ಮಾತನಾಡುತ್ತಿದ್ದವಳು ಹಳೆಯ ರೋಹಿಣಿಯೇ ಎನ್ನುವ ಭರವಸೆಯಿಂದ ಸಮಾಧಾನವಾಯಿತು. ಗೀತಳ ಮನೆಗೆ ಹೋಗಿದ್ದು, ಮದುವೆಯ ವಿಡಿಯೋದಲ್ಲಿ ಅವಳನ್ನು ನೋಡಿದ್ದು ಎಲ್ಲ ವರದಿ ಒಪ್ಪಿಸಿ, "ನಿನ್ನ ಪ್ಲಾಸ್ಟಿಕ್ ಸರ್ಜರಿ ಬಗ್ಗೆ ಕೇಳಿ ತುಂಬ ಆಶ್ಚರ್ಯವಾಯಿತು," ಎಂದು ನಾನು ಹೇಳಿದೆ.

"ಪ್ಲಾಸ್ಟಿಕ್ ಸರ್ಜರಿ ಮಾಡಿಸಿಕೊಳ್ಳುವ ಬಗ್ಗೆ ನಾನು ಯಾರಿಗೂ ಏನೂ ಹೇಳಿರಲಿಲ್ಲ. ಒಬ್ಬೊಬ್ಬರ ಅಭಿಪ್ರಾಯವೂ ಒಂದೊಂದು ರೀತಿ ಎನ್ನುವುದು ಗೊತ್ತಿದ್ದೇ. ಇದು ಬರೀ ನನ್ನದೇ ನಿರ್ಧಾರವಾಗಿದ್ದು, ಕೇವಲ ನನಗೆ ಸಂತೋಷ ತರುವಂತಹ ಪರಿಣಾಮವನ್ನು ಬಯಸಿ ಮಾಡಿಸಿಕೊಂಡಿದ್ದು. ಯಾರ ಅಭಿಪ್ರಾಯವೂ ನನ್ನ ನಿರ್ಧಾರವನ್ನು ಬದಲಾಯಿಸುವುದು ನನಗೆ ಬೇಕಿರಲಿಲ್ಲ ಎನ್ನುವುದು ನನಗೆ ಹತ್ತಿರವಾದ ಎಲ್ಲರಿಗೂ ಅರ್ಥವಾಗುತ್ತದೆ ಎಂದು ಕೊಂಡಿದ್ದೇನೆ," ಎಂದು ಅವಳು ಜೋರಾಗಿ ನಕ್ಕಳು. ಇದು ಖಂಡಿತ ಸಂತೋಷದ ನಗುವಲ್ಲ, ವಿಕಾರವಾದ ನಗು ಎಂದೇನೋ ವಿಚಿತ್ರವಾಗಿ ನನಗೆ ಎನಿಸಿತು.

"ರೋಹಿಣಿ, ನಿನ್ನ ವೈಯಕ್ತಿಕ ನಿರ್ಧಾರವನ್ನು ಪ್ರಶ್ನಿಸುವ ಹಕ್ಕು ಯಾರಿಗೂ ಇಲ್ಲ. ಅಕಸ್ಮಾತ್ ಈ ಬಗ್ಗೆ ನೀನು ನಮ್ಮ ಅಭಿಪ್ರಾಯವನ್ನು ಕೇಳಿದ್ದರೆ, ನಿನ್ನನ್ನು ಪ್ರೇರೇಪಿಸಿದ ಕಾರಣಗಳನ್ನು

ತಿಳಿಯದೇ ನಾವೇನು ಹೇಳಿದರೂ ಅದಕ್ಕೆ ಅರ್ಥವೆಲ್ಲಿರುತ್ತಿತ್ತು? ಆಗಿದ್ದು ಆಯಿತು. ನೀನು ಸಂತೋಷವಾಗಿದ್ದರೆ ಸಾಕು." ನಮ್ಮ ಸ್ನೇಹ ಇಷ್ಟು ಹಗುರವಾಗಿಬಿಟ್ಟಿತೇ ಎನ್ನುವ ಧ್ವನಿಯನ್ನು ಅವಳು ಗುರುತಿಸಿದಳು.

ನನ್ನನ್ನು ಸಂತೈಸುವಂತೆ, "ನೀನು ಹೇಳುವುದು ಸರಿ. ಆದದ್ದು ಆಯಿತು. ನಾನು ಸಂತೋಷವಾಗಿಯೂ ಇದ್ದೇನೆ. ಪ್ಲಾಸ್ಟಿಕ್ ಸರ್ಜರಿ ಬಗ್ಗೆ ಎಷ್ಟು ತಿಳಿದುಕೊಂಡಿದ್ದೇನೆ ಎಂದರೆ ಯಾರು ಯಾವ ಪ್ರಶ್ನೆ ಕೇಳಿದರೂ ನನಗೆ ಉತ್ತರ ಗೊತ್ತು. ಯಾವ ಮುಚ್ಚುಮರೆಯೂ ಇಲ್ಲದೆ ಗೊತ್ತಿರೋದನ್ನೆಲ್ಲ ಹಂಚಿಕೊಳ್ಳಲು ರೆಡಿ," ಎಂದಳು. ಮತ್ತೆ ಅದೇ ವಿಚಿತ್ರ ನಗು.

ಮತ್ತೊಂದೆರಡು ಪ್ರಶ್ನೋತ್ತರದಲ್ಲೇ ರೋಹಿಣಿ ನನ್ನೊಂದಿಗೆ ಮುಕ್ತವಾಗಿ ಮಾತನಾಡುತ್ತಿಲ್ಲ ಎಂದು ಗ್ರಹಿಸಿದೆ. ಅವಳು ನನ್ನ ಪ್ರತೀ ಪ್ರಶ್ನೆಯನ್ನೂ ಆಳವಾಗಿ ಯೋಚಿಸುತ್ತ, ನಿಧಾನವಾಗಿ ಉತ್ತರ ಕೊಡುತ್ತಿದ್ದಳು. ತಾನು ಕೊಡುವ ಉತ್ತರಗಳಿಂದ ನಾನು ಅವಳ ವ್ಯಕ್ತಿತ್ವವನ್ನು ಅಳೆಯುತ್ತೇನೆ ಎನ್ನುವ ಅಳುಕೋ ಏನೋ, ಸರಿಯಾದ ಪದಗಳನ್ನು ಹುಡುಕಿ, ಜೋಡಿಸಿ, ಮನಸ್ಸಿನಲ್ಲಿ ಮೊದಲು ಖಚಿತಮಾಡಿಕೊಂಡ ನಂತರ ಹೊರಬರುತ್ತಿದ್ದ ಉತ್ತರಗಳು ಅವು.

"ಕಾಸ್ಮೆಟಿಕ್ ಸರ್ಜರಿ ಮಾಡಿಸಿಕೊಳ್ಳಬೇಕು ಎನ್ನುವ ಯೋಚನೆ ಬಂದಿದ್ದು ಯಾವಾಗ?"

"ಓಹ್, ಹೀಗೆ ಒಂದೆರಡು ವರ್ಷಗಳ ಹಿಂದೆ. ನನ್ನ ನಲವತ್ತರ ಬರ್ತ್ ಡೇ ದಾಟಿದ ಮೇಲೆ. ಮಿಡ್‌ಲೈಫ್ ಕ್ರೈಸಿಸ್ ಅನ್ನುತ್ತಾರಲ್ಲ ಅದು ಶುರುವಾದಾಗ ಅಂತ ಹೇಳಬಹುದು." ಅವಳ ತುಟಿಗಳಲ್ಲೇ ತಡೆಗಟ್ಟಿ ನಿಂತು ಕಣ್ಣುಗಳವರೆಗೆ ಹರಡದಿದ್ದ ಬಲವಂತದ ನಗುವನ್ನು ಊಹಿಸಿಕೊಂಡೆ.

"ನಲವತ್ತು ವರ್ಷಕ್ಕೇ ಮಿಡ್‌ಲೈಫ್ ಕ್ರೈಸಿಸ್ ಎಂದುಬಿಟ್ಟರೆ ಹೇಗೆ. ಎಂ. ಬಿ. ಎ. ಪದವಿ ಸಂಪಾದಿಸುವ ಹೊತ್ತಿಗೆ ನನಗೆ ಇಪ್ಪತ್ತೈದು ವರ್ಷ. ಮತ್ತೆ ಸ್ವಲ್ಪ ಬೇರೆ ಕಂಪನಿಗಳಲ್ಲಿ ಪರಿಣತಿ ಪಡೆದು, ಸ್ಟೂಡೆಂಟ್ ಲೋನ್ ತೀರಿಸಿ ಸಂಪಾದನೆ ಕೈ ಹತ್ತುವ ಹೊತ್ತಿಗೆ ಇನ್ನಷ್ಟು ವರ್ಷಗಳು. ಮದುವೆಯಾಗಿ ಮಕ್ಕಳು ಸ್ಕೂಲಿಗೆ ಹೋಗುವ ಹಂತಕ್ಕೆ ಬಂದ ಮೇಲೆ ಸ್ವಂತ ಕನ್ಸಲ್ಟಿಂಗ್ ಎಂದು ಬೋರ್ಡ್ ಹಾಕಿಕೊಳ್ಳುವ ಹೊತ್ತಿಗೆ ಮತ್ತಷ್ಟು ವರ್ಷಗಳು. ನಲವತ್ತು ದಾಟಿ ಇದೀಗ ನನ್ನ ಜೀವನ ಶುರುವಾಗಿದೆ ಎಂದೇ ನನಗೆ ಸಂತೋಷ." ಸೌಜನ್ಯತೆಯ ನಗು ಸೂಸುತ್ತ ನಾನು ಹೇಳಿದ ಮಾತುಗಳನ್ನು ಕೇಳಿ ಅವಳ ಮುಖದಲ್ಲಿ ಕಿರುನಗು ಮೂಡಿರಬಹುದು ಎನಿಸಿತು.

"ನಿನಗೆ ಹೋಲಿಸಿದರೆ ನನ್ನ ನಲವತ್ತು ವರ್ಷದ ಜೀವನವೂ ಬರೀ ಸಪ್ಪೆ. ಬರೀ ಓದು, ಕೆಲಸ. ದೇವರ ದಯೆಯಿಂದ ಜೀವನದಲ್ಲಿ ದುಡ್ಡಿಗೆ, ಹೊಟ್ಟೆಪಾಡಿಗೆ ತೊಂದರೆಯಿಲ್ಲ. ಆದರೆ ಸಿಕ್ಕಾಪಟ್ಟೆ ಯಾಂತ್ರಿಕ ಬದುಕು. ನಿನಗೇ ಗೊತ್ತಲ್ಲ. ಹೇಳಿಕೊಳ್ಳಬೇಕು ಅಂದರೂ ನನ್ನ ಜೀವನದಲ್ಲಿ ಇಲ್ಲಿಯವರೆಗೂ ಒಂದು ಅಡ್ವೆಂಚರ್ ಆಗಲೀ, ರೋಮಾಂಚನವನ್ನು ಉಂಟು ಮಾಡುವಂಥ ಒಂದೇ ಒಂದು ಘಟನೆಯಾಗಲಿ ಇಲ್ಲ. ಇನ್ನು ಮುಂದಾದ್ರೂ ಸ್ವಲ್ಪ ಡೇಂಜರ್, ಎಕ್ಸೈಟ್‌ಮೆಂಟ್ ಇರುವಂತದ್ದು ಏನಾದರೂ ಮಾಡಬೇಕು ಎನ್ನುವ ಆಸೆ ಆಯಿತು." ಹಾರಿಕೆಯ ಉತ್ತರ ಕೊಟ್ಟ ಅವಳ ಮುಖಭಾವ ಹೇಗಿತ್ತೋ ಗೊತ್ತಿಲ್ಲ. ನನಗೆ ಬೇಕಾದ ಹಾಗೆ ನಾನು ಮಾಡುತ್ತೇನೆ. ಯಾರಿಗೂ ನಾನು ಉತ್ತರಿಸಬೇಕಾಗಿಲ್ಲ ಎನ್ನುವ ಗಂಭೀರ ಮುಖಭಾವವೇನೋ.

"ನನಗೆ ಹೋಲಿಸಿದರೆ ನೀನು ವೃತ್ತಿಜೀವನದಲ್ಲಿ ಏನೆಲ್ಲ ಸಾಧನೆ ಮಾಡಿ, ಎಷ್ಟೆಲ್ಲ ಖ್ಯಾತಿ ಪಡೆದವಳು. ನಿನಗೆ ಈ ಸರ್ಜರಿಯ ಅಗತ್ಯವಿದೆ ಎಂದಾಗಲೀ, ಮಾನಸಿಕವಾಗಿ ನೀನು ಇದನ್ನು ಬಯಸಿದ್ದೆ ಎಂದಾಗಲೀ ನನ್ನ ಊಹೆಗೂ ಬಂದಿರಲಿಲ್ಲ," ಎಂದೆ.

"ಮೊದಲನೆಯದಾಗಿ, ನನ್ನ ಮುಖವನ್ನು ದಿನಬೆಳಗಾದರೆ ಕನ್ನಡಿಯಲ್ಲಿ ನೋಡಿ ನೋಡಿ ಸಾಕಾಗಿತ್ತು. ಎರಡನೆಯದಾಗಿ, ನನ್ನ ಆರೋಗ್ಯ, ಸೌಂದರ್ಯ, ಮೈಮಾಟಗಳ ಬಗ್ಗೆ ನಾನೇ ತೀರ್ಮಾನ ಮಾಡುವಷ್ಟು ವಯಸ್ಸಂತೂ ಆಗಿದೆ. ಈ ವಿಷಯಗಳ ಬಗ್ಗೆ ಪೂರ್ತಿ ಮುದುಕಿಯಾಗುವವರೆಗೆ ಕಾಯುವುದರಲ್ಲಿ ಯಾವ ಪ್ರಯೋಜನ? ಕೊನೆಯದಾಗಿ, ಸರ್ಜರಿ ಮಾಡಿಸಿಕೊಳ್ಳಲು ನಾನೇ ಸಂಪಾದಿಸಿದ ಬೇಕಾದಷ್ಟು ದುಡ್ಡೂ ಇತ್ತು. ಏನಾದರೂ ಬದಲಾವಣೆ ಮಾಡಿಕೊಳ್ಳುವ ಎನಿಸಿತು. ಇದಕ್ಕಿಂತ ಇನ್ನೇನು ಹೇಳಲಿ?" ಮಂಜಿನಂತೆ ಶೀತಲವಾದ ಧ್ವನಿಯಲ್ಲಿ ಅವಳು ಉತ್ತರಿಸಿದ್ದು ಕೇಳಿ ನನಗೇ ಅರಿವಿಲ್ಲದಂತೆ ನನ್ನ ಹೃದಯ ಸ್ವಲ್ಪ ಕುಸಿಯಿತು.

ನನ್ನೊಡನೆ ಸಂಭಾಷಿಸುತ್ತಿರುವ ರೋಹಿಣಿ ಬಹಳ ವಿದ್ಯಾವಂತೆ ಹಾಗೂ ಪ್ರಬುದ್ಧೆ. ಸ್ನೇಹಿತೆಯಾದ ನನ್ನನ್ನು ಅವಹೇಳನ ಮಾಡುವುದು ಅವಳ ಉದ್ದೇಶವಲ್ಲ ಎಂದು ನನಗೆ ಗೊತ್ತು. ಅವಳು ತನ್ನ ಸುತ್ತ ಕಟ್ಟಿಕೊಂಡಿರುವ ಗೋಡೆಗಳು ಮೊದಲ ಬಾರಿಗೆ ನನ್ನ ಅನುಭವಕ್ಕೆ ಬಂದವು.

"ನೀನು ತುಂಬ ಓದಿದವಳು ಮತ್ತು ಸುಸಂಸ್ಕೃತಳು. ಎಲ್ಲರೊಂದಿಗೆ ಸೌಜನ್ಯತೆಯಿಂದ ನಡೆದುಕೊಳ್ಳುವುದು ನಿನ್ನ ನೈಸರ್ಗಿಕ ಗುಣ ಎನ್ನುವುದರಲ್ಲಿ ನನಗೆ ಸಂಶಯವಿಲ್ಲ. ನನ್ನ ಪ್ರಶ್ನೆಗಳಿಗೆ ನೀನಿತ್ತ ಉತ್ತರಗಳ ನಿಜವಾದ ಸಾರಾಂಶವೆಷ್ಟು, ತೂಕವೆಷ್ಟು ಎನ್ನುವ ಬಗ್ಗೆ ಮಾತನಾಡೋಣವೇ?" ಯಾವ ಭಾವೋದ್ವೇಗವನ್ನೂ ಪ್ರಕಟಿಸದ ನನ್ನ ಧ್ವನಿಯಿಂದ ಅವಳಿಗೆ ಸ್ವಲ್ಪ ಕಸಿವಿಸಿಯಾಯಿತು ಎಂದು ನನ್ನ ಅನಿಸಿಕೆ.

"ನನ್ನಿಂದ ನೀನು ಬಯಸುವುದಾದರೂ ಏನು?" ಮಕ್ಕಳಾಟವಾಡ ಹೋಗಿ ಸುಳ್ಳು ಹೇಳಿ ಸಿಕ್ಕಿಹಾಕಿಕೊಂಡ ಅಪರಾಧ ಪ್ರಜ್ಞೆ ಅವಳ ಧ್ವನಿಯಲ್ಲಿ.

"ಯಾರ ಆಧಾರವೂ ಇಲ್ಲದೆ ಇಲ್ಲಿಯವರೆಗೂ ಜೀವನದಲ್ಲಿ ಹಲವಾರು ಹಂತಗಳನ್ನು ದಾಟಿ, ನಿನ್ನದೇ ರೀತಿಯಲ್ಲಿ ಜಯಶಾಲಿಯಾಗಿದ್ದೀಯ. ಆದರೆ ನೀನು ಮಾಡಿದ ಕೆಲಸವು ನಿನ್ನ ಬುದ್ಧಿಶಕ್ತಿ ಮತ್ತು ವೈಚಾರಿಕ ಪ್ರಬುದ್ಧತೆಗೆ ಸರಿಹೊಂದುವಂಥದ್ದಲ್ಲ. ನೀನು ಅದನ್ನು ಪೂರ್ಣವಾಗಿ ಅರ್ಥಮಾಡಿಕೊಂಡು ಸರ್ಜರಿಯ ನಿರ್ಧಾರಕ್ಕೆ ಬಂದೆ ಎನ್ನುವುದನ್ನು ನಾನು ನಂಬಲಾರೆ. ನನ್ನನು ನಂಬಿಸುವುದು ನಿನ್ನ ಕೆಲಸ." ರೋಹಿಣಿಯನ್ನು ಸತಾಯಿಸುವುದು ನನ್ನ ಗುರಿಯಾಗಿರಲಿಲ್ಲ. "ಚಿಕ್ಕ ವಯಸ್ಸಿನಿಂದ ನಿನ್ನನ್ನು ನೋಡಿದ್ದೇನೆ. ನಿನ್ನ ಬಾಹ್ಯರೂಪವನ್ನು ಅವಹೇಳನೆ ಮಾಡಿ, ನಿನ್ನ ಬುದ್ಧಿಶಕ್ತಿ, ನಿನ್ನ ಮೃದುಹೃದಯ ಮತ್ತಿತರ ಗುಣಗಳನ್ನು ಸಂಪೂರ್ಣವಾಗಿ ಕಡೆಗಣಿಸಿ ನಿನ್ನ ಮನಸ್ಸಿಗೆ ಆಘಾತಗಳನ್ನುಂಟುಮಾಡಿರುವವರ ಬಗ್ಗೆಯೂ ನನಗೆ ಚೆನ್ನಾಗಿ ಗೊತ್ತು. ಆದರೆ ಬಾಹ್ಯರೂಪವನ್ನು ತಿದ್ದಿಕೊಂಡು ಬಿಟ್ಟ ಮಾತ್ರಕ್ಕೆ ನಿನ್ನ ಮನಸ್ಸಿನ ಗಾಯಗಳು ಗುಣವಾಗಿಬಿಟ್ಟವೆ ಎನ್ನುವುದನ್ನು ನಾನು ನಂಬಲಾರೆ. ನಿನ್ನ ಹೊರಗಿನ ರೂಪ ಹೇಗಿದ್ದರೇನು, ಒಳಗಿನ ಸಂಪೂರ್ಣತೆಗೆ ಯಾವ ಧಕ್ಕೆಯಾಗಿದೆ ಎನ್ನುವ ಬಗ್ಗೆ ನನ್ನ ಕಳವಳ," ಎನ್ನುವ ನನ್ನ ಹೃದಯದಾಳದ ಮಾತುಗಳನ್ನು ಅವಳು ಅರ್ಥ ಮಾಡಿಕೊಂಡಳು ಎನ್ನುವ ಹಾಗೆ ದೀರ್ಘವಾದ ಮೌನದ ನಂತರ ಅವಳ ಗಂಭೀರವಾದ ಧ್ವನಿ ಹೊರಬಂತು.

"ನಿನ್ನಲ್ಲಿ ಸುಳ್ಳು ಹೇಳುವ ಅಗತ್ಯವಿಲ್ಲ. ಇಷ್ಟೆಲ್ಲ ಸಾಧನೆಗಳ, ಪ್ರಶಸ್ತಿಗಳ ಬೆಂಬಲ ಇದ್ದರೂ ನನ್ನನ್ನು ಜನರು ಅಳೆಯುವುದೇ ಬೇರೊಂದು ರೀತಿಯಲ್ಲಿ. ಒಬ್ಬ ಕುರೂಪಿ ಗಂಡಸು ನನ್ನಷ್ಟು ಖ್ಯಾತಿಯನ್ನಾಗಲೀ, ಸಂಪತ್ತಾಗಲೀ ಗಳಿಸಿದರೆ ಅವನನ್ನು ಸಿಂಹಾಸನದ ಮೇಲೆ ಕೂರಿಸಿ, ಪೂಜಿಸಿ, ತಮ್ಮದೆಲ್ಲವನ್ನೂ ಬೆಳ್ಳಿಯ ತಟ್ಟೆಯಲ್ಲಿಟ್ಟು ಅವನ ಕೈಗೆ ಕೊಡುವ ಸಮಾಜ ಇದು. ಸುಂದರವಾದ ಮಹಿಳೆಯರಿಂದ ಹಿಡಿದು ಜೀವನದಲ್ಲಿ ಅವನು ಏನೆಲ್ಲ ಬಯಸುತ್ತಾನೋ ಅದೆಲ್ಲ ಅವನನ್ನು ಒಲೈಸಿಕೊಂಡು ಹೋಗುವುದು ಸುಳ್ಳಲ್ಲ. ಆದರೆ ಹೆಂಗಸಾದ ನನಗೆ ಸಿಗುವುದು ಎಲ್ಲರ ಅನುಕಂಪ, ಸಹಾನುಭೂತಿ ಮಾತ್ರ. ವೃತ್ತಿಜೀವನದಲ್ಲಿ ಏನೇನು ಸಾಧಿಸಬೇಕು ಎಂದುಕೊಂಡಿದ್ದೆನೋ ಅದೆಲ್ಲವನ್ನೂ ಸಾಧಿಸುವಾಗ ನನಗೆ ಈ ಬಗ್ಗೆ ಯೋಚಿಸಲೂ ಪುರುಸೊತ್ತಿರಲಿಲ್ಲ. ಆಗ ನನ್ನ ತಲೆಯಲ್ಲಿ ಮೂಡುತ್ತಿದ್ದ ಚಿತ್ರಗಳು, ಹೃದಯದಲ್ಲಿ ಮೂಡುತ್ತಿದ್ದ ಭಾವನೆಗಳು ಎಲ್ಲವನ್ನೂ ಬುದ್ಧಿಶಕ್ತಿ, ವೈಚಾರಿಕತೆಗಳಿಂದ ಹತೋಟಿಯಲ್ಲಿಡಲು ನನಗೆ ಸಾಧ್ಯವಾಗುತ್ತಿತ್ತು. ಆದರೆ ನಮ್ಮೆಲ್ಲರೊಳಗೂ ಒಬ್ಬ ದೈತ್ಯನಿರುತ್ತಾನೆ ಎಂದು ನಿನಗೂ ಗೊತ್ತಲ್ಲ. ಕಳೆದ ಎರಡೂ ಮೂರು ವರ್ಷಗಳಲ್ಲಿ ಅವನನ್ನು ಎದುರಿಸುವ ಶಕ್ತಿಯೇ ಹೊರಟು ಹೋಗಿ ಈ ನಿರ್ಧಾರಕ್ಕೆ ಬಂದಿದ್ದು." ಅವಳ ಸುತ್ತ ಕಟ್ಟಿಕೊಂಡಿದ್ದ ಗೋಡೆಗಳಲ್ಲಿ ನನಗೊಂದು ಸಣ್ಣ ಬಿರುಕು ಗೋಚರಿಸಿತು.

ರೋಹಿಣಿ ಹೇಳುವ ದೈತ್ಯ ಹೊಸಬನಲ್ಲ. ಎಲ್ಲರಲ್ಲೂ ಒಂದಲ್ಲ ಒಂದು ರೂಪದಲ್ಲಿ ಇರುವವನೇ. ನಮ್ಮನ್ನು ತೀವ್ರವಾದ ಮಾನಸಿಕ ನೋವೊಂದು ಬಾಧಿಸಿದಾಗ, ಆ ನೋವನ್ನು ಗೆಲ್ಲುವ ಅಂತಃಸತ್ವವು ನಮ್ಮಲ್ಲಿ ಇಲ್ಲದಾಗ, ನಮ್ಮನ್ನು ಸಂತೈಸಿ ಸಾಂಗತ್ಯ ನೀಡುವವನು ಅವನೇ. ಅವನ ಸಾಂಗತ್ಯ ಮಾತ್ರ ಒಂದೆಡೆ ಹಿತವನ್ನು ನೀಡುತ್ತ ಮತ್ತೊಂದೆಡೆ ನಮ್ಮ ಸ್ವಾತಂತ್ರವನ್ನು ಕಸಿದುಕೊಂಡು ದಾಸರನ್ನಾಗಿಸಿಕೊಳ್ಳುತ್ತದೆ. ಅದು ಇಡೀ ಜೀವನವನ್ನು ಅಧಃಪತನಕ್ಕೆ ತಳ್ಳುವ ಮದಿರೆಯಾಗಬಹುದು, ಮದ್ದಾಗಬಹುದು ಅಥವಾ ಮನೆಮಂದಿಯನ್ನು ಕಡೆಗಣಿಸಿಯಾದರೂ ಓಡಿಹೋಗಿ ಭಾಗಿಯಾಗುವ ಸಾಯಿಬಾಬಾ ಭಜನೆಯ ಗೀಳೂ ಆಗಬಹುದು. ಒಬ್ಬೊಬ್ಬರಿಗೆ ಒಂದೊಂದು ದಾರಿಯಂತೆ.

ರೋಹಿಣಿಯ ಕಣ್ಣುಗಳಿಂದ ಪ್ರವಾಹವೊಂದು ಉಕ್ಕಿ ಬಂದು ಅವಳ ಸುತ್ತಲೂ ಇದ್ದ ಗೋಡೆಗಳಲ್ಲಿ ಕೆಲವೇ ನಿಮಿಷಗಳ ಹಿಂದೆ ಗೋಚರಿಸಿದ ಬಿರುಕನ್ನು ಹೊಕ್ಕಿತು. ಕೆಲವೇ ಕ್ಷಣಗಳಲ್ಲಿ ಅದು ಇಡೀ ಗೋಡೆಯನ್ನೇ ಕೊಚ್ಚಿ ಹಾಕಿ ನನ್ನನ್ನೂ ಸುತ್ತುವರೆಯಿತು. ತನ್ನ ಹೊಸರೂಪವನ್ನು ಎದುರಲ್ಲಿ ಚೆನ್ನಾಗಿ ಹೊಗಳಿ, ನಂತರ ಬೆನ್ನ ಹಿಂದೆ ಅಣಕಿಸಿಕೊಂಡು ನಗುವವರನ್ನು ಎದುರಿಸುವುದು ಹೇಗೆ ಎಂದು ಅವಳೊಳಗಿನ ಹೊಸ ದೈತ್ಯನಿಗೆ ಗೊತ್ತಿಲ್ಲ ಎನ್ನುವುದನ್ನು ಅವಳು ಹೇಳಬೇಕಾದ ಅಗತ್ಯವೂ ಇಲ್ಲದೇ, ಬಿಕ್ಕಿ ಬಿಕ್ಕಿ ಅಳುತ್ತಿದ್ದ ಅವಳೊಂದಿಗೆ ನಾನೂ ಅತ್ತುಬಿಟ್ಟೆ.

◈

*ಲೋಕದ ಡೊಂಕ ನೀವೇಕೆ ತಿದ್ದುವಿರಿ ?*
*ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ;*
*ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ.*
*ನೆರೆಮನೆಯ ದುಃಖಕ್ಕೆ ಅಳುವರ ಮೆಚ್ಚ*
*ನಮ್ಮ ಕೂಡಲಸಂಗಮದೇವ.*



DOING FOOD RIGHT

# Swagat

*Specializing in South and North Indian Cuisine*

## Swagat Restaurant in Las Vegas

3553 South Rainbow Blvd, Las Vegas
Ph: 702-247-4030

*Swagat Indian Cuisine, authentic South and North Indian cuisine, has opened a branch in Las Vegas. We invite you and your family to enjoy our newest restaurant in Las Vegas or any of our other fine restaurants!*

Full Course

**Buffet Lunch**

Featuring Special South and
North Indian Dishes at all locations
Daily 11:00 am - 3:00 pm

We cater for any occasion to your full satisfaction

*Call your nearest Swagat for details*

**68 S. Abel Strreet**
**Milpitas CA**
**(408) 262-1128**

**1901 Salvio St.**
**Concord, California**
**(925) 685-2777**

**4325 SW 109th Ave.**
**Beaverton, Oregon**
**(503) 626-3000**

**613 Great MAll Dr.**
**Milpitas CA**
**(408) 262-2536**

**2074 NW Lovejoy**
**Portland, Oregon**
**(503) 227-4300**

**1340 NEOrenco Station Pkwy**
**Hillsboro, Oregon**
**(503) 844-3838**

*Daily 11:00 am-10:00 pm*

**KANNADADVD.NET** proudly presents **MAYAMRUGA** A Tele serial by T.N. Seetharam

**Now available in the U.S. in DVD format**





All the 450+ episodes with ending remarks by the director and actors is now available in 23 DVDs in elegant looking box for **only $125**, inclusive of tax and shipping. Each DVD is 4 hours long (at a cost of about **$5 per DVD**).

**For more information** contact:
PURUSHOTHAM CHIKKATUR
indirap_AT_juno.com
(718) 845-6794

NANDAVAR K MOHAN
nandavar_mohan_AT_kannadadvd.net,
(732) 617-0153

In Bay Area contact RAVI REDDY at
ravikreddy_at_yahoo.com (408) 956-1061



# ಜೀರಿಗೆ ಮತ್ತು ಇಮ್ಮಿಗ್ರೇಷನ್!



*ಅಮೇರಿಕಾ ಇಮಿಗ್ರೆಂಟ್ಸ್ ದೇಶ. ಈ ದೇಶವನ್ನು ಬೆಳೆಸಿದವರೇ ಬೇರೆ ಬೇರೆ ದೇಶದ ಜನರು. ದೇಶದಿಂದ ಜನ ಬೆಳೆದಿದ್ದಾರೆ, ಬೆಳೆಯುತ್ತಿದ್ದಾರೆ, ಜನರಿಂದ ದೇಶ ಬೆಳೆದಿದೆ. ಲೀಗಲ್ ಆಗಿ ಬಂದ ಜನರನ್ನು ಕೈಚಾಚಿ ಸ್ವಾಗತಿಸುತ್ತೆ.*

**ಸಂಧ್ಯಾ ರವೀಂದ್ರನಾಥ್**
ಮಿಲ್ಪೀಟಸ್, ಕ್ಯಾಲಿಫೋರ್ನಿಯ, *divyakrithi_AT_hotmail.com*

ಮೊನ್ನೆ ಬೆಂಗಳೂರಿನಿಂದ ಸ್ಯಾನ್ ಫ್ರಾನ್ಸಿಸ್ಕೋಗೆ ಬರುತ್ತಿದ್ದಾಗ ನಡೆದ ಘಟನೆ. ವಿಮಾನ ಲ್ಯಾಂಡ್ ಆಗಿ ಗೇಟಿನ ಬಳಿ ಬಂದಿದ್ದೂ ಆಗಿತ್ತು. ಪ್ರಯಾಣಿಕರೆಲ್ಲರೂ ಸೀಟ್‌ಬೆಲ್ಟ್ ಸೈನ್ ತೆಗೆದ ಮರುಕ್ಷಣವೇ ಟಕಟಕನೆ ಬೆಲ್ಟ್ ತೆಗೆದು ಚಡಪಡಿಸುತ್ತಾ ತಮ್ಮ ತಮ್ಮ ಹ್ಯಾಂಡ್‌ಬ್ಯಾಗು, ಬ್ಯಾಗೇಜ್‌ಗಳನ್ನು ತೆಗೆದುಕೊಳ್ಳಲು ಹೊರಟರು. ನನಗೆ ಮಾತ್ರ ಈ ನಡವಳಿಕೆ ಪ್ರತಿ ಬಾರಿಯೂ ಅಚ್ಚರಿ ಉಂಟುಮಾಡುತ್ತದೆ! ಹತ್ತು ಹದಿನಾಲ್ಕು ಘಂಟೆಗಳ ಕಾಲ ಆ ವಿಮಾನದಲ್ಲಿ ತಾಳ್ಮೆಯಿಂದ ಕುಳಿತಿರುತ್ತಾರೆ. ಆದರೆ ಸೀಟ್‌ಬೆಲ್ಟ್ ಸೈನ್ ತೆಗೆಯುವುದೇ ತಡ ಎಲ್ಲರೂ ಕೆಳಗಿಳಿದು ಹೋಗಲು ಚಡಪಡಿಸಿಬಿಡುತ್ತಾರೆ. ಕೆಲವರು ಮೆಟ್ಟಿಂಗಾಲು ಇಟ್ಟು ಮೇಲೆ ಬಿನ್‌ನಲ್ಲಿರುವ ಭಾರವಾದ ಬ್ಯಾಗ್ ತೆಗೆಯಲು ಪ್ರಯತ್ನಿಸಿದರೆ, ಕೆಲವರು ಸೀಟ್ ಮೇಲೆ ಹತ್ತಿ ಅವರ ಮೂಟೆಯಂತಿರುವ ಬ್ಯಾಗನ್ನು ಎಳೆಯುತ್ತಾರೆ. ಈ ಬ್ಯಾಗು ಆ ಸೀಟಿನಲ್ಲಿ ಕುಳಿತಿದ್ದವರ ತಲೆಯ ಮೇಲೆ ಬೀಳದಿದ್ದರೆ, ಅದು ಅವರ ಪುಣ್ಯ! ಇಷ್ಟೇ ಅವಧಿಯಲ್ಲಿ ಇಳಿದುಬಿಡಬೇಕು ಅಂತ ಯಾರೂ ಏನೂ ಕಟ್ಟಪ್ಪಣೆ ಮಾಡಿರುವುದಿಲ್ಲ. ಅಥವಾ ಇಳಿದವರೇ ತಕ್ಷಣ ಕಾರಿನಲ್ಲಿ ಕುಳಿತು ಮನೆಯ ದಾರಿ ಹಿಡಿಯುವುದೂ ಸಾಧ್ಯವಿಲ್ಲ. ಇನ್ನೂ ಇಮ್ಮಿಗ್ರೇಶನ್, ಕಸ್ಟಮ್ಸ್ ಎಲ್ಲ ತಪಾಸಣೆ ಆಗಬೇಕಲ್ಲ. ಆದರೂ ಈ ಪ್ರಯಾಣಿಕ ಮಹಾಶಯರುಗಳಿಗೆ ಏನೋ ಅವಸರ! ಇರಲಿ, ಹೀಗೆ ಈ ಬಾರಿಯೂ ಚಡಪಡಿಸುತ್ತ ಆ ಇಕ್ಕಟ್ಟಾದ ಐಲ್‌ನಲ್ಲಿ (ಸೀಟ್ಗಳ ನಡುವೆ ಇರುವ ಓಣಿ, ಕನ್ನಡದ ಐಲು ಅಲ್ಲ!) ಅವರವರ ಬ್ಯಾಗು/ಮೂಟೆಗಳನ್ನು ಎಲ್ಲರೂ ತೆಗೆದುಕೊಂಡು/ಎತ್ತಿಕೊಂಡು/ಹೊತ್ತುಕೊಂಡು/ತಬ್ಬಿಕೊಂಡು ಒಬ್ಬರ ಹಿಂದೆ ಒಬ್ಬರು ನಿಂತಿದ್ದರು. ಹಾಂಗ್‌ಕಾಂಗ್‌ನಿಂದ ಸ್ಯಾನ್‌ಫ್ರಾನ್ಸಿಸ್ಕೋ ತನಕದ ಅನವರತ ಪ್ರಯಾಣ ಅಂತೂ ಮುಕ್ತಾಯವಾಯಿತಲ್ಲಾ ಅಂತ ನಾನು ಸಮಾಧಾನದ ಉಸಿರನ್ನೆಳೆದಿದ್ದೆ. ಆದರೆ ಅಷ್ಟರಲ್ಲೇ ಪೈಲಟ್ ಧ್ವನಿ ಸ್ಪೀಕರ್ಗಳ ಮೂಲಕ ತೇಲಿ ಬಂತು. "ಎಲ್ಲರೂ ದಯವಿಟ್ಟು ನಿಮ್‌ನಿಮ್ಮ ಸೀಟ್‌ಗಳಲ್ಲಿ ಕುಳಿತುಕೊಳ್ಳಿ. ಐ. ಎನ್. ಎಸ್. (ಇಮ್ಮಿಗ್ರೇಷನ್ ನ್ಯಾಚುರಲೈಜೇಶನ್ ಸರ್ವಿಸ್) ಇನ್‌ಸ್ಪೆಕ್ಟರ್ಸ್ ಬಂದು ತಪಾಸಣೆ ಮಾಡಿದ ಮೇಲೆ ನೀವು ಇಳಿಯಬೇಕು." ಆಗಲೇ ದಣಿದಿದ್ದ ಪ್ರಯಾಣಿಕರಿಗೆ ಈ ಘೋಷಣೆ ಅಷ್ಟೇನೂ ಆಪ್ಯಾಯಮಾನವಾಗಿರಲಿಲ್ಲ. ಕೆಲವರಂತೂ ಗೊಣಗುವುದರ ಮೂಲಕ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು. ಆದರೆ ಯಾರೂ ವಾಪಸ್ ಸೀಟ್ ಮೇಲೆ ಕುಳಿತುಕೊಳ್ಳಲಿಲ್ಲ. ವಿಮಾನದಿಂದ ಕೆಳಗಿಳಿದ ಮೇಲೆ ಇಮ್ಮಿಗ್ರೇಶನ್ ಬೂತ್‌ಗಳಲ್ಲಿ ತಪಾಸಣೆ ನಡೆಯುವುದು ಸಹಜ. ಈಗ ಆ ಇನ್‌ಸ್ಪೆಕ್ಟರುಗಳೇ ವಿಮಾನದೊಳಗೆ ಬಂದು ತಪಾಸಣೆ ನಡೆಸಬೇಕಾದರೆ ಏನೋ ಗಲಾಟೆ ಕಾದಿದೆ ಎನಿಸಿತು.

ಪೈಲಟ್‌ನ ಆದೇಶವನ್ನು ಯಾರೂ ಪರಿಪಾಲಿಸದಿದ್ದನ್ನು ನೋಡಿ, ಇಬ್ಬರು ಐ. ಎನ್. ಎಸ್. ಇನ್‌ಸ್ಪೆಕ್ಟರ್‌ಗಳು ಒಳಗೆ ನುಗ್ಗಿದರು. ಅವರು ನಾನಿದ್ದ ಸೆಕ್ಷನ್‌ಗೇ ಬಂದಿದ್ದು ನೋಡಿ ಇದೇನಪ್ಪ ಬಂತು ಗ್ರಹಚಾರ ಅಂತ ಅಂದುಕೊಂಡೆ. ಏನೂ ತಪ್ಪು ಮಾಡದಿದ್ದರೂ ಈ ಯೂನಿಫಾರ್ಮ್‌ನಲ್ಲಿರುವ ಪೋಲೀಸರನ್ನು ನೋಡಿದರೇ ತುಂಬ ಭಯವಾಗುತ್ತೆ! ಈ ದೇಶದಲ್ಲಿ ಯೂನಿಫಾರ್ಮ್‌ಗೆ ಬಲು ಮರ್ಯಾದೆ. ಈ ಆಫೀಸರುಗಳಲ್ಲಿರುವ ಗತ್ತು, ಅವರ ಟಾಕುಟೀಕು ನಡೆನುಡಿ, ಅವರಿಗಿರುವ ಆ ದರ್ಪ ಮತ್ತು ಆ ಆತ್ಮವಿಶ್ವಾಸ, ಅವರು ಎಷ್ಟು ಪ್ರಭಾವಶಾಲಿಗಳು, ಹಾಗೂ ಎಷ್ಟು ಪ್ರಬಲರು ಎನ್ನುವುದನ್ನು ತೋರಿಸುತ್ತದೆ. ಅವರ ಕೈಯಲ್ಲಿ ತಪಾಸಣೆಗೆ ಸಿಕ್ಕಿಹಾಕಿಕೊಂಡರೆ ಮುಗಿಯಿತು! ದೇಶದಿಂದ ಹೊರಗೆ ಅಟ್ಟಬಲ್ಲಷ್ಟು ಶಕ್ತಿ ಅವರಲ್ಲಿರುತ್ತದೆ. ವಿಮಾನಕ್ಕೆ ಬಂದ ಅಂತಹ ಇಬ್ಬರು ಇನ್‌ಸ್ಪೆಕ್ಟರುಗಳಲ್ಲಿ ಒಬ್ಬ ಗಡಸು ದನಿಯಲ್ಲಿ ಹೇಳಿದ, "ಕೇಳಿದರಲ್ಲ ಪೈಲಟ್ ಹೇಳಿದ್ದು. ಎಲ್ಲರೂ ನಿಮ್ಮ ಸೀಟಿನಲ್ಲಿ ಕುಳಿತುಕೊಳ್ಳಿ. ದಯವಿಟ್ಟು ಸಹಕರಿಸಿ." ಈಗ ನಾನೂ ಸೇರಿದಂತೆ ಪ್ರಯಾಣಿಕರೆಲ್ಲ, ಗಾಬರಿಗಾಬರಿಯಾಗಿ ಅವರವರ ಭಾರವಾದ ಕೈಚೀಲಗಳನ್ನು ಹೊತ್ತುಕೊಂಡೇ ಕುಳಿತುಕೊಂಡರು.

ನನ್ನದೇ ಸಾಲಿನಲ್ಲಿ, ವಿಮಾನದ ಆ ತುದಿಯಲ್ಲಿ ಕಿಟಕಿಯ ಬಳಿ ಕುಳಿತಿದ್ದವನ ಕಡೆಗೆ ಈ ಇನ್‌ಸ್ಪೆಕ್ಟರ್‌ಗಳು ಹೋದರು. ಆ ಪ್ರಯಾಣಿಕ ಭಾರತೀಯ, ಮುಖ ಕೆಳಗೆಮಾಡಿ ಕುಳಿತಿದ್ದ. ಅವನ ಬಳಿ ನೇರವಾಗಿ ಹೋದ ಆಫೀಸರ್, "ಎಲ್ಲಿ, ನಿನ್ನ ಪ್ಯಾಸ್‌ಪೋರ್ಟ್ ತೋರಿಸು," ಎಂದ. ಆ ವ್ಯಕ್ತಿ ಗಾಬರಿಯಿಂದಲೋ ಅಥವಾ ಇಂಗ್ಲೀಷ್ ಅರ್ಥವಾಗದ ಕಾರಣದಿಂದಲೋ ಏನೋ ಸುಮ್ಮನೆ ಆಫೀಸರ್ ಮುಖ ನೋಡುತ್ತಿದ್ದ. "ಯೆಸ್, ಎಲ್ಲಿ ನಿನ್ನ ಪ್ಯಾಸ್‌ಪೋರ್ಟ್? ತೆಗಿ ಹೊರಗೆ," ಈ ಬಾರಿ ಆಫೀಸರ್ ಜೋರಾಗಿ ಕಿರುಚಿದ. ಈಗ ಆ ವ್ಯಕ್ತಿಯ ಮುಖದ ಮೇಲೆ ತಪ್ಪಿತಸ್ಥನ ಭಾವನೆ, ಭಯ ಎಲ್ಲ ಆವರಿಸಿತ್ತು. ಆದರೂ ಪ್ಯಾಸ್‌ಪೋರ್ಟ್ ಈಚೆಗೆ ಬರಲಿಲ್ಲ, ಒಂದು ಮಾತೂ ಸಹ ಹೊರಬರಲಿಲ್ಲ. ಆಫೀಸರ್ ಅವನನ್ನು ಐಲ್‌ಗೆ ಎಳೆದು, ಅವನ ಕೈಗಳನ್ನು ಹಿಂದಕ್ಕೆ ಸೆಳೆದು, ಕೋಳ ಹಾಕಿದ. ಅವನ ಜೊತೆಯಲ್ಲಿದ್ದ ಇನ್ನೊಬ್ಬ ಆಫೀಸರ್ ಆ ವ್ಯಕ್ತಿಯನ್ನು ವಿಮಾನದಿಂದ ಹೊರಗೆ ಕರೆದೊಯ್ದ. ಆಮೇಲೆ ಮೊದಲನೇ ಆಫೀಸರ್ ಆ ವ್ಯಕ್ತಿ ಕುಳಿತಿದ್ದ ಸೀಟನ್ನು ಹುಡುಕತೊಡಗಿದ. ಅದರ ಮುಂದಿನ ಸೀಟಿನ ಬೆನ್ನಿಗಂಟಿರುವ ಪಾಕೆಟ್ ಎಲ್ಲ ಶೋಧಿಸಿದ. ಅಲ್ಲಿದ್ದ ಕಾಗದಗಳನ್ನೆಲ್ಲ ಕೊಡವಿಕೊಡವಿ ನೋಡಿದ. ಏನೂ ಬೇಕಾಗಿರುವುದು, ಉಪಯೋಗಕ್ಕೆ ಬರುವಂತಹದ್ದು ಸಿಕ್ಕಂತೆ ತೋರಲಿಲ್ಲ. ಆಮೇಲೆ ಅವನೂ ವಿಮಾನದಿಂದ ಇಳಿದು ಹೊರಗೆ ಹೋದ. ಈಗ ನಮಗೂ ಪೈಲಟ್‌ನಿಂದ, "ಎಲ್ಲ ಪ್ರಯಾಣಿಕರೂ ಕೆಳಗೆ ಇಳಿಯಬಹುದು," ಎಂದು ಅನುಮತಿ ದೊರಕಿತು.

ಅವನು ಪ್ಯಾಸ್‌ಪೋರ್ಟ್ ಇಲ್ಲದೆ ಪ್ರಯಾಣಿಸುತ್ತಿದ್ದಾನೆ ಎಂದು ಹೇಗೆ ಅವರಿಗೆ ತಿಳಿಯಿತೋ, ಈ ಪ್ಲೇನಿನ ಇಂತಹ ಸಾಲಿನ ಈ ಕಿಟಕಿಯ ಬಳಿಯ ಸೀಟಿನಲ್ಲಿ ಅವನು ಕುಳಿತಿದ್ದಾನೆ ಎಂದು ಹೇಗೆ ಅವರಿಗೆ ಗೊತ್ತಾಯಿತೋ ದೇವರೇ ಬಲ್ಲ. ಸಿಂಗಪೂರ್ ಬಿಡುವಾಗ, ಹಾಂಗ್‌ಕಾಂಗಲ್ಲಿ ಇಳಿದು-ಹತ್ತಿದ್ದಾಗ ಅದೆಷ್ಟು ಸಲ ಕಣ್ಣಲ್ಲಿ ಕಣ್ಣಿಟ್ಟು ಪ್ಯಾಸ್‌ಪೋರ್ಟ್ ಇದೆಯಾ ಎಂದು ತಪಾಸಣೆ ಮಾಡಿರ್ತಾರೆ. ಅವರ ಕಣ್ಣು ತಪ್ಪಿಸಿ ಈ ವ್ಯಕ್ತಿ ಹೇಗೆ ವಿಮಾನ ಹತ್ತಿದನೋ ಪರಮಾತ್ಮನಿಗೇ ಗೊತ್ತು.

ಇದೇ ಯೋಚನೆಯ ಗುಂಗಿನಲ್ಲಿ ವಿಮಾನ ಇಳಿದು ನನ್ನ ಸೂಟ್‌ಕೇಸ್‌ಗಳನ್ನು ತೆಗೆದುಕೊಳ್ಳಲು ಕರೋಸಲ್ (ಸೂಟ್‌ಕೇಸ್‌ಗಳನ್ನು ತರುವ ಬೆಲ್ಟ್) ಮುಂದೆ ಬಂದೆ. ಅಲ್ಲಿಯೇ ಸುಳಿದಾಡುತ್ತಿದ್ದ ಹಲವಾರು ಯೂನಿಫಾರ್ಮ್‌ಧಾರಿ ಕಸ್ಟಮ್ಸ್ ಆಫೀಸರುಗಳಲ್ಲಿ ಒಬ್ಬ ನನ್ನ ಚಲನವಲನಗಳನ್ನು ಗಮನಿಸುತ್ತಿದ್ದಾನೆ ಎನಿಸಿತು. ದೇವರೇ.., ಭಗವಂತ.., ಇಮ್ಮಿಗ್ರೇಶನ್ ಇನ್‌ಸ್ಪೆಕ್ಟರ್ ತಪಾಸಣೆ ಮುಗಿಯಿತು, ಈಗ ಈ ಕಸ್ಟಮ್ಸ್ ಆಫೀಸರ್ ಇನ್ನೇನು ಕಷ್ಟ ಕೊಡ್ತಾನೋ.., ನೀನೇ ಕಾಪಾಡಬೇಕು ಅಂತ ಆ ಕಾಣದ ದೇವರ ಮೊರೆ ಹೋದೆ! ಆಗಲೇ ಹೇಳಿದೆನಲ್ಲಾ.., ಯೂನಿಫಾರ್ಮ್ ಹಾಕಿರುವ ಈ ಆಫೀಸರುಗಳು ಭಯ ಹುಟ್ಟಿಸುತ್ತಾರೆ! ಅವನಿರುವ ಕಡೆಯಿಂದ ಕರೋಸಲ್ಲಿನ ಇನ್ನೊಂದು ಬದಿಗೆ ಹೋಗಿ ನಿಂತೆ. ಊಹೂಂ.., ಕಂಭಕ್ಕೆ ಒರಗಿ ಅವನು ಅಲ್ಲಿಯೇ ನಿಂತಿದ್ದರೂ, ಜನಜಂಗುಳಿಯ ಮಧ್ಯದಿಂದ ಅವನ ದೃಷ್ಟಿ ಇನ್ನೂ ನನ್ನ ಮೇಲೇ ಇತ್ತು! ನಾನೇನು ತಪ್ಪು ಮಾಡಿಲ್ಲವಲ್ಲ, ಧೈರ್ಯವಾಗಿರಬೇಕು ಅಂತ ಇಲ್ಲದ ಧೈರ್ಯ ತೆಗೆದುಕೊಂಡೆ. ನನ್ನ ಎರಡೂ ಸೂಟ್‌ಕೇಸ್ ಬಂದ ಮೇಲೆ, ಗಾಡಿಗೆ ಹಾಕಿಕೊಂಡು ಹೊರಟೆ. ಈಗ ಆ ಕಸ್ಟಮ್ಸ್ ಆಫೀಸರ್ ನನ್ನ ಕಡೆಗೇ ಬರತೊಡಗಿದ. ನನ್ನ ಹೃದಯ ಜೋರಾಗಿ ಹೊಡೆದುಕೊಳ್ಳುತ್ತಿತ್ತು!

ನನ್ನ ಇಮ್ಮಿಗ್ರೇಶನ್ ಕಾರ್ಡ್ ಇಸಿದುಕೊಂಡು, "ಎಲ್ಲಿಂದ ಬರ್ತಾ ಇದ್ದೀಯ?" ಎಂದ.
"ಬೆಂಗಳೂರು, ಇಂಡಿಯಾ ಇಂದ," ಎಂದು ಉತ್ತರಿಸಿದೆ.
"ನೀನು ಏನಾದರೂ ಫೂಡ್ ಐಟೆಮ್ ತಂದಿದ್ದೀಯ?" ಎಂದ.
"ಹೂಂ.., ಆದರೆ ಅದೆಲ್ಲ ಕರಿದಿದ್ದು, ಸ್ನ್ಯಾಕ್ಸ್ ತರಹ," ಎಂದು ನನ್ನ ಉತ್ತರ. ಅಮ್ಮ ಕೊಟ್ಟಿದ್ದ ಚಕ್ಕುಲಿ, ಕೋಡುಬಳೆ ಇತ್ತಲ್ಲ!
"ಹೌ ಅಬೌಟ್ ಸ್ಪೈಸಸ್?"
"ಇದೆ. ಆದರೆ ಅದೆಲ್ಲ ಹುರಿದು, ಪುಡಿ ಮಾಡಿರುವುದು."
"ಜೀರಿಗೆ ತಂದಿದ್ದೀಯ?"
"ಜೀರಿಗೆ? ಇಲ್ಲ..," ಅಷ್ಟಕ್ಕೆ ಬಿಡದೆ ನಾನು ಮುಂದುವರೆಸಿದೆ, "ಆದರೆ ನಾನು ತಂದಿರುವ ಪುಡಿಯಲ್ಲಿ ಅದೂ ಮಿಕ್ಸ್ ಆಗಿದೆ."

ಸದಾ ಇದ್ದದ್ದು ಇದ್ದಂತೆ ಹೇಳುವ ನಾನು ಈಗ ಸುಳ್ಳು ಹೇಗೆ ಹೇಳುವುದು? ಮೆಣಸಿನಪುಡಿ(ಸಾರಿನಪುಡಿ)ಯಲ್ಲಿದ್ದ ಜೀರಿಗೆಯ ವಿಷಯ ಮುಚ್ಚಿಡಲಾಗುವುದೇ? ಈ ಜೀರಿಗೆಯಿಂದ ನನಗೆ ಇನ್ನೂ ಏನೇನು ಕಾದಿದೆಯೋ ಎಂದು ಮನಸ್ಸು ಲೆಕ್ಕಾಚಾರ ಹಾಕುತ್ತಿತ್ತು!

"ಜೀರಿಗೆ ಪುಡಿ ಅಲ್ಲ, ಕಾಳು ಇದೆಯಾ?" ಅವನ ತನಿಖೆ ಇನ್ನೂ ಮುಗಿದಂತೆ ಇರಲಿಲ್ಲ.
"ಇಲ್ಲ...ಇಲ್ಲ," ಅಂದೆ ಜೋರಾಗಿ ತಲೆ ಅಲ್ಲಾಡಿಸುತ್ತಾ.
"ಹೋಗು," ಎಂದು ಎಕ್ಸಿಟ್ ಕಡೆ ಕೈತೋರಿಸಿದ. ಬದುಕಿದೆಯಾ ಬಡಜೀವ ಅಂತ ನಿಟ್ಟುಸಿರು ಎಳೆದೆ.

ಅವನು ನನ್ನನ್ನು ಹೋಗಲು ಬಿಟ್ಟ ಮೇಲೆ ಸಿಕ್ಕಾಪಟ್ಟೆ ಧೈರ್ಯ ಬಂದುಬಿಟ್ಟಿತು! "ಎಕ್ಸ್‌ಕ್ಯೂಸ್ ಮಿ, ಸರ್, ಜೀರಿಗೆ ಇಲ್ಲೇ (ಅಮೇರಿಕದಲ್ಲೇ) ಅಂಗಡಿಗಳಲ್ಲಿ ಸಿಗುತ್ತೆ. ಅದರ ಮೇಲೆ ಯಾಕೆ

ಈ ರೆಸ್ಟ್ರಿಕ್ಷನ್?" ಎಂದು ಕೇಳೇ ಬಿಟ್ಟೆ!
"ಜೀರಿಗೆಯ ಮೇಲೆ ಅಲ್ಲ. ನಿಮ್ಮ ದೇಶದಲ್ಲಿ ಅದನ್ನು ಹಾರ್ವೆಸ್ಟ್ ಮಾಡಬೇಕಾದರೆ, ತುಂಬಾ ವೀಡ್ಸ್ ಸೇರಿಕೊಂಡು ಬಿಡುತ್ತೆ. ಒಂದು ತರಹ ಹುಲ್ಲಿನ ಬೀಜ. ಅವು ತುಂಬಾ ಇನ್ವೇಸಿವ್. ಒಮ್ಮೆ ಬೆಳೆದುಬಿಟ್ಟರೆ ಎಲ್ಲ ಬೆಳೆಯನ್ನೂ ಹಾಳು ಮಾಡುತ್ತವೆ. ಆದ್ದರಿಂದ ಆ ಬೀಜಗಳನ್ನು ಇಲ್ಲಿಗೆ ಬರದಂತೆ ತಡೆಯಬೇಕು," ಎಂದ.

ಆಗ ನಮ್ಮ ಬಳಿಗೆ ಬಂದಿದ್ದು ಯಾರಪ್ಪಾ ಅಂದರೆ ಪ್ಯಾಸ್‌ಪೋರ್ಟ್ ಇಲ್ಲದ ವ್ಯಕ್ತಿಯನ್ನು ಅರೆಸ್ಟ್ ಮಾಡಿ ಕರೆದುಕೊಂಡು ಹೋದನಲ್ಲಾ ಆ ಇಮ್ಮಿಗ್ರೇಶನ್ ಇನ್ಸ್‌ಪೆಕ್ಟರ್! ಈಗ ಮಹಾ ಧೈರ್ಯ ಬಂದು ಬಿಟ್ಟಿದ್ದ ನಾನು ಅವನೊಡನೆ ಮಾತು ಬೆಳೆಸಿದೆ. "ನೀವು ಸಿಂಗಪೂರ್ ಏರ್ಲೈನ್ಸಿನ ವಿಮಾನದಲ್ಲಿ ಆ ಪ್ಯಾಸ್‌ಪೋರ್ಟ್ ಇಲ್ಲದ ಪ್ರಯಾಣಿಕನನ್ನು ಹಿಡಿದಿರಲ್ಲಾ, ನಾನೂ ಅದೇ ವಿಮಾನದಲ್ಲಿದ್ದೆ. ನಿಮಗೆ ಹೇಗೆ ಗೊತ್ತಾಯ್ತು ಅವನು ಹೀಗೆ ಪ್ಯಾಸ್‌ಪೋರ್ಟ್ ಇಲ್ಲದೆ ಪ್ರಯಾಣಿಸುತ್ತಿದ್ದಾನೆ ಅಂತ?"

"ಅದೆಲ್ಲ ಟ್ರೇಡ್ ಸಿಕ್ರೆಟ್ಸ್," ಎಂದು ನಕ್ಕ. ಮತ್ತೆ ಮುಂದುವರೆಸಿದ, "ಅವನು ಪ್ಯಾಸ್‌ಪೋರ್ಟ್ ಇಲ್ಲದೇ ಪ್ಲೇನ್ ಹತ್ತಿರೋಕೆ ಸಾಧ್ಯವಿಲ್ಲ. ಯಾವುದೋ ಸುಳ್ಳು ಪ್ಯಾಸ್‌ಪೋರ್ಟ್ ಇಟ್ಕೊಂಡು ಹತ್ತಿರಬೇಕು. ಇಲ್ಲಿ ಚೆಕ್ ಮಾಡಿದಾಗ ಸಿಕ್ಕಿಬೀಳುತ್ತೀನಿ ಅಂತ ಅದನ್ನು ಪ್ಲೇನ್‌ನಲ್ಲಿ ಹರಿದುಹಾಕಿದ ಅಂತ ಕಾಣುತ್ತೆ. ಗಗನಸಖಿಯರಲ್ಲಿ ಯಾರೋ ನೋಡಿರಬಹುದು. ಆಮೇಲೆ ನಮಗೆ ತಿಳಿಸಿರುತ್ತಾರೆ."
"ಈಗ ಅವನಿಗೆ ಏನಾಗುತ್ತೆ?"
"ಅದೆಲ್ಲ ಕೋರ್ಟಿನಲ್ಲಿ ಇತ್ಯರ್ಥವಾಗುತ್ತೆ. ಹೀಗೆ ಎಷ್ಟೋ ಜನ ಅಮೇರಿಕಾಗೆ ಬರುವವರಿದ್ದಾರೆ," ಎಂದ.
"ಬಂದರೇನಂತೆ? ಅಮೇರಿಕ ದೇಶವನ್ನು ಕಟ್ಟಿದವರೇ ಇಮ್ಮಿಗ್ರಂಟ್ಸ್ ಅಲ್ಲವೇ? ಇವರಿಗೆ ಅಮೇರಿಕದಲ್ಲಿ ಜಾಗವಿಲ್ಲವೇ?" ಎಂದು ಕೇಳಿದೆ.
"ಕಾನೂನು ರೀತ್ಯಾ ಅಮೇರಿಕಾಕ್ಕೆ ಬಂದರೆ ಖಂಡಿತಾ ಜಾಗವಿದೆ. ಆದರೆ ಹೀಗೆ ಕಣ್ತಪ್ಪಿಸಿ ಬರುವವವರಲ್ಲಿ ಓದುಬರಹವಿಲ್ಲದವರು, ಸೋಮಾರಿಗಳು, ಸಮಾಜಕ್ಕೆ ಹೊರೆಯಾಗುವವರೇ ಜಾಸ್ತಿ. ಪೊಲಿಟಿಕಲ್ ಅಸ್ಸೈಲಮ್ ಕೇಳಿ ಬರುವವರೂ ಇದ್ದಾರೆ. ಟೆರ್ರರಿಸ್ಟ್ಸ್ ಕೂಡ ಹೀಗೆ ಕಣ್ತಪ್ಪಿಸಿ ಬರ್ತಾರೆ. ಅದಕ್ಕೇ ನಾವು ಹುಷಾರಾಗಿರಬೇಕು."

ಅವನ ಮಾತು ಮೊದಲು ನಡೆದ ಕಸ್ಟಮ್ಸ್ ಘಟನೆಗೆ ಹೊಸ ಅರ್ಥ ತಂದುಕೊಟ್ಟಿತು. ಅಮೇರಿಕಾ ಇಮಿಗ್ರೆಂಟ್ಸ್ ದೇಶ. ಈ ದೇಶವನ್ನು ಬೆಳೆಸಿದವರೇ ಬೇರೆ ಬೇರೆ ದೇಶದ ಜನರು. ದೇಶದಿಂದ ಜನ ಬೆಳೆದಿದ್ದಾರೆ, ಬೆಳೆಯುತ್ತಿದ್ದಾರೆ, ಜನರಿಂದ ದೇಶ ಬೆಳೆದಿದೆ. ಲೀಗಲ್ ಆಗಿ ಬಂದ ಜನರನ್ನು ಕೈಚಾಚಿ ಸ್ವಾಗತಿಸುತ್ತೆ. ಅದಕ್ಕೇ ಅಷ್ಟು ತಪಾಸಣೆ ಮಾಡಿ ಜಾಗರೂಕತೆಯಿಂದ ಒಳಗೆ ಬರುವವರನ್ನು ಬಿಡುತ್ತಾರೆ.

"ಸರಿ ಅರ್ಥವಾಯಿತು. ಕಾನೂನು ರೀತ್ಯ ಬಂದು ದೇಶಕ್ಕೆ ಉಪಕಾರಮಾಡುವಂತಹವರನ್ನು ಅಮೇರಿಕ ಸ್ವಾಗತಿಸುತ್ತದೆ. ಆದರೆ ಕಣ್ತಪ್ಪಿಸಿ ಒಳಗೆ ನುಸುಳಿ, ದೇಶಕ್ಕೆ ಕಷ್ಟ ತರುವ ಅಥವಾ ನಾಶ ಮಾಡುವ ಪ್ರವೃತ್ತಿಯವರನ್ನು ಅಮೇರಿಕ ದೂರ ಇರಿಸುತ್ತದೆ. ಜೀರಿಗೆಯ ಜೊತೆ ಬರುವ ವೀಡ್ಸ್‌ಗಳನ್ನು ತಡೆಯುವಂತೆ, ಅಲ್ಲವೇ?" ಎಂದೆ, ಕಸ್ಟಮ್ಸ್ ಆಫೀಸರನ್ನು ನೋಡುತ್ತ.

ಅವನು ನಗುತ್ತಾ, "ಹೌದು, ನಮಗೆ ಜೀರಿಗೆ ಜೊತೆ ಬರುವ ವೀಡ್ಸ್ ಹೇಗೆ ಬೇಡವೋ ಅದೇ ರೀತಿ ಕಾನೂನಿನ ಕಣ್ತಪ್ಪಿಸಿ ದೇಶದೊಳಗೆ ನುಸುಳಿ ಹಾನಿಮಾಡುವ ಜನರೂ ಬೇಡ," ಎಂದು ನನ್ನನ್ನು ಎಕ್ಸಿಟ್ ಬಳಿ ಬಿಟ್ಟೊಟ್ಟ.

ಈ ಬೃಹತ್ ದೇಶವನ್ನು ರಕ್ಷಿಸುವುದಕ್ಕೆ, ಜೋಪಾನ ಮಾಡುವುದಕ್ಕೆ ಇವರ ಈ ಎಚ್ಚರಿಕೆ, ಈ ಮುಂಜಾಗರೂಕತೆ ಸಾಕೆ ಎಂಬ ಯೋಚನೆಗಳ ಸುರುಳಿ ಏಳುವ ಮುನ್ನ, ಹೊರಗೆ ನನಗಾಗಿ ಕಾಯುತ್ತಿದ್ದ ನನ್ನವರು ಕಣ್ಣಿಗೆ ಬಿದ್ದುದರಿಂದ, ಆ ಸಂಶಯಗಳನ್ನು ಅಲ್ಲಿಯೇ ಬಿಟ್ಟು ಓಡಿದೆ - ನನ್ನ ಮಟ್ಟಿನ ಸುಭದ್ರತೆಯ ಎಡೆಗೆ!

◇

**<u>ಗೀತೆಯಲ್ಲಿ ಹೇಳಿತ್ತೇ?</u>**

ಮುಪ್ಪು ಬಂದಾಗ:

ದೇಹ
ಬಾಡಿಬಿಡುವುದು
ಸಹಜಧರ್ಮ

ಆತ್ಮವೂ
body ಬಿಡುವುದು
ಪುನರ್ಜನ್ಮ

--ಶ್ರೀವತ್ಸ ದುಗ್ಗಾಪುರ






# ಸೀತಾನ್ವೇಷಣ

**ಅನಿಲ ಜೋಶಿ**
ಸ್ಯಾನ್ ಹೋಸೆ, ಕ್ಯಾಲಿಫೋರ್ನಿಯ, *aijoshi_AT_gmail.com*

ದಟ್ಟಡವಿಯ ಮರಗಿಡಗಳ ನಡುವೆ
ಬೆಟ್ಟಗಳಡಿಯಲಿ, ಗಿರಿಶಿಖರದೆತ್ತರದಲಿ
ಮತ್ತೆ ಕಣಿವೆಕಂದರಗಳ ಆಳದಲಿ
ಬಟ್ಟಬಯಲಲಿ ಕಣ್‌ದೃಷ್ಟಿಯು ಹರಿದೆಡೆ
ಎತ್ತ ನೋಡಿದರು ಕಾಣಲಿಲ್ಲ, ಹತ್ತು ತಲೆಯ
ದುಷ್ಟ ಹೊತ್ತೊಯ್ದ ಸೀತೆಯ , ರಾಮನ
ಪಟ್ಟದರಸಿಯ, ಜನಕಾತ್ಮಜೆಯ.

ಜಾಂಬವಂತ ಅಂಗದ ನಲ ನೀಲ ಹನು-
ಮಂತ ಮುಂತಾದ ಕಪಿವೀರರು ಅತಿ
ಚಿಂತೆಯಿಂದಲಿ ಕಾಡುಮೇಡಲೆಯುತ್ತಿರೆ ಕಂಡರು
ಸಂಪಾತಿಯನು. ಜಟಾಯುವಿನಣ್ಣ ಹೇಳಿದ, ರಾವಣನ
ಕಂಡೆನು, ರಾಮ ರಾಮನೆಂದು ವಿಲಪಿಸುತಿದ್ದ ಸೀತೆಯನೂ
ಲಂಕೆಯಲಿಹಳು ವೈದೇಹಿ ಸುತ್ತಲು ಮುತ್ತಿಹ ರಕ್ಕಸಿಯ-
ರಿಂ ಪರಿ ಪರಿ ಉಪದ್ರವ ತಾ ನಿತ್ಯದಿ ತಾಳುತಿಹಳು

ನೂರು ಯೋಜನದೀ ಮಕರಾಲಯವ ದಾಟಲು ಸ-
ಮರ್ಥರಾರೀ ಪಂಗಡದಲಿ ಎಂದು ವಿಚಾರಿಸೆ ಈಗಲೆ
ಹಾರಿ ಹೋಗಬಲ್ಲೆ ನಾ ಆ ಕಡೆಗಾದರೆ
ಮರಳಿ ಬಂದೇನೆ ಅರಿಯೆ ಎಂದನು ಅಂಗದನು. ಇ-
ನ್ಯಾರಿಹರು ಹಾರಬಲ್ಲವರೀ ದೂರವ
ಮಾರುತನಂದನ ನೀನೆ ಸಮರ್ಥನು ಈ
ಕಾರ್ಯಕೆ ಏಳೆನ್ನೆನುತ ಹನುಮಂತನನೆಬ್ಬಿಸಿದ ಜಾಂಬವಂತ

ಹಿಂದೆ ನಸುಕೆಂಪಿನ ಸೂರ್ಯನನೆ ಕಿತ್ತಳೆಯೆಂದು
ಛಂಗನೆ ನೆಗೆದು ಕಿತ್ತಲು ಹೋದ ನಿನ್ನ ಬಾಲಾಟಗಳ
ಕಂಡ ಮುನಿಗಣ ವರಶಾಪವನಿತ್ತಿತು ನಿನ್ನ ಪ್ರ-
ಚಂಡ ಬಲದರಿವಿರಲಿ ನಿನಗೆಂದು. ಲಂಘಿಸಿ
ಲಂಕೆಗೆ ಯಶಸ್ವಿ ಮರಳಲು ನೀನೆ ಸಮರ್ಥನು. ಏಳು
ಸಿಂಹನಾದವನೆ ಮಾಡು, ವ್ಯಾಳೆ ಮೀರುತಿದೆ ಲಂಕೆಯ ಸೇರು
ಎಂದೆಚ್ಚರಿಸಲು ಹನುಮನೆದ್ದನು ಹೂಂಕರಿಸುತಲಿ.

ಕಾರ್ಯವೊಂದಾಗಲತಿ ಅವಶ್ಯಕವು ಮಹಾ
ಪುರುಷಪ್ರಯತ್ನವು. ನನ್ನಿಂದಾಗಲೀ ಕೆಲಸವದಕೆ
ಪಾತ್ರನು ನಾನಾಗಿರಬೇಕು ಎಲ್ಲಕು ಮಿಗಿಲಾಗಿರಬೇಕು ಶ್ರೀ
ಹರಿಯ ಇಚ್ಛೆಯು. ಇಂದು ನನ್ನಿಂದಾಗಲಿ ಅ-
ಪರಿಮಿತ ಯತ್ನವು. ರಾಮನಿತ್ತ ಗುರುತಿನುಂಗುರ
ಸಾರುತಿದೆ ಪಾತ್ರನು ನಾನೆಂದು. ಸತ್ಯಸಂಕಲ್ಪವಿದು ಶ್ರೀ-
ಹರಿಯ ಕಾರ್ಯವು ಸೋಲೆಂಬುದೆ ಇಲ್ಲೆನುತ, ಒತ್ತಿ
ಗಿರಿಯನು ಹಾರಿದ ಆ ರಾಮ ಬಿಟ್ಟ ಶರದಂತೆ.

<u>೭೫ನೇ ಪುಟದಲ್ಲಿದ್ದ ಪದಚಕ್ರದ ಉತ್ತರಗಳು :</u>

[illegible]
[illegible]

# ವಿರೋಧಾಭಾಸ ಮತ್ತು ಕನಸು



*ನಮ್ಮದು ಜನಗಳ ದೇಶವಲ್ಲ, ಕಾನೂನಿನ ಮತ್ತು ಸುಃಸ್ಥಿತಿಯ ದೇಶವೆಂದು ಘಂಟಾಘೋಷವಾಗಿ ಸಾರುತ್ತೇವೆ; ನಂತರ ಯಾವ ಯಾವ ನಿಯಮಗಳನ್ನು ಉಲ್ಲಂಘಿಸಿದರೆ ಸಿಕ್ಕಿ ಹಾಕಿಕೊಳ್ಳುವುದಿಲ್ಲವೋ, ಅಂತಹ ಸಕಲ ಕಾನೂನುಗಳನ್ನೂ ಮುರಿಯುತ್ತೇವೆ!*


**ಆಂಗ್ಲ ಮೂಲ : ಜಾನ್ ಸ್ಟೈನ್‌ಬೆಕ್**
**ಕನ್ನಡಕ್ಕೆ : ವಿಶ್ವನಾಥ್ ಹುಲಿಕಲ್**
ಕುಪರ್ಟೀನೊ, ಕ್ಯಾಲಿಫೋರ್ನಿಯ, *vhulikal_AT_yahoo.com*

**ಆಂಗ್ಲ ಮೂಲ: ಜಾನ್ ಸ್ಟೈನ್‌ಬೆಕ್, ನೊಬೆಲ್ ಪ್ರಶಸ್ತಿ ಪುರಸ್ಕೃತರು**
Copyright (C) 1966 by John Steinbeck
Copyright renewed (C) 1994 by Elaine Steinbeck and Thom Steinbeck
Reprinted with the permission of McIntosh and Otis, Inc.
Book: "America and Amricans" by John Steinbeck, Viking Press, 1966.
Essay: " Paradox and Dream "

ಸ್ವರ್ಣಸೇತುವಿನ ಮುದ್ರಿತ ಪ್ರತಿಯಲ್ಲಿದ್ದ ಈ ಪುಟದ ಮಾಹಿತಿಯನ್ನು ಉದ್ದೇಶಪೂರ್ವಕವಾಗಿ ಅಂತರ್ಜಾಲದ ಆವೃತ್ತಿಯಿಂದ ತೆಗೆಯಲಾಗಿದೆ.

ಸ್ವರ್ಣಸೇತುವಿನ ಮುದ್ರಿತ ಪ್ರತಿಯಲ್ಲಿದ್ದ
ಈ ಪುಟದ ಮಾಹಿತಿಯನ್ನು
ಉದ್ದೇಶಪೂರ್ವಕವಾಗಿ ಅಂತರ್ಜಾಲದ
ಆವೃತ್ತಿಯಿಂದ ತೆಗೆಯಲಾಗಿದೆ.

**ಸ್ವರ್ಣಸೇತುವಿನ ಮುದ್ರಿತ ಪ್ರತಿಯಲ್ಲಿದ್ದ ಈ ಪುಟದ ಮಾಹಿತಿಯನ್ನು ಉದ್ದೇಶಪೂರ್ವಕವಾಗಿ ಅಂತರ್ಜಾಲದ ಆವೃತ್ತಿಯಿಂದ ತೆಗೆಯಲಾಗಿದೆ.**





# ಅಮೇರಿಕದಲ್ಲಿ ಬೇವು ಬೆಲ್ಲ


**ಮಧುಕಾಂತ್ ಕೃಷ್ಣಮೂರ್ತಿ**

ಕುಪರ್ಟೀನೊ, ಕ್ಯಾಲಿಫೋರ್ನಿಯ, *madhukanthk_AT_yahoo.com*


*ಇನ್ನು ಈ ಸಿಲಿಕಾನ್ ಕಣಿವೆಯಲ್ಲಿ ಯಾರನ್ನು ಕೇಳಿದರೂ ಎಲ್ಲರದೂ ಒಂದೇ ಗೋಳು. ಯಾವಾಗ ನೋಡಿದರೂ ಆಫೀಸ್ ಕೆಲಸ. ಹಗಲು, ರಾತ್ರಿ ಹಾಗು ವಾರಾಂತ್ಯದಲ್ಲಿ - ಗಂಟೆಗಟ್ಟಲೆ ಕೆಲಸ. ಗಂಟೆಗೆ ಇಂಗ್ಲೀಷ್ ಪದ ಗೊತ್ತಲ್ಲ - ಬೆಲ್.*

ಈ ಬಾರಿ ಏಪ್ರಿಲ್‌ನಲ್ಲಿ ಭಾರತಕ್ಕೆ ಪ್ರವಾಸ ಹೋದ ಪ್ರಯುಕ್ತ ಕೆಕೆಎನೆಸಿಯ ಯುಗಾದಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಾಗಲಿಲ್ಲ. ಆದರೆ ದಟ್ಸ್‌ಕನ್ನಡದಲ್ಲಿ ಪ್ರಕಟವಾದ ಆ ಕಾರ್ಯಕ್ರಮದ ವರದಿಯ ಕೊನೆಯ ಸಾಲು ನನ್ನ ಗಮನ ಸೆಳೆಯಿತು. ಲೇಖಕ ಪ್ರಭು ಮೂರ್ತಿ ಅವರು ಬರೆದಂತೆ ಕಾರ್ಯಕ್ರಮದ ಕೊನೆಯಲ್ಲಿ ಭಾರತದ ಅಧಿನಾಯಕನಿಗೂ ಹಾಗೂ "ಲ್ಯಾಂಡ್ ಅಫ್ ದಿ ಬೇವ್"ಗೂ ನಮನ ಸಲ್ಲಿಸಿದರಂತೆ. ಈ ಅಚಾತುರ್ಯದ ಬಗ್ಗೆ ಪ್ರಸ್ತಾಪಿಸಿದಾಗ ಪ್ರಭು ಅವರು ಗಾಬರಿಯಾಗಿ ಇದರಲ್ಲಿ ತಮ್ಮದೇನೂ ತಪ್ಪಿಲ್ಲವೆನ್ನುತ್ತ, ಮುದ್ರಾರಕ್ಕಸನತ್ತ ಅನುಮಾನದ ಕಿಡಿ ಹಾರಿಸಿದರು. ಅವರಿಗೆ ಅಮೇರಿಕಾದಲ್ಲಿ ತಪ್ಪಕ್ಷರದ ಅಪರಾಧಕ್ಕೆ ಇರುವ ಕಠಿಣ ಶಿಕ್ಷೆಯ ಭಯವಾಗಿರಬೇಕು. ಹೆಚ್ಚಿನ ವಿಚಾರಣೆ ನಡೆಸಲಾಗಿ ಈ ತಪ್ಪಿನ ಹಿಂದೆ ಮುದ್ರಾರಕ್ಕಸನ ಕೈವಾಡ ಇರುವುದು ಮನದಟ್ಟಾಯಿತು. ಯುಗಾದಿಯ ಸಮಯದಲ್ಲಿ land of milk and honey ಉರುಫ್ land of the brave ಅರ್ಥಾತ್ good old US of Aಯನ್ನು ಹಾಗೆ ಕರೆಯುವ ಉದ್ದೇಶವಿಲ್ಲದೆಯೆ, "ಲ್ಯಾಂಡ್ ಅಫ್ ದಿ ಬೇವ್" ಎಂದು ಕರೆದಿರುವುದು ಒಂದು ಮಾರ್ಮಿಕ ಸಂದೇಶವೇ ಸರಿ. ಇದು ಮುದ್ರಾರಾಕ್ಷಸನ freudian slip ಅಲ್ಲದೆ ಮತ್ತೇನು? ಯುಗಾದಿ ಹಬ್ಬವನ್ನು ಬೆಂಗಳೂರಿನಲ್ಲಿ ಅನೇಕ ವರುಷಗಳಿಂದ ಆಚರಿಸಿದ ಫಲವಾಗಿ ನಮ್ಮದು land of bevu bella ಎಂದು ಅರಿತು ಬಂದಿದ್ದೆ. ಆದರೆ ಅಮೇರಿಕಾದ ಬಗ್ಗೆ ಹೇಗೆ ಎಂದು ಯೋಚಿಸಿರಲಿಲ್ಲ. ಎನ್ನಾರೈಗಳ ಧ್ವನಿಯಾಗಿರುವ ದಟ್ಸ್‌ಕನ್ನಡದ ಹೊಟ್ಟೆಯಲ್ಲೆಲ್ಲೊ ಅಡಗಿದ್ದು ಈ ಸತ್ಯ ಈಗ ಹೊರಬಿದ್ದಿದ್ದೆ. ಆ ಗಾಢಾರ್ಥದ ಗುಟ್ಟು ಇಷ್ಟೆ, "America is the land of ಬೇವ್ [and ಬೆಲ್]."

ಈ ಗಹನವಾದ ವಾಕ್ಯ ಏನು ಹೇಳುತ್ತಿದೆ? ಮೊದಲಿಗೆ land of the ಬೇವ್ ಹೇಗೆ ಬಂತು ನೋಡೋಣ. ಇದು ತೀರ ಸುಲಭದ್ದು. ನನ್ನ ಅಭಿಪ್ರಾಯದಲ್ಲಿ, "ಲ್ಯಾಂಡ್ ಆಫ್ ಮಿಲ್ಕ್ ಎಂಡ್ ಹನಿ"ಯಾದಂತಹ ಅಮೇರಿಕಾದಲ್ಲಿ ಬಾಳಲು ಮುಕ್ಕಾಲು ಪಾಲು ಭಾರತೀಯರಿಗೆ ಇರಲೇಬೇಕಾದ ಒಂದು ಅರ್ಹತೆ ಎಂದರೆ ಜೀವನದಲ್ಲಿ Stressಉ. ಬೇವು ಈ ಕಹಿಸತ್ಯದ ಸಂಕೇತವಿರಬಹುದೆ? ಹಾಲು ಜೇನಿನ ಕಣಿಕೆಯಲ್ಲಿ ಅಡಗಿರುವುದು ಬೇವಿನ ಹೂರಣವೆ? ಅಥವಾ ಅಮೇರಿಕಾದ ಸಂಕೇತಗಳಾದ ಕೋಕ್ ಮತ್ತು ಪೆಪ್ಸಿಯಂತೆ ಬೇವ್‌ರೇಜ್‌ನ ಸಂಕೇತವೆ? ರೋಡ್ ರೇಜಿನಂತೆ ಈ ಬೇವ್‌ರೇಜ್ ಅಮೇರಿಕ ನಮಗಿತ್ತ ಬಳುವಳಿ. ಅಮೇರಿಕದಲ್ಲಿರುವ ಕರಿಯರು ಈ stressಗೆ ಮಿಕ್ಕವರಿಗಿಂತ ಹೆಚ್ಚಾಗಿ ಬಲಿಯಾಗುತ್ತಾರೆ ಎಂಬುದು ಯಾರೋ ಸಂಶೋಧಕರು ಪತ್ತೆ ಮಾಡಿರುವ ಒಂದು ಅಂಶ. ಈ ಬೇವು, Stress ಅಥವಾ rageಗೆ ಸಂಕೇತವಿರಬಹುದು ಎಂದೇನೋ ಹೇಳಿದೆವು. ಆದರೆ ಕರಿಯ ಜನಾಂಗದಲ್ಲಿ ಸಾಮಾನ್ಯವಾಗಿರುವ ತೊಂದರೆಗಳಿಗೆ ಅಂದರೆ ಕರಿbevrageEಗೂ ನಮ್ಮ ಕರಿಬೇವಿಗೂ ಯಾವುದೇ ಸಂಬಂಧ ಕಲ್ಪಿಸಬಾರದು ಎನ್ನುವುದನ್ನು ಇಲ್ಲಿ ಮರೆಯಬಾರದು.

ಇನ್ನು ಬೆಲ್‌ಗೆ ಬರೋಣ. ತಕ್ಷಣ ಹೊಳೆಯುವುದು TACO BELL.




ಅಮೇರಿಕದಲ್ಲಿರುವ ಭಾರತೀಯರು - ಘಂಟೆಗೆ ೭ ಡಾಲರ್ ಸಂಪಾದಿಸುವ ವಿದ್ಯಾರ್ಥಿಗಳು, ನೂರೈವತ್ತು ಕೇಳುತ್ತಿದ್ದ ಕನ್ಸಲ್ಟೆಂಟುಗಳು, ಕಾರಲ್ಲಿ vacation ಹೋಗುವ ಮಂದಿ, ಗ್ಯಾಸ್ ಸ್ಟೇಶನ್ ಪಂಜಾಬಿಗಳು, ಮೋಟೆಲ್ ಗುಜರಾತಿಗಳು, ವೀಸಾ ಸಿಕ್ಕ ಭಾಗ್ಯಶಾಲಿ ರಾಜಕಾರಣಿಗಳು - ಎಲ್ಲ ಹೊಟ್ಟೆ ಹಸಿವಾದಾಗ ನಿರ್ಯೋಚನೆಯಿಂದ ನುಗ್ಗುವುದು TACO BELLಗೇನೆ. ತಿನ್ನುವುದು ಅದೇ Seven layered burritoವನ್ನು. ತಿನ್ನಲು ಏನೋ ಖಾರವಾಗಿ ಸಿಗುತ್ತಲ್ಲ - ಅಷ್ಟೇ ಸಾಕು. ಮೆಕ್ಸಿಕೊದ ಪದ್ಧತಿಯ ಅಡುಗೆಯಾದರೂ TACO BELL ಅಮೇರಿಕದ ಜೀವನದ ಒಂದು ಮುಖ್ಯ ಎಳೆ.

ನೆನಪಿಗೆ ಬರುವ ಇನ್ನೊಂದು ಬೆಲ್ ಎಂದರೆ ಫಿಲಡೆಲ್ಫಿಯಾದ ಒಡೆದ ಲಿಬರ್ಟಿ ಬೆಲ್. ೧೭೭೬ ಜುಲೈ ೮ರಂದು ಅಮೇರಿಕ ತನ್ನ ಸ್ವಾವಲಂಬನೆಯ ಘೋಷಣೆಯನ್ನು ಬಂದು ಕೇಳಲು, ತನ್ನ ಜನತೆಗೆ ಈ ಘಂಟೆಯನ್ನು ಮೊಳಗಿಸಿ ಕರೆ ನೀಡಿತಂತೆ. ಅದೇಕೆ ಒಡೆಯಿತು ಎನ್ನುವುದು ಬೇರೆ ವಿಷಯ.



೭೦ರ ದಶಕದಲ್ಲಿ ಪ್ರಸಿದ್ಧಿಯಲ್ಲಿದ ಬೆಲ್‌ಬಾಟಮ್ ಸಹ ಅಮೇರಿಕದ ಕೊಡುಗೆ. ಅಮೇರಿಕ ಎಂದ ಮೇಲೆ ಹಾಲಿವುಡ್ಡನ್ನು ಮರೆಯಲಾಗುವುದೆ? ಹಾಲಿವುಡ್ಡಿನ ತಾರೆಗಳು ವಾಸ ಮಾಡುವುದು ಎಲ್ಲಿ ಗೊತ್ತಲ್ಲ! ಬೇವರ್ಲಿ ಹಿಲ್ಸ್ ಮತ್ತು ಬೆಲ್ ಏರ್. ಓಹೊ! ಹಾಗಾದರೆ ಹಾಲಿವುಡ್ ಎನ್ನುವುದು ಬೇವ್ ಮತ್ತು ಬೆಲ್ ಮೇಳೈಸಿರುವ ಜಾಗ.

ಇನ್ನು ಈ ಸಿಲಿಕಾನ್ ಕಣಿವೆಯಲ್ಲಿ ಯಾರನ್ನು ಕೇಳಿದರೂ ಎಲ್ಲರದೂ ಒಂದೇ ಗೋಳು. ಯಾವಾಗ ನೋಡಿದರೂ ಆಫೀಸ್ ಕೆಲಸ. ಹಗಲು, ರಾತ್ರಿ ಹಾಗು ವಾರಾಂತ್ಯದಲ್ಲಿ - ಗಂಟೆಗಟ್ಟಲೆ ಕೆಲಸ. ಗಂಟೆಗೆ ಇಂಗ್ಲೀಷ್ ಪದ ಗೊತ್ತಲ್ಲ - ಬೆಲ್. ಗಂಟೆಗಟ್ಟಲೆ ಕೆಲಸದಿಂದ ಮತ್ತೆ stressಉ. ಅದೇ ಬೆಲ್, ಅದೇ ಬೇವು. ಈ ರೀತಿ ಹೊರಳಿ ಹೊರಳಿ ಬೇವ್ ಮತ್ತು ಬೆಲ್ ಒಂದಕ್ಕೊಂದು ಹೊಂದಿಕೊಂಡಿರುವುದು ಕಾಣಲು ಸಿಗುವುದು - only in America - the land of bev and bel.

*ಛಾಯಾಚಿತ್ರಗಳು: ಪ್ರತಿಭಾ ಕೇಶವಮೂರ್ತಿ ಹಾಗೂ ಮಧುಕಾಂತ್ ಕೃಷ್ಣಮೂರ್ತಿ.*
*(ಪೂರಕವಾದ ಓದಿಗೆ, ಪುಟ ೧೪ರಲ್ಲಿರುವ ಯುಗಾದಿಯ ವರದಿಯನ್ನು ನೋಡಬಹುದು)*

◈

**ಲಂಚಗಣಿತ**

ಹತ್ತು
ಪ್ಲಸ್
ಹತ್ತು
ನೂರ್ಹತ್ತು...

ಅಲ್ಲ್ ಹತ್ತು,
ಇಲ್ಲ್ ಹತ್ತು,

ಮೂರ್ಹೊತ್ತೂ...

- ಶ್ರೀವತ್ಸ ದುಗ್ಲಾಪುರ

